ಶ್ರೀ ಕೆ. ಎಂ. ನಾಗಣ್ಣ.—ಮಾನ್ಯ ಅಧ್ಯಕ್ಷಣಿಯವರೇ, ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. ಈ ವಿಚಾರವನ್ನು ಶನಿವಾರ ದಿವಸವೇ ನಭೆಗೆ ತರೋಣ ಎಂದು ಪ್ರಯತ್ನ ಪಟ್ಟೆ, ಆಗಲಿಲ್ಲ, ಇಂದ ಆ ವಿಷಯವನ್ನು ನಭೆಯ ಗಮನಕ್ಕೆ ತರುತ್ತೇನೆ, ಅದೇನಂದರೆ ಒಬ್ಬ ಐ. ಟಿ. ಐ. ಕಾರ್ಮಿಕ ಶನಿವಾರ ಬೆಳಗೆ 6 ಗಂಟೆಗೆ ನನಗೆ ಟೆಲಿಫೋನ್ ಮಾಡಿದ ಆತನ ಹೆಸರು ರಾಜಶೇಖರ್. ಅವನು ಅಲ್ಲಿ ಕ್ಯಾಷುಯಲ್ ಲೇಬರರ್ ಆಗಿದ್ದಾನೆ. ಆತನಿಗೆ ದಿನಗೂಲಿ 3 ರೂಪಾಯಿ ಬರುತ್ತದೆ. ಅವನ ಸಂಸಾರ ಗಂಡ ಹೆಂಡತಿ ಮತ್ತು 4 ಮಕ್ಕಳು ಇದ್ದಾರೆ. ವಿಷಯ ಏನೆಂದರೆ ಅವನು ಶುಕ್ರವಾರ ದಿವಸ ಬಜಾರ್‌ಗೆ ಎಣ್ಣೆ ತರುವುದಕ್ಕೆ ಹೋದನು. ಅವನು ತುಪ್ಪ ನೋಡಿ ಬಹಳ ದಿವಸವಾಗಿ ಹೋಗಿದೆ ಮತ್ತು ಅವನಿಗೆ ಬೆಣ್ಣೆ ಅಂದರೆ ಗೊತ್ತೇ ಇಲ್ಲ. ಅವನು ಹೇಳಿದ ಕಡ್ಲೆಕಾಯಿ ಎಣ್ಣೆ ಒಂದು ಕೆ. ಜಿ.ಗೆ 7-80 ಪೈಸೆ ಆಗಿದೆ, ಅಕ್ಕಿ ಒಂದು ಕೆ. ಜಿ. ಗೆ 2-50 ಪೈಸೆ ಆಗಿದೆ ರಾಗಿ ಒಂದು ಕೆ. ಜಿ.ಗೆ 1-20 ಪೈಸೆ ಆಗಿದೆ, ಈ ರೀತಿ ಆದರೆ ನಾನು 4 ಮಕ್ಕಳು ಸಾಕುವುದು ಹೇಗೆ ? ಹಿಂದೆ ಬೆಳಗಾಂನಲ್ಲಿ ಲೂಟಿ ಮಾಡಿದರಲ್ಲಾ ಆರೀತಿ ಇಲ್ಲೂ ಆಗಬೇಕೇ ? ಇದರಲ್ಲಿ ನಿಮ್ಮ ಅಭಿಪ್ರಾಯ ಏನು ಎಂದು ಕೇಳಿದ. ಈ ವಿಷಯವನ್ನು ಆಹಾರ ಸಚಿವರ ಗಮನಕ್ಕೆ ತಂದರೆ ಅವರ ಕೈಯಲ್ಲಿ ಆಗುವುದಿಲ್ಲ, ಆದುದರಿಂದ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಇದನ್ನು ತರುತ್ತಿದ್ದೇನೆ. ದಿನೇ ದಿನೇ ಬೆಲೆಗಳು ಏರುತ್ತಾ ಇವೆ ಈ ರೀತಿ ಆಗದಹಾಗೆ ಮಾಡಬೇಕು. ವ್ಯಾಪಾರಗಾರರಿಗೆ ಅಶ್ರಯ ಕೊಡಬಾರದು. ಮಂತ್ರಿಗಳು ತಿನ್ನುವ ಅಕ್ಕಿ 3-30 ಪೈಸೆ ಇದ್ದದ್ದು 3-80 ಪೈಸೆ ಆಗಿದೆ, ಕೇವಲ 50 ಪೈಸೆ ಮಾತ್ರ ಜಾಸ್ತಿಯಾಗಿದೆ, ಆದರೆ ಬಡವರು ತಿನ್ನುವ ಅಕ್ಕಿ 1-25 ಪೈಸೆ ಇದ್ದದ್ದು 2-50 ಪೈಸೆ ಆಗಿದೆ. ಆದುದರಿಂದ ದಯಮಾಡಿ ಈ ಬೆಲೆಗಳನ್ನು ಇಳಿಸಲಿಕ್ಕೆ ತಕ್ಕ ಏರ್ಪಾಡು ಮಾಡಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈರೀತಿ ಜನಗಳಿಗೆ ತಿನ್ನಲಿಕ್ಕೆ ಆಹಾರ ಅಭಾವ ಇದ್ದರೂ ಕೂಡ ಬೆಂಗಳೂರಿನಲ್ಲಿ 9 ತಿಂಗಳು ರೇಸ್ ನಡೆಸುವುದಕ್ಕೆ ಹಣಕಾಸಿನ ಇಲಾಖೆ ಯೋಚಿಸಿದೆ ಎಂದು ಕೇಳಿದ್ದೇನೆ. ದಯವಿಟ್ಟು ಈ ಬಗ್ಗೆ ಯೋಚನೆ ಮಾಡಬೇಕು ಎಂದು ಹೇಳುತ್ತೇನೆ. ಮೈಸೂರಿನಲ್ಲಿ 2 ತಿಂಗಳು ಬಿಟ್ಟರೆ ಇನ್ನು 7 ತಿಂಗಳು ಇಲ್ಲಿ ರೇಸ್ ಮಾಡುತ್ತಾರೆ. ಬಾಂಬೆ ಕಲ್ಕತ್ತಾ ಇಲ್ಲಿ 3-4 ತಿಂಗಳು ರೇಸ್ ಇದೆ. ಇಲ್ಲಿ 9 ತಿಂಗಳು ರೇಸ್ ಮಾಡಬೇಕು ಅಂತ ಇದ್ದೇವೆ. ಇನ್ನೂ ಫೈನಲೈಸ್ ಆಗಿಲ್ಲ ಎಂದು ಮಾನ್ಯ ಕೇಳಿದೆ. ಆದುದರಿಂದ ನಾನು ಈ ಬಗ್ಗೆ ಹೇಳುವುದು ಏನೆಂದರೆ ಬೆಂಗಳೂರಿನಲ್ಲಿ ಯಾವುದೇ ಕಾರಣದಿಂದ ಆಗಲಿ ವಿಂಟರ್ ರೇಸ್ ಆಗಕೂಡದು ಎಂದು ಹೇಳುತ್ತೇನೆ. ಏಕೆಂದರೆ ಈ ಲಾಟರಿ ಅನ್ನುವ ಒಂದು ಸ್ಕೀಮ್ ತೆಗೆದುಕೊಂಡು ಬಂದು ಎಷ್ಟೋ ಬಡಜನಗಳು ಈಗಾಗಲೇ ಲಾಟರಿಯಾಗಿದ್ದಾರೆ. ಇನ್ನು ಇಲ್ಲಿ 9 ತಿಂಗಳು ರೇಸ್ ನಡೆಸುವುದಾದರೆ ಜನರಿಗೆ ತಿನ್ನಲಿಕ್ಕೂ ಕಷ್ಟಪಡಬೇಕಾಗುವ ಸಂದರ್ಭ ಬರುತ್ತದೆ. ಅಲ್ಲರುವ ಸ್ಟುವರ್ಡ್‌ಗಳು ಆಗರ್ಭ ಶ್ರೀಮಂತರು, ಲಕ್ಷಾಧೀಶ್ವರರು, ಶ್ರೀಮಂತರಿಗೆ ಬಡವರ ಕಷ್ಟ ಗೊತ್ತಾಗುವುದಿಲ್ಲ. ಆದುದರಿಂದ ಮುಖ್ಯ ಮಂತ್ರಿಗಳಲ್ಲಿ, ಪಾರ್ಥಿಸಿಕೊಳ್ಳುತ್ತೇನೆ, ದಯವಿಟ್ಟು ಇದಕ್ಕೆ ಅವಕಾಶ ಮಾಡಿಕೊಡಬೇಡಿ ಎಂದು. 3 ತಿಂಗಳು ರೇಸ್ ನಡೆದರೇನೆ ಎಷ್ಟೋ ಜನಗಳು ನತ್ತು ಹೋಗುತ್ತಾರೆ, ಇನ್ನು 9 ತಿಂಗಳು ನಡೆದರೆ ಜನರಿಗೆ ಬಕಳ ಅನ್ಯಾಯ ಮಾಡಿದಂತಾಗುತ್ತದೆ. ಆದುದರಿಂದ ತಮ್ಮ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. 9 ತಿಂಗಳು ರೇಸ್ ನಡೆಯಲಿಕ್ಕೆ ತಾವು ಅವಕಾಶ ಮಾಡಿ ಕೊಡುವುದಾದರೆ ಬೆಂಗಳೂರಿನಲ್ಲಿರುವ ಜನರು ಮತ್ತು ವಿಧಾನಸಭಾ ಸದಸ್ಯರೂ ಎಲ್ಲರೂ ಸೇರಿ ಇದನ್ನು ತಡೆಗಟ್ಟಲಿಕ್ಕೆ ಪ್ರಯತ್ನ ಮಾಡುತ್ತೇವೆ. ಇದನ್ನು ನಿಲ್ಲಿಸಬೇಕು ಎಂದು ಮತ್ತೊಮ್ಮೆ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಹೇಳಬಯಸುತ್ತೇನೆ. ಮತ್ತು ಈ ಕೂಡಲೇ ಆಹಾರ ಧಾನ್ಯಗಳ ಬೆಲೆಯನ್ನು ತೆಕ್ಷಣವಾಗಿ ಕಡಿಮೆ ಮಾಡಲಿಕ್ಕೆ ಈಗ ಯಾವ ರೀತಿಯಾಗಿ ಒಂದು ಸೀಲಿಂಗ್ ತಂದಿದ್ದೀರೋ ಜಪಲೀನಿನ ಇನ್‌ಕಂ ಮೇಲೆ ಏನು ಸೀಲಿಂಗ್ ತಂದಿದ್ದೀರೊ ಆದರಂತೆ ಇದಕ್ಕೂ ಒಂದು ಸೀಲಿಂಗ್ ತಂದು ಆಹಾರದ ಬೆಲೆ ಏರದೇ ಇರುವ ಹಾಗೆ ತಡಗಟ್ಟಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ಈ ವರ್ಷದಲ್ಲಿ ಒಂದು ವರ್ಷ ಬೆಂಗಳೂರಿನಲ್ಲಿ ರೇಸ್ ನಡೆಸುವುದಾದರೆ ಅದು ಒಂದು ಹೊಸ ಸಂಪ್ರದಾಯವಾಗುತ್ತದೆ.

ಅಧ್ಯಕ್ಷರು.—ಶ್ರೀಮಾನ್ ಕೆ. ಎಂ. ನಾಗಣ್ಣನವರು ಮಾತನಾಡಿದ್ದು ಆಹಾರಧಾನ್ಯಗಳ ಬೆಲೆ, ರೇಸ್‌ಗೆ ಸಂಬಂಧಪಟ್ಟದ್ದಲ್ಲ.

ಶ್ರೀ ವೆಂಕಟಾಳ್ ನಾಗರಾಜ್.—ನಾನು ಈ ವಿಚಾರವಾಗಿ ಹಿಂದೆಯೇ ಹೇಳಿದ್ದೆ. ಮತ್ತು ಶ್ರೀಮಾನ್ ನಾಗಣ್ಣನವರೂ ಕೂಡ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈ ವಿಷಯವನ್ನು ತಂದಿದ್ದಾರೆ. ಇಲ್ಲಿ ಒಂದು ವರ್ಷಗಳ ಕಾಲ ರೇಸ್ ನಡೆಸುವುದಾದರೆ ಸಾಮಾನ್ಯ ಜನರ ಗತಿ ಬಹಳ ಕಷ್ಟವಾಗುತ್ತದೆ. ಬಾಂಬೆ, ಹೈದ್ರಾಬಾದ್, ಕಲ್ಕತ್ತಾ ಇಂಥಾ ದೊಡ್ಡ ದೊಡ್ಡ ಪಟ್ಟಣಗಳಲ್ಲಿ 3-4 ತಿಂಗಳು ರೇಸ್ ನಡೆಸುತ್ತಾರೆ. ಇಲ್ಲಿ ಒಂದು ವರ್ಷ ನಡೆಸುವುದು ತುಂಬಾ ಅನ್ಯಾಯ. ರೇಸ್‌ಕೋರ್ಸ್ ಸೆಕ್ರೆಟರಿಗೆ ತಿಂಗಳಿಗೆ 7,500 ರೂಪಾಯಿ ಸಂಬಳ ಕೊಡುತ್ತಾರೆ. ಇದನ್ನು 3 ತಿಂಗಳೇ ನಡೆಸಿ ಕೆಲವೇ ಜನ ಶ್ರೀಮಂತರಾಗುತ್ತಿದ್ದಾರೆ. ಇನ್ನು ಒಂದು ವರ್ಷ ನಡೆಸುವುದಾದರೆ ಎಷ್ಟೋ ಸಾಮಾನ್ಯ ಜನರು ಮತ್ತು ಬಡವರು ತಮ್ಮ ಮಂಗಳ ಸೂತ್ರವನ್ನು ಮಾರಿಕೊಂಡು ಹೋಗುತ್ತಾರೆ. ಇದರಿಂದ ಸಾಮಾನ್ಯ ಜನರಿಗೇನೂ ಅನುಕೂಲವಾಗುವುದಿಲ್ಲ. ಮೊನ್ನೆ ದಿವಸ ಅಲ್ಲಿರುವ ಸ್ಟುವರ್ಡ್‌ನ ದೊಡ್ಡ ದೊಡ್ಡ ಶ್ರೀಮಂತರು ಸೇರಿ ಒಂದು ಕಾಕ್‌ಟೇಲ್ ಪಾರ್ಟಿ ಮಾಡಿದರು. ಅದಕ್ಕೆ ಸುಮಾರು 1½ ಲಕ್ಷ ರೂಪಾಯಿ ಖರ್ಚು ಮಾಡಿದರು. ಮೊನ್ನೆ ದಿವಸ ನಾವು ಭೂಸುಧಾರಣೆ ಬಗ್ಗೆ ಈ ಸಭೆಯಲ್ಲಿ ಚರ್ಚೆ ಮಾಡುವಾಗ ಅವರು ಅಲ್ಲಿ ಒಂದು ಟೀ ಪಾರ್ಟಿ ಮಾಡಿದರು. ಆದುದರಿಂದ ತಾವು ಬಡವರ ಬಗ್ಗೆ ಒಂದು ಅನುಕಂಪ ತೋರಿಸಿ ಈ ರೇಸ್ 9 ತಿಂಗಳ ಕಾಲ ಆಗದೇ ಇರುವ ಹಾಗೆ ಏನಾದರೂ ಒಂದು ಧೋರಣೆ ತೆಗೆದು ಕೊಳ್ಳಿ ಎಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮುಖ್ಯ ಮಂತ್ರಿಗಳು ಹಿಂದೆ ಮಾತನಾಡುತ್ತ ಒಂದು ಭರವಸೆಯನ್ನು ಕೊಟ್ಟಿದ್ದಾರೆ. ಆಹಾರ ಧಾನ್ಯಗಳ ಕೊರತೆ ನಗರಗಳಲ್ಲಿ ಏನಿದೆ ಅದರ ಬಗ್ಗೆ ಮತ್ತು ಬೆಲೆ ಏರಿಕೆ ಬಗ್ಗೆ ಹೇಳುತ್ತಾ ಬೆಂಗಳೂರು ಮುಂತಾದಂಥ ದೊಡ್ಡ ದೊಡ್ಡ ನಗರಗಳಲ್ಲಿ ಸ್ಟಾಟೂರಿ ರೇಷನಿಂಗ್ ತರಬೇಕು ಎನ್ನುವ ಅಭಿಪ್ರಾಯ ಸರ್ಕಾರಕ್ಕೆ ಇದೆ ಎಂದು ತಿಳಿದು ಬಂದಿದೆ. ಅದನ್ನು ಜಾರಿಗೆ ತರುವುದಕ್ಕೆ ಸರ್ಕಾರ ಏಕೆ ವಿಳಂಬ ಮಾಡುತ್ತಿದೆ ಎಂದು ನಾನು ಕೇಳಬೇಕಾಗಿದೆ. ಆದನ್ನು ಬೇಗ ಜಾರಿಗೆ ತರಬೇಕಾದ್ದು ಸರ್ಕಾರದ ಅತಿ ಮುಖ್ಯವಾದ ಜವಾಬ್ದಾರಿ ಮತ್ತು ಕರ್ತವ್ಯವಾಗಿದೆ.

ಇದೂ ಅಲ್ಲದೆ ಆಹಾರ ಧಾನ್ಯಗಳ ಸಗಟು ವ್ಯಾಪಾರವನ್ನು ವಹಿಸಿಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ. ಸಪ್ಟೆಂಬರ್ ತಿಂಗಳಿನಿಂದ ಬತ್ತದ ಸಗಟು ವ್ಯಾಪಾರವನ್ನು ತೆಗೆದುಕೊಳ್ಳಲಿರುವುದಾಗಿ ಪತ್ರಿಕೆಗಳಲ್ಲಿ ನೋಡಿದೆವು. ಅದರ ಬಗ್ಗೆ ನಿರ್ದಿಷ್ಟವಾದ ಕಾರ್ಯಕ್ರಮವೇನು ಎನ್ನುವುದನ್ನು ಸಭೆಗೆ ತಿಳಿಸಿದರೆ ಒಳ್ಳೆಯದು. ಇದಕ್ಕೆ ಬೇಕಾದ ವ್ಯವಸ್ಥೆಯನ್ನು ಏನಾದರೂ ಮಾಡಿದ್ದಾರೆಯ ? ಏನು ಮೆಷಿನರಿ ಮಾಡಿದ್ದಾರೆ ? ಬೇರೆ ಗೋಧಿಯ ಸಗಟು ವ್ಯಾಪಾರವನ್ನು ತೆಗೆದುಕೊಂಡು ಅನೇಕಕಡೆ ಸರ್ಕಾರಿ ಯಂತ್ರವಿಲ್ಲದೆ ತೊಂದರೆಯಾಗಿದೆಯೆಂದು ತಿಳಿದು ಬಂದಿದೆ. ಆಹಾರ ಧಾನ್ಯಗಳಲ್ಲಿ ಮತ್ತು ಇತರ ಜೀವನಾವಶ್ಯಕ ವಸ್ತುಗಳಲ್ಲಿ ಕಾಳಸಂತೆ ಸಿಕ್ಕಾಪಟ್ಟೆ ನಡೆಯುತ್ತಿದೆ. ಇದನ್ನು ತಡೆಗಟ್ಟುವುದಕ್ಕೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ? ಜನಗಳ ಸಹಕಾರವನ್ನು ತೆಗೆದುಕೊಳ್ಳಲು ಏನಾದರೂ ಮಾಡಿದ್ದೀರಾ ? ಜನಗಳ ಸಹಕಾರ ಬೇಕು. ನಾವು ಪೂರ್ತಿಯಾಗಿ ನಮ್ಮ ಸಹಕಾರವನ್ನು ಕೊಡಲು ಸಿದ್ಧರಾಗಿದ್ದೇವೆ. ಬ್ಲಾಕ್ ಮಾರ್ಕೆಟ್ ಮಾಡುವವರು ಮತ್ತು ಹೋರ್ಡರ್ಸ್ ತೋರಿಸುತ್ತೇವೆ. ಬಚ್ಚಿಟ್ಟಿರುವ ವಸ್ತುಗಳನ್ನು ಹೊರಗೆ ತರಿಸಿ ಅದನ್ನು ಹಂಚುವ ಕೆಲಸವನ್ನು ವಹಿಸಿಕೊಳ್ಳಬೇಕು. ಇಲ್ಲದೆ ಹೋದರೆ ನಾವು ಏನು ಪ್ರಯತ್ನ ಮಾಡುವುದಕ್ಕೆ ಹೋದರೂ ಆಗುವುದಿಲ್ಲ. ಪ್ರೋಲೀಸರು ಲಾ ಅಂಡ್ ಆರ್ಡರ್ ಸಿಚುಯೇಷನ್ ಉದ್ಭವಿಸದಂತೆ ನೋಡಿಕೊಳ್ಳಬೇಕು. ಇಲ್ಲದೆ ಹೋದರೆ ಬಹಳ ಉಗ್ರವಾದ ಪರಿಸ್ಥಿತಿ ಬರುತ್ತದೆಂದು ನಾನು ಎಚ್ಚರಿಸಬೇಕಾಗುತ್ತದೆ. ಜನರಲ್ಲಿ ತೀರ ಅತೃಪ್ತಿ ಬೆಳೆಯುತ್ತಿದೆ. ಇದಕ್ಕೆ ಅವಕಾಶ ಕೊಡಬಾರದು ಮತ್ತು ಇದರಿಂದ ಅನಾಹುತಗಳು ಆಗಬಾರದು ಎಂದು ನಾನು ಹೇಳುತ್ತಿದ್ದೇನೆ.

ಬರಗಾಲ ಪ್ರದೇಶದಲ್ಲಿ ಎಷ್ಟು ಆಹಾರ ಧಾನ್ಯಗಳನ್ನು ಅಲಾಟ್ ಮಾಡಲಾಯಿತು, ಎಷ್ಟು ರೀಲಿಸ್ ಆಗಿದೆ, ಎಷ್ಟು ಹೋಗಿದೆ ಎನ್ನುವ ಅಂಕಿ ಅಂಶಗಳನ್ನು ತಾಲ್ಲೂಕುವಾರು ಕೊಡುವುದಾಗಿ ಹೇಳಿದ್ದರು. ಅದನ್ನೆ ಈ ಹೊತ್ತು ಕೊಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—30—3—1973 ರಂದು ಮಾನ್ಯ ಮುಖ್ಯ ಮಂತ್ರಿಗಳು 'ಬೆಲೆಗಳ ಪ್ರವೃತ್ತಿ ಮತ್ತು ಬೆಲೆಗಳ ನೀತಿ' ಬಗ್ಗೆ ಹೇಳಿಕೆ ಕೊಟ್ಟರು. ಅದರ ಬಗ್ಗೆ ಚರ್ಚಿಸುವುದಕ್ಕೆ ಬೇಕಾದರೆ ಒಂದೆರಡು ದಿವಸ ಅವಕಾಶ ಕೊಡಲು ಸಿದ್ಧವೆಂದು ಹೇಳಿದ್ದರು. ಅದಕ್ಕೆ ಅವಕಾಶ ಕೊಡಬೇಕು

(ಶ್ರೀ ಕೋಣಂದೂರು ಲಿಂಗಪ್ಪ)

ಹಳ್ಳಿಗಳಲ್ಲಿ ಕೂಡ ಆಹಾರ ಪರಿಸ್ಥಿತಿ ಕೆಟ್ಟಿದೆ. ಅಲ್ಲಿರುವ ಬಡವರಿಗೆ ಆಹಾರ ಧಾನ್ಯಗಳು ಸಿಕ್ಕುತ್ತಿಲ್ಲ, ಸೀಮೆ ಎಣ್ಣೆ ಸಿಕ್ಕುತ್ತಿಲ್ಲ, ಅತ್ಯಾವಶ್ಯಕ ವಸ್ತುಗಳು ಸಿಕ್ಕುತ್ತಿಲ್ಲ. ಒಂದು ವೇಳೆ ಸಿಕ್ಕಿದರೂ ಅದರ ಬೆಲೆ ಗಗನಕ್ಕೆ ಮುಟ್ಟುತ್ತದೆ. ಇದರ ಬಗ್ಗೆ ಕೂಡ ಮಾನ್ಯ ಮಂತ್ರಿಗಳು ಗಮನ ಹರಿಸಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಆಡಳಿತ ಪಕ್ಷದ ವರಿಷ್ಠರು ದೆಹಲಿಗೆ ಹೋಗಿದ್ದು ದೇವರಾಜ ಅರಸು ಅವರ ಮಂತ್ರಿ ಮಂಡಲವನ್ನು ಕಿತ್ತು ಹಾಕುವವರೆಗೂ ಬರುವುದಿಲ್ಲವೆಂದು ಹೇಳುತ್ತಿದ್ದಾರೆ. ಇಂದಿರಾ ಗಾಂಧೀಯವರಿಂದ ನಮ್ಮ ಮುಖ್ಯ ಮಂತ್ರಿಗಳಿಗೆ ಬುಲಾವು ಬಂದಿದ್ದರೂ ಇವರು ಅಲ್ಲಿಗೆ ಹೋಗುವುದಿಲ್ಲವೆಂದು ಮನನ್ನು ಮಾಡಿದ್ದಾರೆಂದು ಹೇಳುತ್ತಿದ್ದಾರೆ. ಇವರೇ ಖಾಯಂ ಆಗಿ ಇರುತ್ತಾರೆಯೇ ಹೇಗೆ ಎನ್ನುವುದನ್ನು ಹೇಳಬೇಕು.

ಅಧ್ಯಕ್ಷರು.—ಆಹಾರವಿಲ್ಲದೆ ತೊಂದರೆಯಾಗಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದರೆ ತಾವು ಯಾವತ್ತಿಗೂ ಇಂಥವನ್ನೇ ಸ್ವಪ್ನ ಕಾಣುತ್ತಿರುತ್ತೀರಿ ; ಮತ್ತು ಇಂಥ ವಿಚಾರಗಳನ್ನೇ ಹೇಳುತ್ತಿರುತ್ತೀರಿ.

Sri C. M. ARUMUGAM.—I support Mr. Naganna with regard to the matter referred to by him about Bagalore races. Apart from people becoming paupers in this gambling there are many other sufferings too. The summer meetings for three months is enough. There is no need to have winter races in Bangalore. We have races in Madras, Calcutta and Bombay during winter season. If there is race at Bangalore Turf Club it is not that only people of Bangalore come there but people from all over the country come and attend the races. The Government has already written a letter to the Turf Club to go ahead with arranging for winter season races also. I feel there is no need for conducting races in Bangalore for more than 30 meetings as was being done so far.

ಶ್ರೀ ಕೆ. ಎಚ್. ಹನುಮೇಗೌಡ.—ಆಹಾರ ಇರಾಖೆಯವರು ಅಕ್ಕಿ, ಗೋಧಿ ಸಕ್ಕರೆ, ಇವುಗಳಿಗೆ ಪರ್ಮಿಟ್ಟುಗಳನ್ನು ಕೊಡುವಾಗಲೆಲ್ಲ ಮೊದಲೇ ಹಣವನ್ನು ವಸೂಲು ಮಾಡಿಕೊಳ್ಳುತ್ತಾರೆ. ಈ ರೀತಿ ರೇಷನ್ ಪದಾರ್ಥಗಳನ್ನು ತೆಗೆದುಕೊಂಡು ಹೋಗುವವರು ತಮ್ಮ ಗ್ರಾಮಗಳಲ್ಲಿರುವ ಜನಗಳಿಗೆ ಹಂಚದೆ ಕಾಳಸಂತೆಯಲ್ಲಿ ಮಾರಾಟ ಮಾಡಿಬಿಡುತ್ತಾರೆ. ಪರ್ಮಿಟ್ ಮೂಲಕ ಕೊಡುವ ರೇಷನ್ ಸರಿಯಾಗಿ ಜನಗಳಿಗೆ ವಿತರಣೆ ಯಾಗದೆ ಅಲ್ಲೊಲಕಲ್ಲೊಲವಾಗಿರಬೇಕಾದರೆ ಮಧ್ಯವರ್ತಿಗಳು, ಕೆಲವು ವ್ಯಾಪಾರಸ್ಥರು ಮತ್ತು ಅಧಿಕಾರಿಗಳು ಸೇರಿಕೊಂಡು ಬ್ಲಾಕ್ ಮಾರ್ಕೆಟ್ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಅದನ್ನು ತಪ್ಪಿಸುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಆಡಳಿತ ಕಾಂಗ್ರೆಸ್ ಮುಖಂಡರು ಚುನಾವಣೆಗೆ ಮುಂಚೆ ಮತ್ತು ಅನಂತರ ಅವರು ಮಾತನಾಡುತ್ತಿದ್ದುದನ್ನು ನೋಡಿ ಜನತೆಯ ಕಲ್ಯಾಣಕ್ಕೋಸ್ಕರ ಅವತಾರ ಮಾಡಿ ಬಂದಿರುವ ಪುಣ್ಯ ಪುರುಷರು ಎಂದು ನಾನು ತಿಳಿದುಕೊಂಡಿದ್ದೆ. ಇಷ್ಟೆಲ್ಲ ಬಡ ಜನತೆಯ ಬಗ್ಗೆ ಹೇಳುತ್ತಿದ್ದವರು ಇಂಥ ಅನ್ಯಾಯಗಳು ನಡೆಯುವುದಕ್ಕೆ ಏಕೆ ಅವಕಾಶ ಕೊಡುತ್ತಿದ್ದಾರೆಯೋ ಗೊತ್ತಿಲ್ಲ. ಜನತೆಯ ಹಿತದೃಷ್ಟಿಯಿಂದ. ಜನತೆಯ ಕಲ್ಯಾಣಕ್ಕೆ ವಿರೋಧವಾದ ರೀತಿಯಲ್ಲಿ ನಡೆಯುವುದಕ್ಕೆ ಹೇಗೆ ಅವಕಾಶ ಕೊಟ್ಟಿದ್ದಾರೆಂಬುದನ್ನು ದಯಮಾಡಿ ತಿಳಿಸಬೇಕು.

Statement of the Chief Minister

re: **Abnormal rise in prices of commodities and Introduction of statutory Rationing**

† ಶ್ರೀ ಡಿ. ದೇವರಾಜ ಅರಸ್.—ಆಹಾರ ಧಾನ್ಯಗಳು ಮತ್ತು ಸೀಮೆ ಎಣ್ಣೆ ಇವುಗಳನ್ನು ಹಂಚಿಕೆ ಮಾಡುವಾಗ ತಾಲ್ಲೂಕು ಮಟ್ಟದಲ್ಲಿ ಕಮಿಟಿಗಳನ್ನು ಮಾಡೋಣವೆಂದು ನಾನು ಹಿಂದೆ ಹೇಳಿದ್ದೆ. ಆ ಸಮಿತಿಗಳನ್ನು ತಕ್ಷಣ ಮಾಡುವವರಿದ್ದೇವೆ. ಬಹುಶಃ ಖಾನಗಿ ಜನರನ್ನು ಸೇರಿಸಿ, ಅಸೆಂಬ್ಲಿ ಸದಸ್ಯರನ್ನು ಒಳಗೊಂಡಂತೆ ಸಮಿತಿಯನ್ನು ಮಾಡಿದರೆ ಒಳ್ಳೆಯದಾಗಬಹುದು ಎಂದು ನಾನು ಹೇಳುತ್ತಿದ್ದೆ. ಅನೇಕ ದೂರುಗಳಿವೆ. ಮಧ್ಯವರ್ತಿಗಳು ಬಹಳ ಮೋಸ ಮಾಡುತ್ತಾ ಇದ್ದಾರೆ. ತಾಲ್ಲೂಕು ಮಟ್ಟದ ಕಮಿಟಿಗಳನ್ನು ಮಾಡಿದರೆ ಇಂಥವೆಲ್ಲ ಬಹುಮಟ್ಟಿಗೆ ತಪ್ಪುವುದಕ್ಕೆ ಸಾಧ್ಯವಾಗಬಹುದು ಎಂದು ತೋಚಿರುತ್ತದೆ. ಇದಕ್ಕೆ ಇನ್ನೇನಾದರೂ ವಿಚಾರವಿದ್ದರೆ ತಿಳಿಸಿದರೆ ಅದನ್ನೂ ಮಾಡೋಣ. ನಾನು ನಿನ್ನೆ ಮತ್ತು ಮೊನ್ನೆ ಕೆಲವು ಕಡೆ ಹೋಗಿ ಬಂದಿದ್ದೇನೆ. ಸೀಮೆ ಎಣ್ಣೆ ಅಭಾವವಿದೆ. ನಾವು ಮಾಮೂಲಾಗಿ ಉಪಯೋಗ ಮಾಡುತ್ತಿದುದಕ್ಕಿಂತ 50 ಪರ್ಸೆಂಟ್ ನಷ್ಟು ಕಡಮೆ ಬರುತ್ತಿದೆ. ಇರುವುದನ್ನು ಹಂಚಿಕೆ ಮಾಡಬೇಕು. ಅದಕ್ಕೆ ಎಲ್ಲ ಡೆಪ್ಯುಟಿ ಕಮಿಷನರುಗಳಿಗೆ ಏನು ಹೇಳಿದ್ದೇನೆಂದರೆ, ಎಷ್ಟು ಬರುತ್ತದೆ ಅದನ್ನೆಲ್ಲ ತಾಲ್ಲೂಕು ಮಟ್ಟದಲ್ಲಿರುವ ತಹಸೀಲ್ದಾರರು, ಬಿ.ಡಿ.ಓ. ಇವರ ಮುಖಾಂತರ ಅದನ್ನು ಪ್ರತಿಯೊಂದು ಪಂಚಾಯಿತಿಗೂ ದಾಮಾಷಾ ಪ್ರಕಾರ ಎಷ್ಟೆಷ್ಟು ಬರುತ್ತದೆ ಅಷ್ಟನ್ನು ಹಂಚಿ ಎಂದು ಹೇಳಿದ್ದೇನೆ.

ಆಹಾರ ಧಾನ್ಯಗಳ ವಿಚಾರದಲ್ಲಿ ಸ್ಟಾಚ್ಯೂಟರಿ ರೇಷನಿಂಗ್ ತರಬೇಕು ಎನ್ನುವ ವಿಚಾರ ಹೇಳಿದ್ದಾರೆ. ಈ ಹೊತ್ತು ಸ್ಟಾಚ್ಯೂಟರಿ ರೇಷನಿಂಗ್ ತಕ್ಷಣದಲ್ಲಿ ಜಾರಿಯಲ್ಲಿ ತರುವುದಕ್ಕೆ ಆಗುವುದಿಲ್ಲ.

ನಾವು ಮೊದಲು ಆಹಾರಧಾನ್ಯವನ್ನು ಶೇಖರಣೆ ಮಾಡಿಕೊಳ್ಳಬೇಕು, ಹಾಗೆ ಶೇಖರಣೆ ಮಾಡಿದ ನಂತರ ಆಗ ಇದನ್ನು ಯಾವ ರೀತಿ ಮಾಡಬಹುದು ಎನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ. ಈಗಲೇ ಸ್ಟಾಚ್ಯುಟರಿ ರೇಷನಿಂಗ್ ಎಂದು ತರಬೇಕಾದರೆ ನಾವು ಎಲ್ಲರಿಗೂ ಸಪ್ಲೈ ಮಾಡಲು ನಮ್ಮಲ್ಲಿ ಧಾನ್ಯವೇ ಇಲ್ಲ. ಅದರಿಂದ ಇದನ್ನು ಈಗಲೇ ಮಾಡಲಾಗುವುದಿಲ್ಲ. ಇದಕ್ಕಾಗಿಯೇ ಈಗ ಇನ್‌ಫಾರಮಲ್ ರೇಷನಿಂಗು ಮಾತ್ರ ಇಟ್ಟಿರುವುದು, ಸ್ಟಾಚ್ಯುಟರಿ ರೇಷನಿಂಗು ಮಾಡಬೇಕಾದರೆ ನಮಗೆ ಎಲ್ಲ ಕಡೆಗಳಿಂದಲೂ ಬರಬೇಕಾದ ಧಾನ್ಯಗಳು ಬರಲಾಗುವುದಿಲ್ಲ. ಇದನ್ನು ಮೊದಲು ಶೇಖರಿಸಿ ಆ ನಂತರ ಇದರ ಬಗ್ಗೆ ನೋಡಬೇಕು. ಈಗಲೇ ಸ್ಟಾಚ್ಯುಟರಿ ರೇಷನಿಂಗ್‌ನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ನಾವು ಮೊದಲು ಹೋಲ್‌ಸೇಲ್ ಟ್ರೇಡನ್ನು ನಮ್ಮ ಕೈಗೆ ತೆಗೆದುಕೊಂಡ ಮೇಲೆ ಇದಕ್ಕೆ ಬೇಕಾಗುವ ಎಲ್ಲ ಧಾನ್ಯಗಳನ್ನೂ ಶೇಖರಣೆ ಮಾಡಿಕೊಂಡ ಮೇಲೆ ಸ್ಟಾಚುಟರಿ ರೇಷನಿಂಗು ಇಂಟ್ರೊಡ್ಯೂಸು ಮಾಡಬೇಕೇ ಇಲ್ಲವೇ ಎನ್ನುವುದನ್ನೂ ಯೋಚನೆ ಮಾಡಬೇಕಾಗುತ್ತದೆ. ನಾನಾಗಲೇ ಹೇಳಿದ ಹಾಗೆ ದೊಡ್ಡ ದೊಡ್ಡ ಸಿಟಿಗಳಲ್ಲಿರುವ ಜನರಿಗೆ ಸಾಕಷ್ಟು ದವಸಗಳನ್ನು ಒದಗಿಸುವ ವ್ಯವಸ್ಥೆ ಬಗ್ಗೆ ಮೊದಲು ಏರ್ಪಾಡು ಮಾಡಬೇಕು. ಈಗ ಇನ್ನೂ ಇದನ್ನು ಮಾಡಿಲ್ಲ. ಹಿಂದೆ ಯುದ್ಧದ ಕಾಲದಲ್ಲಿ ಎಂದರೆ ಬಹುಶಃ 1947-48ರಲ್ಲಿ ಇಂತಹ ರೇಷನಿಂಗ್ ವ್ಯವಸ್ಥೆ ಮಾಡುವಾಗ ಹೆಚ್ಚು ಆಹಾರ ಧಾನ್ಯವನ್ನು ಶೇಖರಿಸಿಕೊಂಡು ಮಾಡಿದ ಹಾಗೆ ಈಗ ಆಹಾರದ ದವಸಗಳನ್ನು ಎಲ್ಲ ಕಡೆಯಿಂದಲೂ ಶೇಖರಣೆ ಮಾಡಿ ಇಟ್ಟುಕೊಳ್ಳಬೇಕು.

ಶ್ರೀ ಕೆ. ಹೆಚ್ ಹನುಮೇಗೌಡ.—ಬೇಸಾಯ ಮಾಡುವ ಕೂಲಿಗಾರರಿಗೆ ಸರಿಯಾದ ಕೂಲಿ ಕೊಡುತ್ತಿಲ್ಲ ಮತ್ತು ದವಸ ಬೆಳೆಯುವವರಿಗೂ ಸರಿಯಾದ ರೇಟು ಕೊಡುತ್ತಿಲ್ಲ. ಇಂತಹ ಕಾಲದಲ್ಲಿ ಇದನ್ನೇಕೆ ತಾವು ತೆಗೆದುಕೊಳ್ಳಬೇಕು ?

ಶ್ರೀ ಡಿ. ದೇವರಾಜ ಅರಸ್.—ಹಾಗೆ ಇದನ್ನು ಬಿಟ್ಟುಬಿಡಬೇಕೇನ್ ?

ಶ್ರೀ ಕೆ. ಹೆಚ್. ಹನುಮೇಗೌಡ.—ಇದನ್ನು ಮಾಡದೇ ಫ್ರೀ ಟ್ರೇಡ್‌ಗೆ ಬಿಟ್ಟುಬಿಡಬಹುದು. ನಮ್ಮ ಸರ್ಕಾರದಲ್ಲಿರುವ ಅಧಿಕಾರಿಗಳು ಸರಿಯಾಗಿ ವಿತರಣೆ ಮಾಡುತ್ತಿಲ್ಲ. ರೇಷನ್ ಡಿಪೋದಲ್ಲೂ ಕೂಡ ಜನಕ್ಕೆ ಸರಿಯಾಗೆ ದವಸಗಳು ಸಿಗುತ್ತಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಇದನ್ನು ಬಿಟ್ಟು ಬಿಟ್ಟರೆ ಏನಾಗುತ್ತದೆ ಎನ್ನುವುದು ನನಗೆ ಗೊತ್ತಿದೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಕೊಂಡು ಕೊಂಡು ತಿನ್ನುವವರಿಗೇ ಕಷ್ಟವಾಗುತ್ತದೆ ಮತ್ತು ಇಷ್ಟು ಹೆಚ್ಚಿ ರೇಟು ದವಸಕ್ಕೆ ಯಾವಾಗಲೂ ಇರಲಿಲ್ಲ.

ಶ್ರೀ ಡಿ. ದೇವರಾಜಅರಸ್.—ತಾವು ಸುಮ್ಮನೆ ಇರಿ. ವ್ಯಾಪಾರನ್ನರು ಹೇಳುವಂತೆಯೇ ನೀವು ಇಲ್ಲಿ ಹೇಳುತ್ತಿದ್ದೀರಿ, ಇದರ ವ್ಯವಹಾರದಲ್ಲಿ ತಮಗೆ ಪೂರ್ತಿ ಅರಿವಿಲ್ಲದೇ ಇರುವುದರಿಂದ ತಾವು ಹೀಗೆ ಇಲ್ಲಿ ಹೇಳುತ್ತಿದ್ದೀರಿ. ಆಷ್ಟೆ.

ಶ್ರೀ ಎಂ. ಎಸ್. ಕೃಷ್ಣನ್.—ಹಿಂದೆ ಸ್ವತಂತ್ರ ಪಾರ್ಟಿಯವರೂ ಹೇಳುತ್ತಿದ್ದರು, ಹೋರ ಸೇಲ್ ವ್ಯಾಪಾರ ಮಾಡುವವರೇ ಬ್ಲಾಕ್ ಮಾರ್ಕೆಟ್ಟು ಮಾಡುತ್ತಿದ್ದಾರೆಂದು.

ಶ್ರೀ ಕೆ. ಹೆಚ್. ಹನುಮೇಗೌಡ:—ಯಾರಾದರೂ ಬ್ಲಾಕ್ ಮಾರ್ಕೆಟ್ ಮಾಡಲಿ. ನನ್ನವಾದ ಇಷ್ಟೇ. ನಿಮ್ಮಲ್ಲಿರುವ ಫುಡ್ ಇಲಾಖೆಯಲ್ಲಿರುವ ಅಧಿಕಾರಿಗಳು ಸರಿಯಾಗಿ ಹತೋಟಿ ಇಟ್ಟುಕೊಳ್ಳದೇ ಇಂದು ಬ್ಲಾಕ್ ಮಾರ್ಕೆಟ್ಟು ಮಾಡುವ ಜನರೂ ಇದರಲ್ಲಿ ಬರಬಹುದು; ಆದರೆ ದವಸ ಬೆಳೆದ ರೈತರಿಗೆ ನ್ಯಾಯವಾದ ರೇಟು ಸಿಗುವಂತೆ ವ್ಯವಸ್ಥೆ ಮಾಡಬೇಕು, ಆದರೆ ಇಂದು ರೇಷನ್ ಇಲಾಖೆಯಲ್ಲಿರುವವರೆಲ್ಲ ಲಂಚ ಹೊಡೆಯುವುದರಲ್ಲಿ ನಿಸ್ಸೀಮರಾಗಿದ್ದಾರೆ. ಇದರಿಂದಾಗಿ ಸರಿಯಾಗಿ ಜನಕ್ಕೆ ದವಸ ಗಳು ವಿತರಣೆಯಾಗುತ್ತಿಲ್ಲ, ನಿಮ್ಮಲ್ಲಿರುವ ಮೆಷಿನರಿ ಸರಿಯಾಗಿಲ್ಲ, ನಾನೇನು ಶ್ರೀ ಕೃಷ್ಣನ್‌ರವರು ಹೇಳುವ ಹಾಗೆ ಯಾವ ಪಾರ್ಟಿ ಬಗ್ಗೆಯೂ ಹೇಳುತ್ತಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಇಂತಹ ಪಾರ್ಟಿ ಎಂದು ಹೇಳುವುದು ಬೇಡ. ಅವರ ಪಾರ್ಟಿ ಯಲ್ಲಿ ಯಾವ ರೀತಿ ಇದೆ ಎನ್ನುವುದೂ ನನಗೆ ಗೊತ್ತಿದೆ. ನಾನು ಕೇರಳಕ್ಕೆ ಹೋಗಿ ನೋಡಿ ಬಂದಿದ್ದೇನೆ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಲೂಟಿ ಹೊಡೆಯುವ ಜನರೂ ಕಮ್ಯುನಿಸ್ಟ್ ಪಾರ್ಟಿಯವರೇ, ಬೆಂಕಿ ಹಚ್ಚುವವರೂ ಅವರೇ.

ಶ್ರೀ ಎಂ. ಎಸ್. ಕೃಷ್ಣನ್.— * * * *

ಶ್ರೀ ವಿ. ಎನ್. ಪಾಟೀಲ್.—* * * *

ಶ್ರೀ ಬಿ. ವಿ. ಕಕ್ಕೇರಾಯ.—* * * *

ಶ್ರೀ ಎಂ. ಎಸ್. ಕೃಷ್ಣನ್.—* * * *

ಅಧ್ಯಕ್ಷರು.—ಏನನ್ನೂ ರಿಕಾರ್ಡ್ ಮಾಡಬೇಡಿ.

ಶ್ರೀ ಡಿ. ದೇವರಾಜಅರಸ್.—ಮಾನ್ಯ ಅಧ್ಯಕ್ಷರೇ, ಈಗ ಬಹುಶಃ ಸ್ವಲ್ಪ ಸಮಾಧಾನವಾದಂತೆ ಕಾಣುತ್ತಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಮ್ಮ ಕಡೆ ಇದ್ದವರನ್ನೂ ನಿಮ್ಮ ಕಡೆಗೆ ಕಳುಹಿಸಿದ್ದೇವೆ, ಅವರೇ ನಿಮ್ಮ ಕಣ್ಣಿಗೆ ಕಾಣುವಂತೆ ಇದ್ದರೂ ಅವರ ಬಗ್ಗೆ ಏನೂ ಹೇಳುತ್ತಿಲ್ಲ.

ಶ್ರೀ ಡಿ. ದೇವರಾಜ ಅರಸ್.—ನಿಮ್ಮ ಮೈತ್ರಿಕೈ ಸ್ವಲ್ಪ ಪುಷ್ಟಿ ಆಗಲಿ, ನಿಮ್ಮ ಕಷ್ಟವನ್ನು ನೋಡಿಕೊಂಡು ಮೊದಲು ಪರಿಹಾರ ಮಾಡಿಕೊಳ್ಳಿ, ಮುಂದೆ ಮಾತನಾಡೋಣ.

2-30 P.M.

ಇನ್ನು ಆಹಾರದ ವಿಚಾರದಲ್ಲಿ ಈ ದೇಶದಲ್ಲಿ ಹೊಸದಾಗಿ ಇದನ್ನು ಅನುಭವಕ್ಕೆ ತೆಗೆದು ಕೊಂಡಿಲ್ಲ. ಯುದ್ಧಕಾಲದಲ್ಲಿಯೂ ಈ ದೇಶದಲ್ಲಿ ಏನಾಯಿತು ಎಂಬ ಅನುಭವ ಇದೆ. ಎರಡನೇ ಮಹಾಯುದ್ಧದಲ್ಲಿ ಏನಾಯಿತು ? ಕಲ್ಕತ್ತಾದಲ್ಲಿ ನಡೆದ ಘಟನೆಯನ್ನು ಶ್ರೀಮಾನ್ ಹನುಮೇ ಗೌಡರು ಹಿಂದಿನ ಚರಿತ್ರೆಯನ್ನು ನೋಡಿ ತಿಳಿದುಕೊಳ್ಳುವುದು ಒಳ್ಳೆಯದು. ತಾವೇನೋ ಈಗ ಉದ್ವೇಗದಲ್ಲಿ ರೈತನ ಪರಿಸ್ಥಿತಿ ಹಾಗಾಗಿದೆ, ಹೀಗಾಗಿದೆ ಎಂದು ಹೇಳುತ್ತೀರಿ, ; ಶ್ರೀಮಾನ್ ಹನುಮೇಗೌಡರಿಗೆ ನಾನು ಹೇಳುವುದಾದರೆ, ನೀವೂ ರೈತರೇ ನಾವೂ ರೈತರೇ; ನಿಮ್ಮ ಹಾಗೆ ನಾನೂ ಹಳ್ಳಿಯಲ್ಲಿ ಹುಟ್ಟಿ ಬೆಳೆದಿದ್ದೇನೆ. ನಾನೂ ನಿಮ್ಮ ಹಾಗೆ ಹೊಲ, ಗದ್ದೆ, ತೋಟದಲ್ಲಿ ಕೆಲಸ ಮಾಡಿದ್ದೇನೆ. ಆ ಒಂದು ಅನುಭವ ನನಗೆ ಇದೆ. ನಿಮಗೆ ಬೇಕಾದರೆ ಹೇಳಿಕೊಡುವಷ್ಟು ವಿಚಾರಗಳನ್ನು ನನ್ನ ಒಂದು ಅನುಭವದಿಂದ ತಿಳಿದುಕೊಂಡಿದ್ದೇನೆ. ಈ ದೇಶದಲ್ಲಿ ವ್ಯಾಪಾರಿಗಳು ಇಂದು 50 ವರ್ಷಗಳ ಹಿಂದೆ ಇದ್ದಂತೆ ಇಲ್ಲ. ಕಾಮರ್ಸ್ ಅಂಡ್ ಟ್ರೇಡ್ ಇಂದು ವಿಪರೀತ ಕ್ಲಿಷ್ಟವಾಗಿದೆ. ಹಿಂದೆ ನಾವು ಬೆಳೆದಂಥ ಪದಾರ್ಥಗಳನ್ನು ವ್ಯಾಪಾರ ಮಾಡಬೇಕಾದರೆ,

* * * Matter not recorded as ordered by the Chair.

ಅಪುಗಳನ್ನು ಸಾಗಿಸಲು ಲಾರಿ ವಗ್ಯೆರೆ ಅನುಕೂಲಗಳಿರಲಿಲ್ಲ. ಮಲೆನಾಡು ಪ್ರದೇಶಗಳಲ್ಲಿಯಂತೂ ಯಾವ ಅನುಕೂಲಗಳೂ ಇರಲಿಲ್ಲ? ಎತ್ತಿನ ಗಾಡಿಗಳಲ್ಲಿ 25-30 ಅಥವಾ 50 ಮೈಲಿಗಳ ದೂರದವರೆಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡಬೇಕಾಗಿತ್ತು. ಘಟ್ಟಕ್ಕೆ ಅಂದರೆ ಪಶ್ಚಿಮ ಕರಾವಳಿಗೆ ತೆಗೆದುಕೊಂಡು ಹೋಗಬೇಕಾಗಿತ್ತು. ವೈಯಕ್ತಿಕವಾಗಿ ಕಷ್ಟಪಟ್ಟು ನಾನು ನೋಡಿರುವುದನ್ನು ಹೇಳುತ್ತಿದ್ದೇನೆ. ನಾನು ಬೆಳೆದಂಥ ರಾಗಿಯನ್ನು ಮಾರಾಟ ಮಾಡಲು ಮುಂಡ್ಯದ ನಂತೆಗೆ, ಮೈಸೂರು ನಂತೆಗೆ ತೆಗೆದುಕೊಂಡು ಹೋಗಬೇಕಾಗಿತ್ತು. ಎಷ್ಟೋ ಸಲ ವ್ಯಾಪಾರವಾಗದೆ ಹಿಂದಕ್ಕೆ ತೆಗೆದುಕೊಂಡು ಬಂದಿದ್ದೂ ಸಹ ಉಂಟು. ಹಳೆಯ ಮೈಸೂರು, ಮಲೆನಾಡು ಪ್ರಾಂತ್ಯ, ಮತ್ತು ಬಿಜಾಪುರದ ಕಡೆಗಳಲ್ಲಂತೂ ಸಹ ಇದೇ ಪರಿಸ್ಥಿತಿ ಇತ್ತೆಂದು ಕಾಣುತ್ತದೆ. ಮಾರಾಟ ಮಾಡೋಣವೆಂದರೆ ಕೊಂಡುಕೊಳ್ಳುವವರೇ ಇರಲಿಲ್ಲ? ಹಳ್ಳಿಗಳಲ್ಲಿ ರೈತರು ತಾವು ಬೆಳೆದಿದ್ದನ್ನು ಗುಣಿ ತೋಡಿ ಹಗೇವಿನಲ್ಲಿ ಇಡುತ್ತಿದ್ದರು. ಕೇಳಿದವರಿಗೆ ಸಾಲ ಕೊಡುತ್ತಿದ್ದರು. ಸಾಲ ಪಡೆದವರು 3 ವರ್ಷದವರೆಗೂ ಸಹ ಕೊಡುವಿದ್ದರೆ ಕೊಟ್ಟವರು ಅವನ್ನು ಹಾಗೆಯೇ ಬಿಟ್ಟುಬಿಡುತ್ತಿದ್ದರು. ಆಗಿನ ಕಾಲಕ್ಕೆ ಒಂದು ಪಲ್ಲ ಬತ್ತದ್ದು ಬೆಲೆ 4 – 5 ರೂಪಾಯಿ ಇತ್ತು. ಕೆಲವು ಕಡೆಗಳಲ್ಲಿ 6—7 ರೂಪಾಯಿಗಳು ಸಹ ಇತ್ತು. ಆದರೆ ಕೊಡುಕೊಳ್ಳುವವರೇ ಇರಲಿಲ್ಲ. ಆಗಿನ ಕಾಲದಲ್ಲಿ ಬಿಜಾಪುರ ಮುಂತಾದ ಭಾಗಗಳಲ್ಲಿ ಕ್ಷಾಮ ಬಂದರೆ ಅಲ್ಲಿಗೆ ಬೇರೆ ಕಡೆಗಳಿಂದ ಆಹಾರವನ್ನು ತೆಗೆದುಕೊಂಡು ಹೋಗಲು ಸಂಚಾರ ಮಾರ್ಗಗಳು ಇರಲಿಲ್ಲ? ವಾಹನಗಳ ಸೌಕರ್ಯಗಳು ಇರಲಿಲ್ಲ? ಆದರೆ ಇಂದು ಎಲ್ಲ ಕಡೆಗಳಲ್ಲಿಯೂ ಸಂಚಾರ ಮಾರ್ಗಗಳು ಆಗಿರುವುದಲ್ಲದೆ, ವಾಹನ ಸೌಕರ್ಯಗಳು ಸಹ ಇವೆ. ರಾತ್ರಿಗಳು ಎಲ್ಲಿಗೆ ಬೇಕಾದರೂ ಹೋಗುತ್ತವೆ. ರೈಲಿನಿಂದ ಸಾಗಿಸುವುದಕ್ಕೆ ಅನುಕೂಲವಿದೆ. ಹಿಂದೆ ಒಂದು ಬೀದಿಯಲ್ಲಿದ್ದ ಧಾರಣೆ ಇನ್ನೊಂದು ಬೀದಿಯಲ್ಲಿರುವ ವ್ಯಾಪಾರಿಗೆ ಗೊತ್ತಾಗುತ್ತಿರಲಿಲ್ಲ? ಆದರೆ ಇಂದು ಟೆಲಿಫೋನ್ ಸೌಕರ್ಯ ಬಂದಿರುವುದರಿಂದ ಎಲ್ಲ ವ್ಯಾಪಾರಿಗಳು ಸಹ ಆಯಾ ದಿನದ ಧಾರಣೆಗಳನ್ನು ತಿಳಿದುಕೊಳ್ಳುತ್ತಾರೆ. ಇಂದು ಎಲ್ಲ ಟೌನ್‌ಗಳಲ್ಲಿಯೂ ಸಹ ಟೆಲಿಫೋನ್ ಸೌಕರ್ಯವಿದೆ. ಇದ್ದರಿಂದ ಅದರ ಮೂಲಕ ಧಾರಣೆಗಳನ್ನು ತಿಳಿದುಕೊಳ್ಳುತ್ತಿರುತ್ತಾರೆ. ಮತ್ತು ಪ್ರತಿದಿನ ಅಂಗಡಿಗಳನ್ನು ತೆಗೆಯುವುದಕ್ಕೆ ಮುಂಚೆ ಎಲ್ಲರೂ ಒಂದು ಕಡೆ ಸೇರಿ ಯಾವ ಧಾರಣೆಯಲ್ಲಿ ವ್ಯಾಪಾರ ಮಾಡಬೇಕೆಂದು ಒಗ್ಗೆ ಮಾತನಾಡಿಕೊಳ್ಳುತ್ತಾರೆ. ಅದಕ್ಕಾಗಿ ಅಸೋಸಿಯೇಷನ್ ಅಥವಾ ಛೇಂಬರ್ ಆಫ್ ಕಾಮರ್ಸ್ ಎಂದು ಮಾಡಿಕೊಂಡಿರುತ್ತಾರೆ. ಅಲ್ಲಿ ಎಲ್ಲರೂ ಬೆಳಿಗ್ಗೆ ಸೇರಿ ಮಾತನಾಡಿಕೊಳ್ಳುತ್ತಾರೆ. ಈ ಕಾರಣದಿಂದ ನಾವು ಎಲ್ಲಿಗೆ ಹೋಗಿ ಕೇಳಿದರೂ ಒಂದೇ ಧಾರಣೆ ಹೇಳುತ್ತಾರೆ. ಒಂದು ಕಾಲಕ್ಕೆ ಇದು ಇರಲಿಲ್ಲ; ಆದುನಿಕ ಸೌಲಭ್ಯಗಳು ದೊರಕಿದಂತೆಲ್ಲಾ ಚೈಂಡ್ ಅಂಡ್ ಕಾಮರ್ಸ್ ಕಾಂಪ್ಲಿಕೇಟೆಡ್ ಆಗಿದೆ. ಇದರ ಜೊತೆಗೆ ವ್ಯಾಪಾರಿಗಳಲ್ಲಿ ಹಣ ಯಥೇಚ್ಛವಾಗಿದೆ. ಬ್ಯಾಂಕ್‌ಗಳಿಂದ ಕೊಡುವ ಹಣಕ್ಕೆ ಮಿತಿ ಇಟ್ಟಿದ್ದರೂ, ಸಹ ಬೇರೆ ಹಣ ಅವರಲ್ಲಿ ಇದೆ. ಮಾನ್ಯ ಹನುಮೇಗೌಡರು ನನ್ನೆದಿವಸದ ಹಿಂದೂ ಪತ್ರಿಕೆಯನ್ನು ಓದಿರಬಹುದೆಂದು ಕಾಣುತ್ತದೆ; ಪಂಜಾಬ್ ಹರಿಯಾಣ ಯು. ಪಿ., ಬಿಹಾರ ರಾಜ್ಯಗಳಲ್ಲಿ ದೊಡ್ಡ, ದೊಡ್ಡ ವ್ಯಾಪಾರಿಗಳು ಸೇರಿಕೊಂಡು ಅಲ್ಲಿಯ ರೈತರಿಗೆ ಮುಂಗಡವಾಗಿ ಹಣವನ್ನು ಕೊಟ್ಟು ಸರ್ಕಾರಕ್ಕೆ ಗೋಧಿ ಕೊಡಬೇಡಿ ಎಂದು ಹೇಳುತ್ತಿದ್ದಾರೆ. ಮಾರುಕಟ್ಟೆಗೆ ಗೋಧಿಯನ್ನು ರೈತರು ತೆಗೆದುಕೊಂಡು ಹೋಗದಂತೆ ಮಾಡುತ್ತಿದ್ದಾರೆ. ಸರ್ಕಾರವನ್ನು ಸೋಲಿಸಲೋಣ ಎಂದು ಪ್ರಯತ್ನ ಮಾಡುತ್ತಿದ್ದಾರೆ. ರೈತರಿಂದ ಕೊಳ್ಳುವ ಬೆಲೆ ಕ್ವಿಂಟಾಲಿಗೆ 76 ರೂಪಾಯಿ ಇದ್ದರೆ ಮಾರುಕಟ್ಟೆ ಬೆಲೆ 120 ರೂಪಾಯಿ ಇದೆ. ಮಾರುಕಟ್ಟೆ ಬೆಲೆಯಲ್ಲಿ ಕೊಂಡರೆ ಕೊಂಡು ತಿನ್ನುವವರಿಗೆ ಯಾವ ಬೆಲೆಗೆ ಸರ್ಕಾರದವರು ಕೊಡಬೇಕು? ತಾವು ಹೇಳುತ್ತೀರಿ, ಹಳ್ಳಿಯ ರೈತರಿಗೆ ರಕ್ಷಣೆ ಕೊಡಿ ಎಂದು; ಅದೇ ರೀತಿ ಪಟ್ಟಣಗಳಲ್ಲಿರುವ ಕೂಲಿಗಾರರಿಗೆ ಮತ್ತು ಕಾರ್ಮಿಕರಿಗೆ ರಕ್ಷಣೆ ಕೊಡಬೇಡವೇ? ಏನಾದರೂ ಇಂಡಸ್ಟ್ರಿಗಳಲ್ಲಿ ಪ್ರೊಡಕ್ಷನ್ ನಿಂತುಹೋದರೆ ನಾಳೆದಿವಸ ಹಳ್ಳಿಯವರಿಗೆ ತೊಂದರೆಯಾಗುವುದಿಲ್ಲವೇ? ಇದನ್ನು ತಾವು ಯೋಚನೆ ಮಾಡಬೇಕು. ತಾವು ಯಾವುದೋ ಹಿಂದಿನ ಶತಮಾನದ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಯ ಮಾತನ್ನು ಇಂದು ಹೇಳಿದರೆ ಪ್ರಯೋಜನವಾಗುವುದಿಲ್ಲ; ಅದೆಲ್ಲಾ ಹಿಂದಿನ ಕಾಲಕ್ಕೆ ಆಯಿತು; ಹಳ್ಳಿಗಳಲ್ಲಿ ಕೂಲಿ ಕೆಲಸ ಮಾಡಿದರೆ ದವನಧಾನ್ಯ ಸಿಗುತ್ತದೆ; ಆದರೆ ಪಟ್ಟಣಗಳಲ್ಲಿ ಕೂಲಿ ಕೆಲಸ ಮಾಡುವವರಿಗೆ ಸಿಗುವುದಿಲ್ಲ;

ಶ್ರೀ ಕೆ. ಎಚ್. ಹನುಮೇಗೌಡ.—ಟೌನ್‌ಗಳಲ್ಲಿ ಆಹಾರವನ್ನು ಜನರಿಗೆ ಹಂಚುವಂತೆ ಹಳ್ಳಿಯ ಜನರಿಗೂ ಸಹ ಹಂಚಬೇಕೆಂದು ನಾನು ಕೇಳಿಕೊಳ್ಳುತ್ತಿರುವುದು;

ಶ್ರೀ ಡಿ. ದೇವರಾಜ ಅರಸ್.—ತಾವು ನಾನು ಹೇಳುವುದನ್ನು ಸಾವಧಾನವಾಗಿ ಕೇಳಿ; ಹಳ್ಳಿಯವರನ್ನು ಕಂಡರೆ ನನಗೇನು ಹೊಟ್ಟೆಹುರಿಯೇ? ಮೊದಲು ಇಡೀ ದೇಶದಲ್ಲಿರುವ ಪರಿಸ್ಥಿತಿ ಏನು ಎಂಬುದನ್ನು ತಾವು ದಯಮಾಡಿ ತಿಳಿದುಕೊಂಡಾಗ ನಾನು ಹೇಳುವ ಮಾತು ತಮಗೆ ಅರ್ಥವಾದೀತು; ಆಹಾರಧಾನ್ಯಗಳನ್ನು ನಿಯಂತ್ರಣ ಮಾಡುವುದಕ್ಕೆ ಮೊದಲು ಇದ್ದ ವ್ಯವಸ್ಥೆ ಏನು ಎಂಬುದನ್ನು ತಾವು ತಿಳಿದುಕೊಳ್ಳಬೇಕು? ಯುದ್ಧ ನಿಂತಕೂಡಲೆ ಆಹಾರಧಾನ್ಯಗಳ ನಿಯಂತ್ರಣವಾಗಲಿಲ್ಲ; ಯುದ್ಧವಾದಾಗ ತಮಗೆ ಚಿಕ್ಕವಯಸ್ಸು ಎಂದು ಕಾಣುತ್ತದೆ; ಯುದ್ಧ ಪ್ರಾರಂಭವಾದಾಗ ಅಂದರೆ 1939—40ರಲ್ಲಿ ನಾವು ಕಂಟ್ರೋಲ್ ಮಾಡಲಿಲ್ಲ; ಅಂದು ಧಾನ್ಯಗಳು ಇದ್ದರೂ ಸಹ ಜನರ ಕೈಗೆ ಸಿಗುತ್ತಿರಲಿಲ್ಲ, ಫ್ರೀ ಟ್ರೇಡ ಇತ್ತು; ಗೋಡೌನ್‌ಗಳಲ್ಲಿ ವ್ಯಾಪಾರಿಗಳು ಧಾನ್ಯಗಳನ್ನು ಇಟ್ಟಿದ್ದರೂ ಸಹ ವಿಪರೀತ ಬೆಲೆ ಹೇಳುತ್ತಿದ್ದರು. ಜನರಿಗೆ ಕೊಳ್ಳುವ ಶಕ್ತಿ ಇರಲಿಲ್ಲ. ಕಲ್ಕತ್ತಾದಲ್ಲಿ ಆ ಸಮಯದಲ್ಲಿ ಬೀದಿಬೀದಿಯಲ್ಲಿ ಜನರು ಸತ್ತು ಬಿದ್ದಿದ್ದರು. ಈ ಕಾರಣದಿಂದ ಇಡೀ ದೇಶದಾದ್ಯಂತ ಕಂಟ್ರೋಲ್ ಮಾಡಬೇಕಾಗಿ ಬಂತು. ನಂತರ 1952ನೇ ಇಸವಿಯಲ್ಲಿ ಫುಡ್ ಮಿನಿಸ್ಟರ್ ಆಗಿದ್ದ ಲೇಟ್ ಕಿದ್ವಾಯ್ ಅವರು ಡೀ-ಕಂಟ್ರೋಲ್ ಮಾಡಬೇಕೆಂದು ಹೇಳಿದಾಗ ಕಂಟ್ರೋಲನ್ನು ತೆಗೆಯಲಾಯಿತು. ಆದರೆ ಇತ್ತೀಚೆಗೆ ಪದಾರ್ಥಗಳನ್ನು ಸಾಕಷ್ಟು ಬೆಳೆಯಲಾಗಿದೆ ಎಂದು ನಾವು ಲೆಕ್ಕ ಹಾಕಿದಾಗಲೂ ಸಹ ಅದರ ಬೆಲೆಗಳು ಇಳಿಯುವುದಿಲ್ಲ; ಏತಕ್ಕೆ ಇಳಿಯುವುದಿಲ್ಲ ಎಂದರೆ ಇಂದು ಹೋರ್ಡಿಂಗ್ ಕ್ಯಪಾಸಿಟಿ ಕೇವಲ ವ್ಯಾಪಾರಗಾರರ ಕೈಯಲ್ಲಿ ಉಳಿದಿಲ್ಲ; ದೊಡ್ಡ ದೊಡ್ಡ ರೈತರ ಕೈಯಲ್ಲೂ ಸಹ ಇಂದು ಹೋರ್ಡಿಂಗ್ ಕ್ಯಪಾಸಿಟಿ ಬಂದುಬಿಟ್ಟಿದೆ. ನನಗೆ ಗೊತ್ತಿರುವಂತೆ ಒಂದು ಕಾಲಕ್ಕೆ ಕೇವಲ ಮಿಲ್ ಮಾಲೀಕರು ಬತ್ತವನ್ನು ದಾಸ್ತಾನು ಮಾಡುತ್ತಿದ್ದರು. ಆದರೆ ಇಂದು ನೂರು ಕ್ವಿಂಟಾಲ್ ಬತ್ತವನ್ನು ಬೆಳೆಯುವ ರೈತನು ಸಹ, ಅದರ ಜೊತೆಗೆ ಮತ್ತೆ 500—600 ಕ್ವಿಂಟಾಲ್ ಬತ್ತವನ್ನು ಸುಗ್ಗಿಯ ಕಾಲದಲ್ಲಿ 75—80 ರೂಪಾಯಿಗಳಿಗೆ ಕೊಂಡುಕೊಂಡು ದಾಸ್ತಾನು ಮಾಡಿ ಇಡುತ್ತಾನೆ. ಈಗ 100—120 ರೂಪಾಯಿಗಳ ಬೆಲೆ ಇದೆ. ಒಂದು ಕ್ವಿಂಟಾಲ್ ಬತ್ತಕ್ಕೆ 30—40 ರೂಪಾಯಿಗಳ ಲಾಭಸಿಗುತ್ತದೆಂಬ ಕಾರಣದಿಂದ ರೈತರಾದವರು ತಮ್ಮಲ್ಲಿ ಹಣ ಇಲ್ಲದಿದ್ದರೂ ಸಹ ಸಾಲ ತಂದಾದರೂ ಸಹ ಭತ್ತವನ್ನು ಶೇಖರಣೆ ಮಾಡಿ ಇಡುತ್ತಾರೆ. ಇದು ನಡೆಯುತ್ತಿರುವ ಪದ್ಧತಿ. ಎಂದು ಹಳ್ಳಿಹಳ್ಳಿಗಳಲ್ಲಿಯೂ ಕೂಡ ಭತ್ತವನ್ನು ಶೇಖರಿಸಿಟ್ಟು ದಾಸ್ತಾನು ಮಾರುಕಟ್ಟೆಗೆ ಬರದಂತೆ ಬಿಗಿ ಮಾಡುತ್ತಿದ್ದಾರೆ. ಇದನ್ನು ಹಾಗೆಯೇ ಬಿಟ್ಟರೆ ಏನಾಗುತ್ತದೆ?

ನಾನು ವಿಧಾನ ಪರಿಷತ್ತಿನಲ್ಲಿ ಮಾತನಾಡುವಾಗ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು, ಕಾಂಗ್ರೆಸ್ (ಒ) ಪಕ್ಷದವರು ಮತ್ತು ಇನ್ನು ಕೆಲವು ಪಕ್ಷದವರು ಈ ಕಾರ್ಯಕ್ರಮಕ್ಕೆ ನಮ್ಮದೇನು ವಿರೋಧವಿಲ್ಲ ಎಂದು ಹೇಳಿದರು. ಅದನ್ನು ನಾನು ನಂಬಿಕೊಂಡಿದ್ದೇನೆ. ಬೇರೆ ಮತಭೇದ ಇದ್ದರೆ ಅದು ನನಗೆ ಗೊತ್ತಿಲ್ಲ. ಈ ಹೋಲ್‌ಸೇಲ್ ಟ್ರೇಡಿಗೆ ನಮ್ಮದು ವಿರೋಧವಿಲ್ಲ ಎಂದು ಹೇಳಿದ್ದಾರೆ. ಇದನ್ನು ನಾನು ನಂಬಿದ್ದೇನೆ. ಆರ್ ಇಂಡಿಯಾ ಲೆವೆಲ್‌ನಲ್ಲಿ ಬೇರೆ ಬೇರೆ ರೀತಿಯಲ್ಲಿ ಹೇಳುತ್ತಿದ್ದಾರೆ. ಅಲ್ಲಿ ಕಾಂಗ್ರೆಸ್ (ಒ) ಪಕ್ಷದವರು ಕೆಲವರು ಒಪ್ಪುತ್ತಾರೆ, ಕೆಲವರು ಒಪ್ಪುತ್ತಿಲ್ಲ ಎಂದು ಕಾಣುತ್ತದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ನಿಮ್ಮಲ್ಲಿ ಸಮರ್ಥವಾದ ಯಂತ್ರ ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ಸಮರ್ಥವಾದ ಯಂತ್ರ ಇಲ್ಲ ಎಂದರೆ ನಾವು ಜನಗಳನ್ನು ಸೃಷ್ಟಿ ಮಾಡುವುದಕ್ಕಾಗುತ್ತದೆಯೇ? ಅವರನ್ನು ಕಳುಹಿಸಿ ಬೇರೆ ಯಾರನ್ನು ತರೋಣ? ಸೊಸೈಟಿಗಳನ್ನು ನಡೆಸುವವರು ಯಾವ ಜನ? ನಿಮ್ಮ ನೆಂಟರು ಅಥವಾ ನಮ್ಮ ನೆಂಟರು, ನಮ್ಮ ಜಾತಿಯವರು ಅಥವ ನಿಮ್ಮ ಜಾತಿಯವರು.

ಶ್ರೀ ಎಚ್. ಟಿ. ಕೃಷ್ಣಪ್ಪ.—ಅಧಿಕಾರ ನೂತ್ರವನ್ನು ಹಿಡಿದಿರತಕ್ಕವರು ಕಟ್ಟು ನಿಟ್ಟಾಗಿ ನಡೆಸಬೇಕು.

ಶ್ರೀ ಡಿ. ದೇವರಾಜ ಅರಸ್.—ಕಾನೂನು ಜಾರಿಗೆ ಕೊಡುವಾಗ ಅನೇಕ ಅಡಚಣೆಗಳು ಇರುತ್ತವೆ. ತಪ್ಪಿತಸ್ಥರನ್ನು, ಹೋರ್ಡರ್ಸ್ ಅನ್ನು ಸಿಕ್ಕಾಪಟ್ಟೆ ಯಾರನ್ನೂ ಬಿಡುತ್ತಾ ಇಲ್ಲ. ತಪ್ಪಿತಸ್ಥರನ್ನು, ಹೋರ್ಡರ್ಸ್ ಅನ್ನು ಯಾರನ್ನು ಹಿಡಿಯುತ್ತಾರೆ ಅವರನ್ನೂ ಯಾರನ್ನೂ ಸಿಕ್ಕಾಪಟ್ಟೆ ಬಿಡುತ್ತಿಲ್ಲ. ನಾವು ಆ ಪಕ್ಷ, ಈ ಪಕ್ಷ ಎಂದು ಪಕ್ಷಪಾತ ದಾಕ್ಷಿಣ್ಯ ಇಲ್ಲದೆ ತಪ್ಪಿತಸ್ಥರನ್ನು, ಹೋರ್ಡರ್ಸ್ ಅನ್ನು ಹಿಡಿಯುತ್ತೇವೆ. ಆ ರೀತಿ ಹಿಡಿದವರನ್ನು ಯಾವ ದಾಕ್ಷಿಣ್ಯಕ್ಕೂ ಒಳಪಟ್ಟು ಯಾರನ್ನೂ ಬಿಟ್ಟಿಲ್ಲ. ನಮ್ಮದು ತಪ್ಪು ಇದ್ದರೆ ಹೇಳಿ ಒಪ್ಪಿಕೊಳ್ಳುತ್ತೇವೆ. ನಾವು ಯಾವ

ದಾಕ್ಷಿಣ್ಯಕ್ಕೂ ಒಳಗಾಗುವುದಿಲ್ಲ. ಬೆಂಗಳೂರಿನಲ್ಲಿ ರೈಡ್ ಮಾಡಿದಾಗ ಅನೇಕ ಜನ ವಿಧಾನ ಸೌಧದ ಮುಂದೆ ಬಂದು ನಿಂತುಕೊಂಡು ವ್ಯಾಪಾರಸ್ಥರಿಗೆ ತೊಂದರೆ ಮಾಡುತ್ತೀರಿ ಎಂದು ಹೇಳಿದರು. ಅವರ ಮಾತಿಗೆ ನಾವು ಕವಿಗೊಡಲಿಲ್ಲ. ನಾವು ಯಾವ ಕ್ರಮವನ್ನು ಅನುಸರಿಸಬೇಕೋ ಅದನ್ನು ಅನುಸರಿಸಿಕೊಂಡು ಬಂದಿದ್ದೇವೆ. ಬೇರೆ ಬೇರೆ ಕಡೆ ಎಲ್ಲೆಲ್ಲಿ ದಾಸ್ತಾನು ಮಾಡಿದ್ದಾರೆ ಎಂದು ವರ್ತಮಾನ ಬರುತ್ತದೆಯೋ ಅಂಥಾ ಕಡೆ ರೈಡ್ ಮಾಡಿಯುತ್ತಿದ್ದೇವೆ. ಒಂದು ಮುಖ್ಯ ವಿಚಾರವೇನೆಂದರೆ ನಮ್ಮ ರಾಜ್ಯದಲ್ಲಿ ಆಹಾರದ ಪದಾರ್ಥಗಳ ಉತ್ಪಾದನೆ ಹೋದ ವರ್ಷ 60 ಲಕ್ಷ ಟನ್ ಇತ್ತು. ಈ ವರ್ಷ 47 ಲಕ್ಷ ಟನ್ನಿಗೆ ಇಳಿದಿದೆ. ನಮಗೆ 13-14 ಲಕ್ಷ ಟನ್ ಆಹಾರ ಧಾನ್ಯದ ಕೊರತೆ ಇದೆ. ಈ ಕಾರಣದಿಂದ ನಾವು ನಮ್ಮ ರಾಜ್ಯದಲ್ಲಿ ಅಭಾವಕ್ಕೆ ತುತ್ತಾಗಿದ್ದೇವೆ. ಮತ್ತು ಸ್ವಲ್ಪ ಹೋರ್ಡಿಂಗ್ ಕೂಡ ಇದೆ. ಅದನ್ನು ನಿಲ್ಲಿಸಬೇಕು ಎಂದರೆ ಎಲ್ಲರೂ ಸೇರಿ ಒಟ್ಟಿಗೆ ಕೆಲಸ ಮಾಡಬೇಕು ಎಂದು ನಾನು ಅನೇಕ ಸಲ ಈ ಸಭೆಯಲ್ಲಿ ಹೇಳಿದ್ದೇನೆ. ಬೆಂಗಳೂರಿನಲ್ಲಿಯಾಗಲೀ ಹಾಸನದಲ್ಲಾಗಲೀ ನಾವು ಎಲ್ಲೆಲ್ಲಿಗೆ ಎಷ್ಟೆಷ್ಟು ಆಹಾರ ಪದಾರ್ಥವನ್ನು ಕಳುಹಿಸುತ್ತೇವೆಯೋ ಅದನ್ನು ಸರಿಯಾಗಿ ಹಂಚಿ ಅದು ಜನರ ಕೈಗೆ ಸಿಕ್ಕುವ ಹಾಗೆ ಮಾಡಬೇಕು ಎನ್ನುವ ದೃಷ್ಟಿಯಿಂದ ಎಲ್ಲಾ ತಾಲ್ಲೂಕು ಮಟ್ಟಗಳಲ್ಲಿಯೂ ಒಂದು ಪೆಜಿಲೆನ್ಸ್ ಸಮಿತಿಯನ್ನು ಮಾಡೋಣ ಎಂದಿದ್ದೇವೆ. ಅದರಲ್ಲಿ ನಮ್ಮ ಖಾಸಗೀ ಜನ ಎಂದರೆ ಮುಖಂಡರುಗಳನ್ನು ಮತ್ತು ಶಾಸಕರನ್ನೂ ನೇಮಕ ಮಾಡಬೇಕಾಗುತ್ತದೆ. ಆ ಸಮಿತಿಯವರು ಆಯಾ ತಾಲ್ಲೂಕಿಗೆ ಬಂದಂತಹ ಸೀಮೆ ಎಣ್ಣೆಯಾಗಲೀ, ಸಿಮೆಂಟ್ ಆಗಲಿ, ಆಹಾರಧಾನ್ಯವಾಗಲೀ, ಗೋಧಿಯಾಗಲೀ, ಗೋಧಿ ಪ್ರಾಡಕ್ಟ್ ಆಗಲೀ, ಅಕ್ಕಿಯಾಗಲೀ, ಸಕ್ಕರೆಯಾಗಲೀ ಎಲ್ಲವನ್ನೂ ಸಹ ಒಂದೊಂದು ಪಂಚಾಯಿತಿಗೆ ಇಷ್ಟಿಷ್ಟು ಎಂದು ಹಂಚಿದರೆ ಅನುಕೂಲವಾಗುತ್ತದೆ. ಅವರು ಮೇಲ್ವಿಚಾರಣೆ ಮಾಡಿದರೆ ದೂರುಗಳು ಬಹಳ ಮಟ್ಟಿಗೆ ಕಡಿಮೆಯಾಗುತ್ತವೆ.

ಶ್ರೀ ಪಾಟೀಳ್ ನಾಗರಾಜ್.—ಆ ಸಮಿತಿಗಳಲ್ಲಿ ಎಲ್ಲಾ ಪಾರ್ಟಿಗಳವರು ಇರುವ ತರಹ ಮಾಡಿ.

ಶ್ರೀ ಡಿ. ದೇವರಾಜ ಅರಸ್.—ಅದರಲ್ಲಿ ಪಾರ್ಟಿಯೇ ಬೇಡ ಎಲ್ಲರೂ ಸೇರಿ ಮಾಡೋಣ.

ಶ್ರೀ ಎಚ್. ಎಸ್. ಸಿದ್ದಪ್ಪ.—ಮಾನ್ಯ ಸದಸ್ಯರಾದ ಹನುಮೇಗೌಡರ ವಾದ ಏನೆಂದರೆ ನಾವು ತಪ್ಪಿತಸ್ಥರನ್ನು ಹಿಡಿದು ಕೊಟ್ಟರೆ ಅವರಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ. ಅವರ ಪಾರ್ಟಿಯವರು ಯಾರಾದರೂ ಹಿಡಿದು ಕೊಟ್ಟರೆ ಅವರ ಮೇಲೆ ಕ್ರಮತೆಗೆದುಕೊಳ್ಳುತ್ತಾರೆ ಎಂದು ಅವರ ವಾದ.

ಶ್ರೀ ಡಿ. ದೇವರಾಜ ಅರಸ್.—ಹಾಗೇನಾದರೂ ಮಾಡಿದ್ದರೆ ನನಗೆ ಕಾನ್‌ಫಿಡೆಷಿಯಲ್ ಆಗಿ ತಿಳಿಸಿ.

ಶ್ರೀ ಎಚ್. ಡಿ. ದೇವೇಗೌಡ.—ತಾವು ಕೆಲವರಿಗೆ ಷಲ್ಟರ್ ಕೊಟ್ಟಿದ್ದೀರಿ ಎಂದು ಏನು ಹೇಳಿದ್ದಾರೆ ಆ ಬಗ್ಗೆ ನಾನು ಸ್ಪೀಪಿಂಗ್ ರಿಮಾರ್ಕ್ಸ್ ಮಾಡುವುದಿಲ್ಲ. ಕೆಲವರು ಹಣ ಸಂಪಾದನೆ ಮಾಡುವುದಕ್ಕೆ ಹೊರಟು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುವ ಪ್ರಸಂಗ ಬಂದಿದೆ. ಕೆಲವು ಅಸೆಂಬ್ಲಿ ಮತ್ತು ಪಾರ್ಲಿಮೆಂಟ್ ಸದಸ್ಯರಾಗಿರುವವರು ಮನೆಕಟ್ಟುವುದಕ್ಕೆ ಎಂದು ಹೇಳಿ ಒಂದು ಸಾವಿರ ಮೂಜೆ ಸಿಮೆಂಟ್ ತೆಗೆದುಕೊಂಡು ಹೋಗಿ ಒಂದು ಮೂಜೆಗೆ 25 ರೂಪಾಯಿಗಳಂತೆ ವಾರಾಟ ಮಾಡಿದ್ದಾರೆ. ಅಂಥವರನ್ನು ನದೆ ಬಡಿಯುತ್ತೀರಾ ?

Sri D. DEVARAJ URS.—I will be extremely grateful to you if you could give me that information. I can assure you Mr. Deve Gowda whether he belongs to my party or any other party, I am going to take action.

ಶ್ರೀ ಎಚ್. ಎಸ್. ಸಿದ್ದಪ್ಪ.—ಅರಸೀಕೆರೆ ತಾಲ್ಲೂಕು ಅಭಿವೃದ್ಧಿ ಮಂಡಲಯಲ್ಲಿ ರಿಲೀಫ್ ಕಾಮಗಾರಿಗೆ ಎಂದು ಹೇಳಿ 4 ಸಾವಿರ ಚೀಲ ಸಿಮೆಂಟ್ ತರಿಸಿ ಅದನ್ನು ಒಂದು ಮೂಜೆಗೆ 16 ರೂಪಾಯಿಗಳಂತೆ ವಾರಾಟಮಾಡಿದ್ದಾರೆ. ಅದನ್ನು ಕೆಲವರು ತಾಲ್ಲೂಕು ಅಭಿವೃದ್ಧಿ ಕಮಿಟಿಯ ಮೀಟಿಂಗ್‌ನಲ್ಲಿ ಪ್ರಸ್ತಾಪ ಮಾಡಿದಾಗ ಹೋಗಲು ಬಿಡಿ, ಇನ್ನು ಮುಂದೆ ಹಾಗೆ ಮಾಡಬೇಡಿ ಎಂದು ಹೇಳಿದರು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ನಿಮ್ಮ ಪಕ್ಷದ ಎಂದರೆ ಆಡಳಿತ ಕಾಂಗ್ರೆಸ್ ಪಕ್ಷದ ವರಿಷ್ಠ ರೊಬ್ಬರು ಒಬ್ಬರಿಗೆ ಸಿಮೆಂಟ್ ಮತ್ತು ಜಿಂಗ್‌ಷೀಟ್ಸ್‌ಗೆ ಪರ್ಮಿಟ್ ಕೊಡಿಸಿದರು. ಅವರು ಯಾವ ಉದ್ದೇಶಕ್ಕಾಗಿ ಸಿಮೆಂಟ್ ಮತ್ತು ಜಿಂಗ್‌ಷೀಟನ್ನು ತೆಗೆದುಕೊಂಡರೋ ಆ ಉದ್ದೇಶವನ್ನು ನೆರ ವೇರಿಸದೆ ಅದನ್ನು ಹೆಚ್ಚಿನ ಬೆಲೆಗೆ ಮಾರಿ 40 ಸಾವಿರ ರೂಪಾಯಿ ಸಂಪಾದನೆ ಮಾಡಿಕೊಂಡಿದ್ದಾರೆ. ಈ ಬಗ್ಗೆ ವಿವರವಾಗಿ ತಮಗೆ ಪತ್ರಮುಖೇನ ತಿಳಿಸುತ್ತಾರೆ. ಆದ್ದರಿಂದ ಇಂಥಾದ್ದರ ಬಗ್ಗೆ ಕಟ್ಟುನಿಟ್ಟಾದ ಕ್ರಮವನ್ನು ತೆಗೆದುಕೊಂಡು ದೇಶದಲ್ಲಿ ಸ್ವಲ್ಪ ಭಯ ಹುಟ್ಟಿಸುತ್ತೀರಾ?

ಶ್ರೀ ಕೆ. ಎಚ್. ಹನುಮೇಗೌಡ.—ಹಾಸನದಲ್ಲಿ ಯಾರೋ ವ್ಯಾಪಾರಗಾರರು ಮಾರಾಟಕ್ಕೆ ತಂದಂತಹ 2 ಲಾರಿ ಎಂದರೆ 200 ಮೂಟೆ ಅಕ್ಕಿಯನ್ನು ಅಧಿಕಾರಿಗಳು ಸೀಜ್‌ಮಾಡಿಕೊಂಡು ಬಂದರು. ಆ ಅಕ್ಕಿ ಒಂದು ಕೆ.ಜಿ.ಗೆ 2-60 ರೂಪಾಯಿಗಳಾಗುತ್ತದೆ. ಅವರು ಆ ಅಕ್ಕಿಯನ್ನು ಇಟ್ಟುಕೊಂಡು ಯಾವುದೋ ಕಂದಂ ಅಕ್ಕಿಯನ್ನು ಬಡಜನಗಳಿಗೆ ಹಂಚಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಇರಬಹುದು. ನನ್ನ ಪ್ರಶ್ನೆ ಏನೆಂದರೆ ನನ್ನ ಗಮನಕ್ಕೆ ಶ್ರೀಮಾನ್ ದೇವೇಗೌಡರು ಮತ್ತು ಶ್ರೀಮಾನ್ ಪುಟ್ಟಸ್ವಾಮಯ್ಯನವರು ಹೇಳಿದಂತಹ ನಿದರ್ಶನ ಗಳು ಒಂದು ಪಕ್ಷದವರಿಗೆ ದಾಕ್ಷಿಣ್ಯ ತೋರಿಸಿ ನಾನು ಅವುಗಳನ್ನು ಕೈಬಿಟ್ಟಿದ್ದೇನೆ ಎನ್ನುವ ಅನು ಮಾನ ತಮಗೆ ಇದ್ದರೆ ನಾನು ಈ ಸಭೆಯ ಮುಂದೆ ಹೇಳುತ್ತೇನೆ ತಾವು ಆ ಅನುಮಾನವನ್ನು ಬಿಡಿ. ನಾನು ಇರುವ ನಿಜಾಂಶವನ್ನು ಹೇಳುತ್ತೇನೆ, ನನ್ನ ಗಮನಕ್ಕೆ ಆ ವಿಚಾರ ಬಂದಿಲ್ಲ. ತಮ್ಮಲ್ಲಿ ನನ್ನ ಪ್ರಾರ್ಥನೆ ಏನೆಂದರೆ ನಮ್ಮ ಪಕ್ಷದವರು ಹೇಳಿದ್ದರಲ್ಲಿ ಹುರುಳಿದೆ ಎಂದು ಕ್ರಮತೆಗೆದು ಕೊಳ್ಳುತ್ತೇನೆ ಎಂದೂ, ವಿರೋಧ ಪಕ್ಷದವರು ಹೇಳಿದ್ದರಲ್ಲಿ ಹುರುಳಿಲ್ಲ ಎಂದು ಬಿಡುತ್ತೇನೆಂದು ತಾವು ಅನುಮಾನವನ್ನು ಇಟ್ಟುಕೊಂಡಿದ್ದರೆ ಆ ರೀತಿ ತಾವು ಅನುಮಾನವನ್ನು ಇಟ್ಟುಕೊಳ್ಳಬೇಡಿ. ತಮಗೆ ಯಾವುದೇ ಕೇಸು ಗೊತ್ತಿದ್ದರೆ ತಿಳಿಸಿ ಖಂಡಿತಾ ಕ್ರಮತೆಗೆದುಕೊಳ್ಳುತ್ತೇನೆ. ಇದರಲ್ಲಿ ಹೆದರಿಕೆ ಮತ್ತು ದಾಕ್ಷಿಣ್ಯವನ್ನು ಇಟ್ಟು ಕೊಳ್ಳುವುದಕ್ಕಾಗುವುದಿಲ್ಲ. ಇದು ಜನಗಳಿಗೆ ಸಂಬಂಧಪಟ್ಟ ವಿಚಾರ. ನಾನು ದಾಕ್ಷಿಣ್ಯಕ್ಕೆ ಒಳಗಾಗುತ್ತೇನೆ ಎಂದು ತಿಳಿದುಕೊಳ್ಳಬೇಡಿ. ಆ ರೀತಿ ಮಾಡಿದರೆ ತಪ್ಪಾಗುತ್ತದೆ. ಅನ್ಯಾಯ ಮಾಡಿದಂತಾಗುತ್ತದೆ. ಆಮೇಲೆ ಶ್ರೀಮಾನ್ ವಾಟಾಳ್‌ನಾಗರಾಜ್ ಅವರು ಕಮಿಟಿಗಳನ್ನು ಮಾಡುವಾಗ ಎಲ್ಲಾ ಪಕ್ಷದವರನ್ನು ಕಮಿಟಿಯಲ್ಲಿ ಹಾಕಬೇಕೆಂದು ಹೇಳಿದರು. ಅದರಲ್ಲಿ ಆ ಪಕ್ಷ ಈ ಪಕ್ಷ ಎಂದಲ್ಲ, ಯಾರೇ ಆಗಲಿ ಜನಗಳ ವಿಷಯದಲ್ಲಿ ಸ್ವಲ್ಪ ಅನುಕಂಪ ಇಟ್ಟುಕೊಂಡು ನಿರ್ದಾಕ್ಷಿಣ್ಯವಾಗಿ ಕೆಲಸ ಮಾಡತಕ್ಕ ಜನಗಳನ್ನು ಆ ಕಮಿಟಿಯಲ್ಲಿ ಹಾಕೋಣ ಇವತ್ತು ಸಿಮೆಂಟಿನ ಅಭಾವ ಇದೆ. ಇದಕ್ಕೆ ಕಾರಣವೇನೆಂದರೆ, ಮುಳೆಯ ಅಭಾವವಿಂದ ಬೆಳೆ ಯೆಲ್ಲಾ ಹೋಗಿರುವುದಲ್ಲದೆ ವಿದ್ಯುಚ್ಛಕ್ತಿಯ ಕೊರತೆ ಸಹ ಬಂದಿದೆ.

ಶ್ರೀ ಎಚ್. ಡಿ. ದೇವೇಗೌಡ.—ಮಂಗಳೂರಿನಲ್ಲಿ ಸಿಮೆಂಟ್ ಒಂದು ಮೂಟೆಗೆ 40 ರೂಪಾ ಯಿಯಂತೆ ಮಾರುತ್ತಿದ್ದಾರಂತೆ.

ಶ್ರೀ ಡಿ. ದೇವರಾಜ ಅರಸ್.—ವಿದ್ಯುಚ್ಛಕ್ತಿ ಅಭಾವದಿಂದ ಸಿಮೆಂಟ್ ಪ್ರೊಡಕ್ಷನ್ ಕಡಿಮೆ ಯಾಯಿತು. ಅದೇ ರೀತಿ ನೂಲಿನ ಅಭಾವ ಇದೆ. ತಮಿಳ್ನಾಡಿನಲ್ಲಿ ಹೆಚ್ಚು ಗಿರಣಿಗಳು ಇದ್ದರೂ ಅಲ್ಲಿ 75 ಪರ್‌ಸೆಂಟ್ ವಿದ್ಯುಚ್ಛಕ್ತಿ ಖೋತಾ ಆಗಿರುವುದರಿಂದ ನೂಲಿನ ತಯಾರಿ ಕಡಿಮೆಯಾಗಿ ಈ ರೀತಿಯಾಗಿದೆ. ಹೀಗೆ ಇದು ಒಂದು ವಿಶಿಯಸ್ ಸರ್ಕಲ್ ಇದ್ದ ಹಾಗೆ. ಈಗ ಇರುವ ಪದಾರ್ಥಗಳನ್ನು We have now taken control of the entire distribution of cement. We want to distribute it through permits. There is no other way. ನಾವು ವಿಚಕ್ಷಣೆಯಿಂದ ಹಂಚತಕ್ಕ ಮಾರ್ಗವನ್ನು ಕಂಡುಹಿಡಿಯಬೇಕು.

ಇನ್ನು ವಿಂಟರ್ ಮತ್ತು ನಮ್ಮರ್ ರೇಸ್ ಕೋರ್ಸಿನ ವಿಚಾರದ ಬಗ್ಗೆ ಹೇಳುವುದಾದರೆ, ಸಭೆಯ ಅಭಿಪ್ರಾಯ ಯಾವ ರೀತಿ ಇದೆ ಆ ರೀತಿ ಮಾಡಬಹುದು. ಅದರಿಂದ ಲಕ್ಷಾಂತರ ರೂಪಾಯಿ ಸಂಪಾದನೆ ಮಾಡಬೇಕೆಂಬ ಉದ್ದೇಶ ನನಗಂತೂ ಇಲ್ಲ. ಮಾಮೂಲಾಗಿ ಪರ್ಮಿಶನ್ ಅವರಿಗೆ ಕೊಡಬಹುದೆಂದು ಇಲಾಖೆಯಿಂದ ಕಳಿಸಿದ್ದಾರೆಂದು ಕಾಣುತ್ತದೆ. ಹಿಂದೆ ಒಂದು ಸಾರಿ ಅದನ್ನು ಅಲ್ಲಿಂದ ಶಿಫ್ಟ್ ಮಾಡಬೇಕೆಂಬ ಪ್ರಶ್ನೆ ಬಂದಿತ್ತು. ಆಮೇಲೆ ನಮ್ಮಲ್ಲೇ ಕೆಲವರು ಬಹಳ ದೂರ ಅದನ್ನು ತೆಗೆದುಕೊಂಡು ಹೋದರೆ ತೊಂದರೆಯಾಗುತ್ತದೆಂದು ಹೇಳಿರುವುದರಿಂದ ಅದನ್ನು ಕೈಬಿಡಲಾಯಿತು. ಸದ್ಯದಲ್ಲಿ ಇದನ್ನು ಮುಂದುವರಿಸತಕ್ಕದ್ದು ಸೂಕ್ತವಲ್ಲವೆಂಬುದನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಅವಶ್ಯವಾದ ತೀರ್ಮಾನ ತಕ್ಷಣವಲ್ಲದಿದ್ದರೆ ತೆಗೆದುಕೊಳ್ಳುತ್ತೇವೆ.

ಇನ್ನು ಬಕೆಟ್ ಶಾಪ್ಸ್ ಎನ್ನುವುದರ ಬಗ್ಗೆ ಹೇಳುವುದಾದರೆ ಮದ್ರಾಸಿನಲ್ಲಿ, ಬೊಂಬಾಯಿಯಲ್ಲಿ, ಕಲ್ಕತ್ತದಲ್ಲಿ ಅಥವಾ ಬಾಂಬೆಯಲ್ಲಿ ರೇಸ್ ನಡೆಯುತ್ತಾ ಇದ್ದಾಗ, ಅಲ್ಲಿ ನಡೆಯುತ್ತಿರುವ ರೇಸಿನ ಫಲಿತಾಂಶಗಳ ಕಮ್ಯುನಿಕೇಶನ್ ಇವರಿಗೆ ಕೊಡುತ್ತಾರೆ. ಇಲ್ಲಿ ಜನರು ಇಂಥ ಬಕೆಟ್ ಶಾಪುಗಳಲ್ಲಿ ದುಡ್ಡು ಕಟ್ಟುತ್ತಾರೆ. ಅವರು ಕಟ್ಟಿದ ಕುದುರೆ ಗೆದ್ದರೆ, ಇಲ್ಲಿ ಹಣ ಹಂಚುತ್ತಾರೆ. ಅದಕ್ಕೆ ಕೆಲವು ಏಜೆಂಟರು ಇಲ್ಲಿ ಇದ್ದಾರೆ. ಕಾನೂನು ಪ್ರಕಾರ ಅದು ಇರಕೂಡದು ಎಂದು ಹೇಳಿದರೂ ಕದ್ದು ಇಧನ್ನು ಮಾಡುತ್ತಿದ್ದಾರೆ. ಯಾರನ್ನು ಇದನ್ನು ನೋಡುವುದಕ್ಕೆ ಹಾಕುತ್ತಾರೋ ಅವರನ್ನೇ ಬುಕ್ ಮಾಡಿಕೊಂಡು ವ್ಯವಹಾರ ಮಾಡುತ್ತಿದ್ದಾರೆ. ಕೆಲವರು ಇದನ್ನು ರೆಗ್ಯುಲರೈಸ್ ಮಾಡಬೇಕೆಂದು ಹೇಳುತ್ತಿದ್ದಾರೆ.

ಶ್ರೀ ಕೆ. ಎಂ. ನಾಗಣ್ಣ.—ಬಾಂಬೆ, ಕಲ್ಕತ್ತ, ಮದ್ರಾಸ್ ಇತ್ಯಾದಿ ಕಡೆಗಳಲ್ಲಿ ರೇಸ್ ನಡೆದರೆ, ಇಲ್ಲಿ ಈ ಬುಕ್ಕಿಗಳು ಇಲ್ಲಿಯ ಜನರಿಂದ ಹಣ ತೆಗೆದುಕೊಳ್ಳುತ್ತಾರೆ, ನಾನು ಇದರ ಬಗ್ಗೆ ಮಾತನಾಡಿದ್ದೇನೆ. ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲವೆಂದು ಕಾಣುತ್ತದೆ. ಇನ್ನೊಂದು ರೇಸ್ 9 ಕಿಂಗಳು ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ. ನಾನು ಸ್ಪೆಷಲ್ಸ್ ಹತ್ತಿರ ಮಾತನಾಡುವುದಿಲ್ಲ; ಏಕೆಂದರೆ ಅವರಿಗೆ ಬಡ ಜನರ ಕಷ್ಟ ಗೊತ್ತಾಗುವುದಿಲ್ಲವೆಂದು ಹೇಳಿದ್ದೇನೆ ಇದರ ಬಗ್ಗೆ ಮುಖ್ಯಮಂತ್ರಿಯವರ ಹತ್ತಿರ ಮಾತನಾಡುತ್ತೇನೆ ಎಂದು ಹೇಳಿದ್ದೇನೆ. ಆದ್ದರಿಂದ ಈ ವಿಂಟರ್ ರೇಸನ್ನು ತಾವು ನಡೆಸುವುದಕ್ಕೆ ಅವಕಾಶ ಮಾಡಿಕೊಡಬಾರದು ನಾನು ಚೀಫ್ ಸೆಕ್ರೆಟರಿಯವರಿಗೂ ಇದರ ಬಗ್ಗೆ ಹೇಳಿದ್ದೇನೆ. ಅವರು ಇದನ್ನು ಅರ್ಥ ಮಾಡಿಕೊಂಡಿದ್ದಾರೆ. ಈ ಇಲ್ಲೀಗಲ್ ಬೆಟ್ಟಿಂಗನ್ನು ತಪ್ಪಿಸಬೇಕು. ಇದರಲ್ಲಿ ಪೋಲೀಸರ ಕೈವಾಡ ಸಹ ಇದೆ. ಪೋಲೀಸರ ಕೈವಾಡ ಎಲ್ಲಿಯವರೆಗೆ ಇದೆಯೋ ಅಲ್ಲಿಯವರೆಗೆ ಇದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಆದ್ದರಿಂದ ಇಂಥ ಇಲ್ಲೀಗಲ್ ಬೆಟ್ಟಿಂಗನ್ನು ರೆಗ್ಯುಲರೈಸ್ ಮಾಡಬೇಡಿ ಎಂದು ಹೇಳುತ್ತಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ಕಾನೂನು ಪ್ರಕಾರ ಅದಕ್ಕೆ ತಿದ್ದುಪಡಿ ಮಾಡದೆ ಆಗುವುದಿಲ್ಲ. ಏನೇ ಆಗಲಿ ಈ ಬಕೆಟ್ ಶಾಪ್ಸ್, ಅಥವಾ ಬುಕ್ಕಿಗಳನ್ನು ರೆಗ್ಯುಲರೈಸ್ ಮಾಡುವುದಕ್ಕೆ ಅವಕಾಶ ಇಲ್ಲ. ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ಇಷ್ಟು ಮಾತ್ರ ತಮಗೆ ಹೇಳಲು ಅಪೇಕ್ಷೆ ಪಡುತ್ತೇನೆ.

Mysore Land Reforms (Amendment) Bill, 1973, as reported by the J.S.C

Motion to Consider

(Debate contd.)

ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ಸಭೆಯು ಮುಂಪೆ ಮಂಡಿಸಿರತಕ್ಕ ಭೂಸುಧಾರಣೆಯ ವಿಚಾರದಲ್ಲಿ ಈ ಬಿಲ್ಲನ್ನು ವಿರೋಧ ಮಾಡುತ್ತ ಕೆಲವು ವಿಷಯಗಳನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ಮೊಟ್ಟ ಮೊದಲನೆಯದಾಗಿ ಈ ಮಸೂದೆಯಲ್ಲಿ ಹಿಂದೆ ಇದರಲ್ಲಿ ವಿಧವೆಯರಿಗೆ, ಮೈನರ್ ಮಕ್ಕಳಿಗೆ ಮತ್ತು ಅಂಗವಿಕಲರಿಗೆ ಹಾಗೂ ಸೈನ್ಯದಲ್ಲಿರತಕ್ಕವರಿಗೆ ತಮ್ಮ ಭೂಮಿಯನ್ನು ಗೇಣಿಗೆ ಕೊಟ್ಟುಕೊಂಡು ಜೀವನ ಮಾಡುವುದಕ್ಕೆ ಒಂದು ಅವಕಾಶವಿತ್ತು. ಅದನ್ನು ಇದರಲ್ಲಿ ತಪ್ಪಿಸಿದ್ದಾರೆ. ಇಷ್ಟು ಜನರಿಗೆ ಈ ಮಸೂದೆಯಲ್ಲಿ ಯಾವ ರಕ್ಷಣೆಯೂ ಇಲ್ಲ. ಅದರಲ್ಲೂ ಸೈನ್ಯದಲ್ಲಿ ಕೆಲಸ ಮಾಡತಕ್ಕವರಿಗೂ ಕೂಡ ಆ ಅವಕಾಶವನ್ನು ತಪ್ಪಿಸಿರುವುದು ಬಹಳ ಶೋಚನೀಯವಾದದ್ದು.

ಇನ್ನು ನಮ್ಮ ರಾಜ್ಯದಲ್ಲಿ ಅನೇಕ ವಿದ್ಯಾ ಸಂಸ್ಥೆಗಳೂ ಮತ್ತು ರಿಲಿಜಿಯಸ್ ಇನ್‌ಸ್ಟಿಟ್ಯೂಷನ್ನುಗಳೂ ಇವೆ. ಇವುಗಳಿಗೆಲ್ಲಾ ಹಿಂದೆ ಇದ್ದ ಕಾನೂನಿನಲ್ಲಿ ಒಂದು ರಿಯಾಯಿತಿಯನ್ನು ಕೊಡಲಾಗಿತ್ತು. ಉದಾಹರಣೆಗೆ ಕೆ. ಎಲ್. ಇ. ಸೊಸೈಟಿ.....

***Matter expunged as ordered by the Chair.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವಿಧವೆಯರಿಗೆ ಪಾತ್ರು ಮೈನರ್ ಮಕ್ಕಳಿದ್ದ ನಂತಾರ ದಲ್ಲಿ ಕೂಲಿ ಆಳುಗಳನ್ನು ಇಟ್ಟು ವ್ಯವಸಾಯ ಮಾಡಿಸುವುದಕ್ಕೆ ಅವಕಾಶವಿದೆ. ಆದುದರಿಂದ ಅದನ್ನು ಗೇಣಿಗೆ ಕೊಡಬಾರದು ಎಂದು ಹೇಳಿದೆ. ಸ್ಥೈರ್ಯದಲ್ಲಿರತಕ್ಕವರಿಗೆ ಆ ರಿಯಾಯಿತಿ ಈಗಲೂ ಇದೆ. ಸಾಮಾನ್ಯವಾಗಿ ಅವಿಭಕ್ತ ಕುಟುಂಬದಲ್ಲಿ ಇರತಕ್ಕ ಯಾರಾದರೂ ಆ ಜಮೀನನ್ನು ನೋಡಿಕೊಂಡು ವ್ಯವಸಾಯ ಮಾಡಿಸಬಹುದು.

ಶ್ರೀ ಕೆ. ಎಂ. ನಾಗಣ್ಣ.—ತಮ್ಮ ಉತ್ತರವನ್ನು ಈಗ ಕೇಳಿದ ಮೇಲೆ ಈಗಲೇ ತಮಗೆ ನಾನು ಒಂದು ಪ್ರಶ್ನೆ ಕೇಳಬೇಕಾಗುತ್ತದೆ. ಅದೇನೆಂದರೆ ಸುಮಾರು 60-70 ವರ್ಷ ವಯಸ್ಸಾದ ಒಬ್ಬ ವಿಧವೆ ಅಥವಾ ಮೈನರ್ ಮಕ್ಕಳು ಸ್ವಂತವಾಗಿ ವ್ಯವಸಾಯ ಮಾಡಿಸುವುದಕ್ಕೆ ಈ ವಿಧೆಸೆ ಸಾಧ್ಯವುಂಟೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವಿಧವೆಯರು, ಅಪ್ರಾಪ್ತ ವಯಸ್ಕರು ಮುಂತಾದವರೆ ಲ್ಲರೂ ಆಳುಗಳ ಮುಖಾಂತರ ವ್ಯವಸಾಯ ಮಾಡಿಸಬಹುದು. ಅವರು ಪಕ್ಕದಲ್ಲೇ ಇರುವುದರಿಂದ ಹೋಗಿ ನೋಡಬಹುದು. ಅವಿಭಕ್ತ ಕುಟುಂಬದಲ್ಲಿ ಇರುವವರು ಯಾರು ಬೇಕಾದರೂ ಮೇಲ್ವಿ ಚಾರಣೆ ಮಾಡಬಹುದು ಎಂಬ ಅವಕಾಶವಿರುವುದರಿಂದ ಸ್ವತಃ ಸಾಗುವಳಿ ಮಾಡಿಸುವುದಕ್ಕೆ ಅವಕಾಶವಿದೆ, ಹೀಗೆ ಅನೇಕ ಕುಟುಂಬಗಳವರು ಸ್ವತಃ ಮಾಡಿಸುತ್ತಿದ್ದಾರೆ, ಗೇಣಿದಾರರ ಮೂಲಕ ಸಾಗುವಳಿ ಮಾಡಿಸಲು ಅವಕಾಶವಿರಬಾರದೆಂಬುದೇ ಈ ಮಸೂದೆಯ ಉದ್ದೇಶ.

ಶ್ರೀ ಕೆ. ಎಂ. ನಾಗಣ್ಣ.—ನಾನು ಹೇಳುವುದನ್ನು ಹೇಳುತ್ತೇನೆ, ಕೊನೆಯಲ್ಲಿ ಜವಾಬು ಕೊಡುವಾಗ ಯೋಚನೆ ಮಾಡಿ ಯಾವುದು ಒಳ್ಳೆಯದೋ ಆ ರೀತಿ ಮಾಡುವುದಾಗಿ ಹೇಳಬಹುದು. ನನಗೆ ವ್ಯವಸಾಯದಲ್ಲಿ ಅನುಭವವಿಲ್ಲ, ರೋಪದೋಷಗಳಿರಬಹುದು. ನನಗೆ ತಿಳಿದುದನ್ನು ಸಲಹೆ ಮಾಡುತ್ತೇನೆ, ಮಂತ್ರಿಗಳು ಅವರಿಗೆ ನೂಕ್ತ ಕಂಡಂತೆ ಮಾಡಬಹುದು. ಕೆ. ಎಲ್. ಇ. ಸೊಸೈಟಿಯು ವಿದ್ಯಾ ಸಂಸ್ಥೆಗಳನ್ನು ನಡೆಸುವುದು, ಅದು ಎಷ್ಟೋ ಸಾಮಾನ್ಯ ಜನರಿಗೆ ಸಹಾಯ ಮಾಡುವುದು, ಅದು ಎಲ್ಲರಿಗೂ ಗೊತ್ತಿದೆ. ಅದಕ್ಕಿರುವ ಜಮೀನಿನ ಸಹಾಯದಿಂದ ಆ ಸೊಸೈಟಿಯು ವಿದ್ಯಾ ಸಂಸ್ಥೆಗಳನ್ನು ನಡೆಸುವುದು. ಆ ಸಂಸ್ಥೆಯವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಅವರಿಗೆ ದಾನವಾಗಿ ಕೆಲವರು ಜಮೀನು ಕೊಟ್ಟಿದ್ದಾರೆ. ಅದನ್ನು ಸ್ವಂತಕ್ಕೆ ಉಪಯೋಗ ಮಾಡಿಕೊಳ್ಳುತ್ತಿಲ್ಲ. ಆ ಜಮೀನಿನ ಉತ್ಪತ್ತಿಯನ್ನು ಸಂಸ್ಥೆಗಾಗಿ ಉಪಯೋಗ ಮಾಡುತ್ತಿರುವಾಗ ಅವರಿಗಿರುವ ಜಮೀನನ್ನು ಆ ಸಂಸ್ಥೆಯವರಿಗೇ ಬಿಡಬೇಕಾದ್ದು ಅವಶ್ಯಕ. ದೇವಸ್ಥಾನಗಳಲ್ಲ ದೇವರಿಗಾಗಿ ಜಮೀನು ಕೊಟ್ಟಿರುತ್ತಾರೆ, ಅದರ ಉತ್ಪತ್ತಿಯಿಂದ ದೇವರ ಸೇವೆ ನಡೆಯಬೇಕು, ಅರ್ಚಕರಿಗೆ ಮನೆ ಕಟ್ಟಿಸಿಕೊಟ್ಟಿದ್ದಾರೆ. ಹಾಗಿರುವಾಗ ಅದು ದೇವಸ್ಥಾನಕ್ಕೆ ಬೇಡ, ತೆಗೆದು ಕೊಳ್ಳುತ್ತೇವೆ ಎಂದು ಹೇಳುವುದು ನ್ಯಾಯವಲ್ಲ. ಈಗ ತಿರುಪತಿ ದೇವಸ್ಥಾನವಿದೆ, ಅದಕ್ಕೆ ಜೆಂಗಳೂರು ಕಾರ್ಪೊರೇಷನ್ನಿಗಿರುವಷ್ಟು ವರಮಾನವಿದೆ, ಅಲ್ಲಿ ಒಳ್ಳೆಯ ಕೆಲಸಮಾಡುವರು ವಿದ್ಯಾ ಸಂಸ್ಥೆಗಳನ್ನು ನಡೆಸುವರು. ಅದಕ್ಕೆ ಬೇಕಾದಷ್ಟು ಜಮೀನಿದೆ. ಒಂದುವೇಳೆ ಆ ದೇವಸ್ಥಾನ ಮೈಸೂರು ದೇಶದಲ್ಲಿದ್ದರೆ ಅದರ ಜಮೀನುಗಳನ್ನೂ ಕೊಡಬೇಕೆಂದು ಹೇಳುತ್ತಿದ್ದರೋ ಏನೋ. ಅಲ್ಲಿ ಲಕ್ಷಾಂತರ ಜನರ ಹಿಕ್ಕೆಯಿಷ್ಟಿಯಿಂದ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಸರಕಾರದ ಕೈಲಿ ಆ ಕೆಲಸವಾಗುವುದಿಲ್ಲವೆಂಬುದನ್ನು ಒಪ್ಪಿಕೊಳ್ಳಬೇಕು. ಇದು ಪಾಸ್ಪವಾಂಶ. ಇಂಥಾದ್ದು ರಾಜ್ಯದಲ್ಲಿ ಎಷ್ಟೋ ಇವೆ. ಅವುಗಳಿಗೆ ಅವಕಾಶ ಕೊಟ್ಟರೆ ಒಳ್ಳೆಯದು ಎಂದು ಸಲಹೆಮಾಡುತ್ತೇನೆ.

ಇನ್ನು ಜಮೀನುಗಳಿಗೆ ಸಂಬಂಧಪಟ್ಟ ಕೇಸುಗಳು ಸುಮಾರು 60 ಸಾವಿರ ತೀರ್ಮಾನವಾಗಿವೆ. ಇನ್ನೂ ಹತ್ತಾರು ಸಾವಿರ ಇಂಥ ಕೇಸುಗಳಿರಬಹುದು. ಅವನ್ನು ಡಿಸ್‌ಮಿಸ್ ಮಾಡಬೇಕು, ಕೋರ್ಟುಗಳಿಗೆ ಹೋಗುವುದಕ್ಕೆ ಅವಕಾಶವಿಲ್ಲ ಎಂದು ಹೇಳುವುದು ಸರಿಯೇ. 60 ಸಾವಿರ ಜನರಿಗೆ ಸಿಕ್ಕಿದ ರಿಯಾಯಿತಿ ಕೇವಲ 8–10 ಸಾವಿರ ಜನರಿಗೆ ಸಿಕ್ಕದಿರುವುದು ಅವರಿಗೆ ಅವಕಾಶ ಕೊಡದಿರುವುದು ಇದೆ, ಇದಕ್ಕೆ ಕಾರಣವೇನು ?

ಟ್ರಿಬ್ಯೂನಲ್ ಮಾಡಬೇಕೆಂದು ತೀರ್ಮಾನವಾಗಿದೆ. ಅದಕ್ಕೆ ಸ್ಥಳದ ಎಂ. ಎಲ್. ಎ. ಮತ್ತು ಇತರ ನಾಲ್ಕು ಸದಸ್ಯರು ಹಾಕಲ್ಪಡುವರು. ನನಗಾದರೂ ಇದರಿಂದ ಉಪಯೋಗವಿಲ್ಲ ಅನಿಸುವುದು. ಇದರಿಂದ ಅನ್ಯಾಯವಾಗುವುದೆಂದು ನಾನು ಭಾವಿಸಿದ್ದೇನೆ. ಇವಕ್ಕಾಗಿ ಸುಸಹೆಮಾಡುವುದು ಟ್ರಿಬ್ಯೂನಲ್ ಮಾಡಿ, ಆದರೆ ಅದಕ್ಕೆ ಒಬ್ಬರೇ ಜಡ್ಜ್ ಇರಬೇಕು. ಅವರು ನ್ಯಾಯಾಧಿಕಾರಿ ಯಾಗಿರಬೇಕು, ಎಂ. ಎಲ್. ಎ. ಮತ್ತು ಐಸಗೆ ಜನರು ಸದಸ್ಯರಾಗಿರುವುದು ಬೇಡ. ಎಂ. ಎಲ್. ಎ. ಇದ್ದರೆ ಅವರಿಗೆ ಚುನಾವಣೆಯಲ್ಲಿ ಯಾರು ಸಹಾಯ ಮಾಡಿರುವರೋ ಅವರಿಗೆ

ರಿಯಾಯಿತಿ ತೋರಿಸಬೇಕಾದ ಸಂದರ್ಭ ಬರುವುದು. ಇವರ್ಗಿಂದ ನ್ಯಾಯ ಸರಿಯಾಗಿ ಸಿಕ್ಕುವುದಿಲ್ಲ, ಆದುದರಿಂದ ಅಧಿಕಾರದಲ್ಲಿರುವವರನ್ನು ಜುಡಿಷಿಯಲ್ ಇಲಾಖೆ ಅಧಿಕಾರಿಗಳನ್ನು, ಏಕ ನ್ಯಾಯಾಧೀಶರನ್ನು ಟ್ರಿಬ್ಯೂನಲ್‌ಗೆ ಹಾಕುವುದು ಒಳ್ಳೆಯದು ಎಂದು ಸಲಹೆ ಮಾಡುತ್ತೇನೆ. ಮತ್ತೆ ಟ್ರಿಬ್ಯೂನಲ್ ಕೊಟ್ಟ ತೀರ್ಪಿನ ಮೇಲೆ ಅಪೀಲಿಗೆ ಅವಕಾಶವಿಲ್ಲ. ಮರ್ಡರ್ ಮಾಡಿರುವ ಪರಿಗೆ ಅಪೀಲು ಮಾಡಲು ಮತ್ತು ಕೇಸು ನಡೆಸಲು ಹಣ ಕೊಟ್ಟು ವಕೀಲರನ್ನು ಒದಗಿಸುವರು. ಹಾಗಿರುವಾಗ ಜಮೀನು ಕಳೆದುಕೊಂಡವರಿಗೆ ಟ್ರಿಬ್ಯೂನಲ್ ಅನ್ಯಾಯಮಾಡಿದರೆ ನ್ಯಾಯ ಪಡೆಯಲು ಅವಕಾಶ ಇಲ್ಲದಿದ್ದರೆ ಜನರಿಗೆ ಸ್ವಾತಂತ್ರ್ಯ ಬಂದು ಏನು ಪ್ರಯೋಜನವಾದಹಾಗಾಯ್ತು? 1947ರಿಂದ ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದಿದೆ ಎಂದು ಹೇಳುವಾಗ ಯಾರಿಗೂ ಕೂಡ ಅನ್ಯಾಯ ಪಾಗಲು ಅವಕಾಶವಿರಬಾರದು. ಅನ್ಯಾಯವಾದರೆ ಬೇರೆ ಕಡೆ ನ್ಯಾಯ ಪಡೆಯಲು ಅವಕಾಶ ವಿಲ್ಲದಿದ್ದರೆ ಜನತೆಗೆ ಸ್ವಾತಂತ್ರ್ಯವಿದ್ದ ಹಾಗಾಯಿತೆ? ಅದರಿಂದ ಪ್ರಯೋಜನ ಬಂದಂತಾಯಿತೆ ಎಂಬುದನ್ನು ಯೋಚನೆಮಾಡಿ. ಅಪೀಲಿಗೆ ಅವಕಾಶವಿರಲೇಬೇಕು ಎಂದು ಮನವಿ ಮಾಡುತ್ತೇನೆ. ಟ್ರಿಬ್ಯೂನಲ್‌ಗೆ ಜಡ್ಜಿಗಳೇ ಇರಬೇಕು, ನ್ಯಾಯಾಧೀಶರೇ ಇರಬೇಕು, ಪಾಸಗಿ ಜನರು ಮತ್ತು ಎಂ. ಎಲ್. ಎ. ಗಳು ಟ್ರಿಬ್ಯೂನಲ್ಲಿನಲ್ಲಿರಬಾರದು, ಟ್ರಿಬ್ಯೂನಲ್ಲಿನಲ್ಲಿನ್ಯಾಯ ದೊರೆಯದಿದ್ದರೆ ಅಪೀಲು ಹೋಗಲು ಅವಕಾಶವಿರಬೇಕೆಂದು ಎಂದು ಸಲಹೆಮಾಡುತ್ತೇನೆ.

ಇನ್ನೊಂದು, ಪ್ಲಾಂಟೇಷನಗೆ ರಿಯಾಯಿತಿ ಕೊಡಲಾಗಿದೆ. ಯಾವ ಕಾರಣದಿಂದ ಕೊಡಲಾಗಿದೆ? ಉಳುವವನೇ ಭೂಮಿಗೆ ಒಡೆಯನಾಗಬೇಕು ಎಂದು ಹೇಳುವಾಗ ಪ್ಲಾಂಟೇಷನ್ ಮಾಲೀಕರು ಸ್ವಂತವಾಗಿ ಮಾಡುವುದಿಲ್ಲ. ಅವರು ಆಳುಗಳಿಂದ ಕೆಲಸ ಮಾಡಿಸುವರು. ಹಾಗಿರುವಾಗ ಅವರಿಗೇಕೆ ರಿಯಾಯಿತಿ ಕೊಡಲಾಗಿದೆ? ಪ್ಲಾಂಟರುಗಳ ಹೆಂಡತಿಮಕ್ಕಳು ಕೆಲಸಮಾಡುವರೇ! ಇದನ್ನು ವಿರೋಧಿಸಬೇಕಾಗಿದೆ. ಇದು ತಾರತಮ್ಯವನ್ನು ಪ್ರೋತ್ಸಾಹ ತೋರಿಸುವುದು. ಇತರರಿಗೆ ಅವಕಾಶ ಕೊಡದೆ ಇವರಿಗೇಕೆ ಅವಕಾಶ ಕೊಡಲಾಗಿದೆ? ಇದು ತಪ್ಪು. ಇದಲ್ಲದೆ ಅವರಿಗೆ ಸಾವಿರಾರು ಎಕರೆ ಜಮೀನಿರುವುದು, ಅಂಥವರಿಗೆ ಸುಮ್ಮನೆ ಬಿಟ್ಟಿದ್ದಾರೆ. ಮುಂದೆ ತೊಂದರೆಯಾಗುವುದೆಂದು ಈಗಾಗಲೇ ಅನೇಕರು ಬಹಳ ಬುದ್ಧಿವಂತರು ಅವರಿಗೆ ಈ ಶಾಸನದಿಂದ ತೊಂದರೆಯಾಗದಹಾಗೆ ಏನು ಬೇಕೋ ಅದನ್ನು ಮಾಡಿಕೊಂಡಿದ್ದಾರೆ. ಅವರ ವಿಚಾರದಲ್ಲೇನು ಮಾಡಲಾಗಿದೆ ಎಂಬುದನ್ನು ಯೋಚನೆ ಮಾಡಬೇಕು. ಅಧ್ಯಕ್ಷರಿಗೆ ಬಹಳ ಜಮೀನಿದೆ, ಅವರು ಏನೋ ಮಾಡಿಕೊಂಡಿರಬಹುದು, ಇಲ್ಲದಿದ್ದರೆ ಸಿಕ್ಕಿಹಾಕಿಕೊಳ್ಳುವರು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನೇನೂ ಮಾಡಿಕೊಂಡಿಲ್ಲ.

ಶ್ರೀ ಕೆ. ಎ. ನಾಗಣ್ಣ.—ನಾವಿರಾರು ಎಕರೆ ಇರುವವರು ಅನೇಕರು ಈ ಕಾನೂನಿನಿಂದ ತಮಗೆ ತೊಂದರೆಯಾಗದಹಾಗೆ ಏನು ಬೇಕೋ ಅದನ್ನು ಮಾಡಿಕೊಂಡಿದ್ದಾರೆ. ಅದುದರಿಂದ ಅದಕ್ಕೆ ಅವಕಾಶವಿಲ್ಲದಂತೆ ಈ ಕಾನೂನನ್ನು 1960 ರಿಂದಲೇ ಜಾರಿಗೆ ಕೊಡಬೇಕು. ಅಲ್ಲಿಂದ ಬೇರೆಯವರಿಗೆ ವರ್ಗಾಯಿಸಿರುವುದನ್ನು ರದ್ದುಮಾಡಬೇಕು. ಆಗ ಒಳಗೇ ಈ ರೀತಿ ಮಾಡಿಕೊಂಡಿರುವವರು ಸಿಕ್ಕುವರು. ಅಲ್ಲದೆ ನಾಲ್ಕನೆ ದರ್ಜೆ ನೌಕರರು ಕೊಡುವ ಸಂಬಳ ಸಾಕಾಗುವುದಿಲ್ಲ ಎಂದು ಸ್ವಲ್ಪ ಜಮೀನನ್ನು ಇಟ್ಟುಕೊಂಡು ಅದರಿಂದ ರಾಗಿಯನ್ನು ತಂದು ಕೊಂಡು ಜೀವನ ಮಾಡುತ್ತಿದ್ದಾರೆ. ಅಂಥವರಿಗೆ ತೊಂದರೆಯಾಗಲಿದೆ. ಸಾವಿರಾರು ಎಕರೆ ಗಳಿರುವವರಿಗೆ ಅವಕಾಶ ಕೊಟ್ಟಿರುವಾಗ ಅಂಥ ನೌಕರರಿಗೆ ತೊಂದರೆ ಮಾಡುವುದು ಸರಿಯಲ್ಲ. ಈ ಕಾನೂನಿಗೆ ರೆಟ್ರಾಸ್ಪೆಕ್ಟಿವ್ ಎಫೆಕ್ಟ್ ಕೊಡಬೇಕು, 1960 ರಿಂದ ಇದನ್ನು ಜಾರಿಗೆ ಕೊಡಬೇಕು. ಹಾಗೆ ಜಾರಿಗೆ ಕೊಡುವುದರಲ್ಲಿ ಕಾಂಗ್ರೆಸ್ಸಿನವರು ಗಟ್ಟಿಗರು. ಹಿಂದೆ ಆರ್. ಎಂ. ಪಾಟೀಲರು ಮಂತ್ರಿಗಳಾಗಿದ್ದಾಗ ಕಾರ್ಪೊರೇಷನ್ ಕಂದಾಯ ಎರಡು ವರ್ಷದ ಹಿಂದಿನಿಂದ ಕೊಡಬೇಕೆಂದು ಮಾತಿದರು ಹೀಗೆ ಈ ವಿಧೇಯಕವನ್ನು 12 ವರ್ಷ ಹಿಂದಿನಿಂದ ಜಾರಿಗೆ ತಂದರೆ ಬೇನಾಮಿ ಟ್ರಾನ್ಸ್‌ಕ್ಷನ್ ಹೊರಪಟ್ಟು ಪೋಸ್ಟಮಾಡಿರುವುದು ತಿಳಿದು ಆ ವಿಚಾರದಲ್ಲಿ ಸೂಕ್ತ ಕ್ರಮ ಕೈಕೊಳ್ಳಲು ಅವಕಾಶವಾಗುವುದು.

ನನ್ನ ಅಭಿಪ್ರಾಯದ ಪ್ರಕಾರ ರಿಲಿಜಿಯಸ್ ಅಂಡ್ ಧಾರಿಟಿಬಲ್ ಇನ್‌ಸ್ಟಿಟ್ಯೂಷನ್ಸ್ ಯಾವುವು ಒಳ್ಳೆಯ ಕೆಲಸಮಾಡುತ್ತಿವೆಯೋ ಅವುಗಳಿಗೆಲ್ಲಾ ಜಮೀನಿಟ್ಟುಕೊಳ್ಳಲು ಅವಕಾಶ ಕೊಡಬೇಕು ಎಂದು ಸಲಹೆಮಾಡುತ್ತೇನೆ. ಇದಕ್ಕೆ ರೆವಿನ್ಯೂ ಸಚಿವರು ಮರ್ಯಾದೆ ಕೊಡುವರು, ಒಳ್ಳೆಯ ಸಲಹೆಗಳಿಗಾದರೂ ಗಮನ ಕೊಡಬೇಕು ಎಂದು ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

3-30 P.M.

†ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷಸ್ವಾಮಿಯವರೇ, 29ನೆಯ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರಥಮ ಪೌರನೆಯ ಪ್ರಧಾನಿಗೆ ಪಂಡಿತ್ ಜವಾಹರ್‌ಲಾಲ್ ನೆಹರೂ ಅವರು ತಮ್ಮ ಅಧ್ಯಕ್ಷತೆಯಲ್ಲಿ ಆದಂಥ ನಭೆಯಲ್ಲಿ ಭೂಸುಧಾರಣೆಯನ್ನು ಪಕ್ಷದ ಒಂದು ಉದ್ದೇಶ, ಧ್ಯೇಯವಾಗಿ ಇಟ್ಟುಕೊಂಡು ಬಂದರು. ಈ ಭೂಸುಧಾರಣೆ ಕೇವಲ ಲೇಖನ ರೂಪದಲ್ಲಿ ಉದ್ದೇಶ ಹೊರತು ಕಾರ್ಯರೂಪಕ್ಕೆ ಕರಲಕ್ಕೆ ಇದುವರೆಗೂ ಕೂಡ ಅವಕಾಶವಾಗಿರಲಿಲ್ಲ. ಅದಕ್ಕೆ ಕಾರಣ ಏನೋ ಇರಬಹುದು. ಇಂಥ ಚರಿತ್ರಾರ್ಹವಾದ ಈ ಕಾನೂನನ್ನು ಇವತ್ತು, ನಮ್ಮ ಪಕ್ಷ, ಅಖಿಲ ಭಾರತದ ಮಟ್ಟದಲ್ಲಿ, ಇಂದಿರಾಜಿಯವರ ನಾಯಕತ್ವದಲ್ಲಿ ಶ್ರೀವಾನ್ ಅರಸು ಅವರ ನಾಯಕತ್ವದಲ್ಲಿ ಮತ್ತು ಕಂದಾಯಮಂತ್ರಿಗಳಾದ ಶ್ರೀಪೂನ್ ಹುಚ್ಚಮಾಸ್ತಿಗೌಡರ ಮೂಲಕ ಬರುತ್ತಿದೆ, ಈ ಒಂದು ಕಲಸದ ಹೆಮ್ಮೆಯು ಕಿರೀಟ ಅವರ ಹೆಸರಿಗೆ ಸಂದಾಯವಾಗುತ್ತದೆ ಎಂದು ಹೇಳಿ ಅವರಿಗೆ ನನ್ನ ಅಭಿನಂದನೆಯನ್ನೂ ಸಲ್ಲಿಸುತ್ತೇನೆ. ಹೂವಿನ ಜೊತೆಗೆ ನಾರು ಸ್ವರ್ಗ ಸೇರುತ್ತದೆ ಎನ್ನುವಂತೆ, ಈ ದಶಕದಲ್ಲಿ ಶಾಸನಸಭೆಯ ಸದಸ್ಯರುಗಳಾಗಿರತಕ್ಕ ನಮ್ಮೆಲ್ಲರ ಹೆಸರೂ ಕೂಡ ಕ್ರಾಂತಿಕಾರಿ ಬದಲಾವಣೆಯ ರೂಪದಲ್ಲಿ ಶಾಶ್ವತವಾಗಿ ಉಳಿದುಕೊಳ್ಳುತ್ತದೆ; ಎನ್ನುವ ಹೆಮ್ಮೆ ನನ್ನದೂ ಕೂಡ ಆಗಿದೆ. ಆದರೆ ಈ ಶಾಸನಸಭೆ ತರುವಾಗ ಎಲ್ಲರ ಹಿತಾಸಕ್ತಿಯನ್ನು ಗುರಿಯಲ್ಲಿಟ್ಟುಕೊಳ್ಳಬೇಕಾದದ್ದು ಅವಶ್ಯಕ. ಜೊತೆಗೆ ಸಾಮಾಜಿಕ ಪರಿವರ್ತನೆಯೂ ಬೇಕು. ರ್ಯಾಂಡ್ ಬಿಲಾಂಗ್ಸ್ ಟು ಗೋಪಾಲ್ ಎಂದು ಶ್ರೀ ವಿನೋಬಾ ಭಾವೆಯವರು ಹೇಳಿದರು. ಭೂಮಿಯು ಪರಮಾತ್ಮನಿಗೆ ಸೇರಿರುವ ಭೂಮಿ, ಒಬ್ಬನ ಸ್ವತ್ತಾಗಿ, ಒಬ್ಬನ ಅನುಭೋಗಕ್ಕೆ ಇರಬಾರದು. ಭೂಮಿ ಸರ್ವರ ಸ್ವತ್ತಾಗಿ, ಸರ್ವರ ಅನುಭೋಗಕ್ಕೆ ಒಳಗಾಗಿರಬೇಕು ಎನ್ನುವ ಉದ್ದೇಶ ಇದರಲ್ಲಿ ಅಡಗಿದೆ. ಇದು ಒಪ್ಪತಕ್ಕ ಮಾತು. ನಾವು ಯಾವ ಒಂದು ಪೈಸೆಗೂ ಸಿಕ್ಕದೆ, ಯಾವ ಒಂದು ಕಂಕಾಶಕ್ಕೂ ಸಿಕ್ಕದೆ, ಯಾವ ಒಂದು ಪಾತಾವರಣಕ್ಕೂ ಹೊಂದಿಕೊಳ್ಳದೆ, ಈ ಕಾನೂನನ್ನು ಮಾಡಿದರೆ ಜನ ಒಪ್ಪುತ್ತಾರೋ ಏನೋ ಎನ್ನುವುದು ನನ್ನ ಅಭಿಪ್ರಾಯ. ಈ ಭೂಸುಧಾರಣೆ ತಿದ್ದುಪಡಿಯಲ್ಲಿ, ಜಾಯಿಂಟ್ ಸೆಲೆಕ್ಟ್ ಕಮಿಟಿ ಆದ ಮೇಲಾದರೂ ಗುರುತರವಾದ ಬದಲಾವಣೆ ಯಾಗಬೇಕು ಎನ್ನುವ ಒಂದು ಅಶಯವನ್ನು ನನ್ನಂತೆ ಅನೇಕ ಸದಸ್ಯರು ಇಟ್ಟುಕೊಂಡಿದ್ದರು. ಆದರೆ ಇದರಲ್ಲಿ ನಾವು ಕಾನೂನಕ್ಕೆ ನ್ಯೂನತೆಗಳನ್ನು ನೋಡಿದರೆ, ಇದರಿಂದ ಸರ್ವರ ಹಿತಸಾಧನೆ ಯಾಗುತ್ತದೆಯೇ, ಸಾಮಾಜಿಕ ಹಿತಸಾಧನೆಯಾಗುತ್ತದೆಯೇ ಎನ್ನುವ ಭಾವನೆ ಶಂಕೆ ಒಡ ಮೂಡುತ್ತದೆ ಎಂದು ಹೇಳುತ್ತೇನೆ. ಈ ಕಾನೂನಲ್ಲಿ ಕೊಟ್ಟಿರತಕ್ಕ 2—3 ಎಕ್ಸೆಂಪ್ಷನ್ಸ್ ಏನು ಇದೆ ಅದು ಯಾವ ಕಾರಣಕ್ಕಾಗಿ? ಯಾರ ಹಿತಕ್ಕಾಗಿ? ಇದರಿಂದ ಏನು ಉದ್ದೇಶ ಸಾಧನೆಯಾಗುತ್ತದೆ? ಯಾವ ಸಮಾಜದ ಸಾಧನೆಯಾಗುತ್ತದೆ ಎಂದು ನನ್ನ ಸಣ್ಣಮಟ್ಟಕ್ಕಂತು ಅರ್ಥವಾಗುವುದಿಲ್ಲ. ಕಾಫಿ ಎಸ್ಟೇಟ್ ಇರುವವರಿಗೆ ಎಕ್ಸೆಂಪ್ಷನ್ ಕೊಟ್ಟಿದ್ದಾರೆ, ತೆಂಗು ಬೆಳೆಯುವವರಿಗೆ 54 ಎಕರೆ ಇಟ್ಟುಕೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದಾರೆ, ಕೆಲವು ಭಾಗದವರು ಹೆಚ್ಚು ಜಮೀನನ್ನು ಇಟ್ಟುಕೊಳ್ಳಬಹುದು; ಇದರಲ್ಲಿ ಬರಗಾಲ ಪೀಡಿತಪ್ರದೇಶಗಳವರು ಏನ್ನುವುದು, ಈ ಮೂರೂ ಯಾರ ಉಹೆಗೂ ಕೂಡ ಸಿಲುಕುವಂಥ ಎಕ್ಸೆಂಪ್ಷನ್ಸ್ ಇರುವಂತಹ ಕಾನೂನು ಇದು ಎಂದು ಹೇಳುವವರಲ್ಲಿ ನಾನೂ ಒಬ್ಬ. ಕ್ಲಾಸ್‌ಬೈಕ್ಲಾಸ್ ಹೇಳುವುದಾದರೆ, ಹೊಟ್ಟೆ ಹೊದಲನೆಯದಾಗಿ, ಅರ್ಜಿಯನ್ನು ತಹಸೀಲ್ದಾರರಿಗೆ ಹಾಕುವುದನ್ನು ಇಟ್ಟುಕೊಂಡಿದ್ದಾರೆ. ಇದನ್ನು ಕೊಟ್ಟಿರುವುದರಿಂದ, ಇವರಿಗೆ ಭೂಮಿಗೆ ಇಳಿದುಬಂದ ಭಗವಂತ ಎಂದು ಕರೆಯಬಹುದು. ಈ ಆಕ್ಟಿನಲ್ಲಿ ಇವರಿಗೆ ಕೊಟ್ಟಿರತಕ್ಕ ಸ್ಥಾನಗಿರವ ಇವುಗಳನ್ನು ನೋಡಿದರೆ ಇವರು ಭೂಮಿಗೆ ಇಳಿದು ಬಂದ ಭಗವಂತನೇ ಸರಿ, ಎಂದು ನನ್ನ ವೈಯಕ್ತಿಕ ಅಭಿಪ್ರಾಯ ಇದೆ. ಶಾಸನಸಭೆಗೆ ಬರತಕ್ಕ ಪ್ರತಿನಿಧಿಗಳು ಲಕ್ಷಕ್ಕೆ ಮೇಲ್ಪಟ್ಟು ಜನತೆಯ ಪ್ರತಿನಿಧಿ ಎಂದು ಅನಿಸಿಕೊಂಡಿರತಕ್ಕವರು, ಅಂಥವನ್ನು ಇಂಥ ಸಮಿತಿಯಲ್ಲಿ ಹಾಕಿ ಕಾರ್ಯಾಂಗದಲ್ಲಿನ ಕೆಳಮಟ್ಟದ ಅಧಿಕಾರಿಯನ್ನು ಅಧ್ಯಕ್ಷತೆಯಲಿಟ್ಟು, ಕೆಲಸ ಮಾಡತಕ್ಕಂಥಾದ್ದು ಎಂದರೆ ಇದು ಯಾರ ಊಹೆಗೂ ನಿಲುಕಲಾರದಂಥ ವ್ಯವಸ್ಥೆ. ಏಕೆಂದರೆ, ಒಬ್ಬ ಶಾಸನಸಭೆಗೆ ಇರತಕ್ಕ ಗೌರವ ಪ್ರಾಪ್ತಭುತ್ವದಲ್ಲಿ ಶಾಸಕಾಂಗಕ್ಕೆ ಅತ್ಯುನ್ನತ ಮಟ್ಟ ಇದೆ, ಶಾಸನಕಾಂಗ ಕಾರ್ಯಾಂಗ ಆಮೇಲೆ ನ್ಯಾಯಾಂಗ ಬರುತ್ತದೆ. ಈ ಕಾರ್ಯಾಂಗದಲ್ಲಿ ಅತ್ಯುನ್ನತ ಮಟ್ಟದಲ್ಲಿರತಕ್ಕ ಮಂತ್ರಿಗಳ ಜೊತೆಗೆ ಬಾವ ವಿಷಾದ ಮಾಡತಕ್ಕ ಶಾಸಕರನ್ನು ಅತ್ಯಂತ ಕೆಳಮಟ್ಟದಲ್ಲಿರುವ ನಾಕರರ ಅಧ್ಯಕ್ಷತೆಯೊಳಗೆ ಸದಸ್ಯನಾಗಿ ಕೆಲಸಮಾಡಬೇಕು ಎಂದರೆ ಇದು ಎಂಥ ವಿಪರ್ಯಾಸ?

[MR. DEPUTY SPEAKER In the Chair]

ಇದೆನ್ನು ಬುದ್ಧಿಜೀವಿ ಇರತಕ್ಕವರು ಯಾರೂ ಯೋಚನೆ ಮಾಡುವುದಕ್ಕೆ ಸಾಧ್ಯವಿಲ್ಲ. ಲ್ಯಾಂಡ್ ಗ್ರಾಬ್ ಕಮಿಟಿ ಮಾಡಿದಾಗ ಏನು ಮಾತನ್ನು ಹೇಳಿದ್ದಾರೆ ? ತಮ್ಮವರೇ ಶಾಸಕರು ಇರುತ್ತಾರೆ, ಸಂಬಂಧಪಟ್ಟ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿ, ತಹಸೀಲ್ದಾರರನ್ನು ಸೆಕ್ರೆಟರಿಗಳನ್ನಾಗಿ ಮಾಡಿ. ಇದರ ಅಧ್ಯಕ್ಷ ಸ್ಥಾನವನ್ನು ಶಾಸಕರಿಗೆ ಕೊಡಬೇಕೇ ಹೊರತು, ಶಾಸಕ ಒಬ್ಬ ಸದಸ್ಯನಾಗಿರತಕ್ಕ ಸಮಿತಿಯನ್ನು ಕನಸು ಮನಸ್ಸಲ್ಲಿ ಮಾಡುವುದು ಸಾಧ್ಯವಿಲ್ಲ ಇದು ಶೀರನಾಳಿ ಪ್ರಶ್ನೆಯಲ್ಲ, ಕೋಣಂದೂರು ಅವರ, ಕಾಗೋಡು ಅವರ ಪ್ರಶ್ನೆಯಲ್ಲ, ಒಬ್ಬ ಪ್ರಜಾ ಪ್ರತಿನಿಧಿಯ ಪ್ರಶ್ನೆ. ಒಬ್ಬ ಪ್ರಜಾಪ್ರತಿನಿಧಿಗೆ ನಲ್ಲುವ ಸ್ಥಾನಮಾನ ನಲ್ಲಸೇಹೋದರೆ, ಪ್ರಜಾ ಪ್ರಭುತ್ವದ ಅರ್ಥಕ್ಕೆ ಅವಮೇಳನವಾದೀತು ಎನ್ನುವ ಸಂಶಯ ಮೂಡುತ್ತದೆ. ಇವತ್ತು ತಹಸೀಲ್ದಾರರಿಗೆ ಏನು ಅಧಿಕಾರವನ್ನು ಕೊಟ್ಟಿದ್ದೀರಿ ಎಂದರೆ, ಇವರ ಡ್ಯೂಟಿಯನ್ನು ತೆಗೆದುಕೊಂಡೊಂ ಡಾಗಿ ನೋಡುವುದಾದರೆ, ಈ ಒಂದು ಕಾರ್ಯದಲ್ಲಿ ಇವರಿಗೆ ಕೊಟ್ಟಿರುವುದು ರಾಜಿದಂಡ ಎಂದು ಅನ್ನಿಸುತ್ತದೆ. ಇದರಿಂದ ಪ್ರಜಾಪ್ರಭುತ್ವದ ದುರುಪಯೋಗ ಪಾಗಬಾರದು ಎ ದು ನಾನು ಹೇಳುತ್ತೇನೆ. ಒಬ್ಬ ಸರ್ಕಾರಿ ಕೆಳಮಟ್ಟದ ಅಧಿಕಾರಿಗೆ ಇಷ್ಟೊಂದು ಅಧಿಕಾರ ನ್ನು ಕೊಟ್ಟು ಅವನು ಯಾರಿಗೆ ಬೇಕಾದರೂ. ಹೇಗೆ ಬೇಕಾದರೂ ಆದೇಶ ಕೊಡಬಹುದು ಎಂದು ಹೇಳುತ್ತೀರಿ. ಇದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ, ಜೆನ್ನಿ ಕಾನೂನು ಇದ್ದಾಗ ಸೆಕ್ಷನ್ 12ರ ಪ್ರಕಾರ ಹೆಚ್ಚುವರಿ ಗೇಣಿಗೆ ಅರ್ಜಿಯನ್ನು ಒಬ್ಬರು ಹಾಕಿದರು. 10 ವರ್ಷಗಳನಂತರ ಅರ್ಜಿ ದಾರ ತಹಸೀಲ್ದಾರರನ್ನು ಕೂಡಿಸಿಕೊಂಡು 165 ರೂಪಾಯಿ ನಗದು ಗೇಣಿ ಬರತಕ್ಕ ಜಮೀನಿಗೆ, 40 ಮಣ ಅಡಿಕೆ, 75 ಪಲ್ಲ ಭತ್ತ ಕೊಡಬೇಕು ಎಂದು ಡಿಕ್ರಿಯನ್ನು ಹೇಳಿ ಬರೆಸಿದರು. ಡಿಕ್ರಿ ಕೊಟ್ಟರು, ಜಫ್ತಿ ವಾರಂಟನ್ನು ಇಷ್ಯೂ ಮಾಡಿದರು. ಏಕೆ ಈ ಉದಾಹರಣೆಯನ್ನು ಕೊಡುತ್ತಿದ್ದೇನೆಂದರೆ, ತಹಸೀಲ್ದಾರರು ಮಾಡಬೇಕಾದಂಥ ಕೆಲಸ ಇರುತ್ತದೆ. ರೆವಿನ್ಯೂ ಕಲೆಕ್ಷನ್, ಲೆವಿ ಬತ್ತ ಕಲೆಕ್ಷನ್ ಏಗ್ಬೇರೆ, ಏಗ್ಬೇರೆ ಇರುತ್ತದೆ. ಅವರಿಗೆ ಅವರ ತಲೆಮಟ್ಟದ ಕೆಲಸ ಇರುತ್ತದೆ. ಅವರಿಗೆ ನ್ಯಾಯಾಂಗದ ಅಧಿಕಾರವನ್ನು ಕೊಟ್ಟುಬಿಟ್ಟರೆ ಏನು ವಿಪರ್ಯಾಸ ಆದೀತು ಎನ್ನುವುದಕ್ಕೆ ಈ ಒಂದು ಉದಾಹರಣೆಯನ್ನು ನಾನು ಕೊಟ್ಟೆ. ಜೆನ್ನಿ ಆಕ್ಟ್ ರಿಪೀಲ್ ಆಗಿ 10 ವರ್ಷಗಳಾದ ಮೇಲೆ, ಸೆಕ್ಷನ್ 8, ಲ್ಯಾಂಡ್ ರಿಫಾರಮ್ಸ್ ಆಕ್ಟ್ ಇರುವಾಗ ಗೇಣಿ ಹೆಚ್ಚು ಮಾಡುವುದಕ್ಕೆ ಅಗುತ್ತದೆಯೇ ಇಲ್ಲವೇ ಎನ್ನುವುದು ಅವನ ಯೋಚನೆಗೆ ಬರಲಿಲ್ಲ. ಇವರು ಕೇಳಿದರು, ಅವರು ಬರೆದರು. ಇಂಥ ವಿಪರ್ಯಾಸ ! ಕಾರ್ಯಾಂಗದ ಕೆಳಮಟ್ಟದ ಅಧಿಕಾರಿಗೆ ಸಂಪೂರ್ಣ ಅಧಿಕಾರ ಕೊಡುವುದರಿಂದ ಜನರ ಹಿತ ಸಾಧನೆಯಾಗುವುದಿಲ್ಲ ಎನ್ನುವ ಒಂದು ಸ್ಪಷ್ಟತೆಯನ್ನು ನಾನು ಕೊಡುವುದಕ್ಕೆ ಬಯಸುತ್ತೇನೆ. ಅಸಿಸ್ಟೆಂಟ್ ಕಮಿಷನರ್ ಅವರ ಅಧ್ಯಕ್ಷತೆಯಲ್ಲಿ ಟ್ರಿಬ್ಯುನಲ್ ಅನ್ನು ನೀವು ಮಾಡಿದ್ದೀರಿ. ಇಂಥಿಂಥವರು ಇದ್ದಾರೆ ಎಂದು ನೀವು ಹೇಳಿದ್ದೀರಿ. ಒಪ್ಪೋಣ. ಪ್ರಜಾಪ್ರಭುತ್ವದ ರೀತ್ಯ ಆಯಾ ತಾಲ್ಲೂಕಿಗೆ ಸಂಬಂಧಪಟ್ಟ ಶಾಸಕರನ್ನೊಳಗೊಂಡು ಅವರ ಅಧ್ಯಕ್ಷತೆಯಲ್ಲಿ ಖಾಸಗಿ ಸದಸ್ಯರು ಮೂರು ಜನ ಇರತಕ್ಕ ಸಮಿತಿಯನ್ನು ಮಾಡಿ ತಹಸೀಲ್ದಾರರನ್ನು ಕಾರ್ಯದರ್ಶಿಯಾಗಿ ಮಾಡಿದರೆ ಕೆಲಸ ಎಷ್ಟು ಸುಸೂತ್ರವಾಗಿ ನಡೆಯುತ್ತದೆ. ಇದು ಜನರ ಇಚ್ಛೆ ಮೇರೆಗೆ ನಡೆಯುತ್ತದೆಯೋ ಇಲ್ಲವೊ ಎನ್ನುವುದನ್ನು ಯೋಚನೆಮಾಡಿ. ಶಾಸಕನಿಗೆ ಊರಿನಲ್ಲಿ ಹಂಗು ಇರುತ್ತದೆ. 'ಎ' ಗೆ ಕೊಡುವುದನ್ನು 'ಬಿ'ಗೆ ಕೊಟ್ಟುಹೋದರೆ ಎರಡು ವರ್ಷದ ನಂತರ ಆ ಸ್ಥಳದಲ್ಲಿಯೇ ಅವನು ಜುನಾವಣೆಗೆ ನಿಲ್ಲಬೇಕೆಂದು ಅವನ ತಲೆಯಲ್ಲಿ ಇರುತ್ತದೆ. ಅವನು ಊರು ಬಿಟ್ಟು ಹೋಗಲಾರ, ನಾಳೆ ದಿವಸ ಜನಗಳು ಬೆಟ್ಟು ಮಾಡಿ ತೋರಿಸುತ್ತಾರೆ, ಅತನು ಹೀಗೆಮಾಡಿದ್ದಾನೆ ಎಂದು. ಆದರೆ ತಾವು ನೇಮಕ ಮಾಡಿದಂಥ ಅತ್ಯಂತ ಕೆಳ ಮಟ್ಟದ ಅಧಿಕಾರಿ ಯಾವನು ಇರುತ್ತಾನೆ, ಅತನು ಇವತ್ತು ಈ ಊರಿನಲ್ಲಿದ್ದರೆ ನಾಳೆ ಇನ್ನೊಂದು ಊರಿಗೆ ಹೋಗು ತ್ತಾನೆ. ಸಾಮಾಜಿಕ ನ್ಯಾಯ ಅತನಿಂದ ಆಗುತ್ತದೆಯೇ ಎನ್ನುವುದನ್ನು ತಾವು ಯೋಚನೆ ಮಾಡಬೇಕಾಗುತ್ತದೆ. ಇದು ಗಾಢವಾಗಿ ಯೋಚನೆ ಮಾಡಬೇಕಾದ ಪ್ರಶ್ನೆ. ತಾವು ಈ ಬಿಲ್ಲಿನಲ್ಲಿ ವಕೀಲರಿಗೆ ಹಾಜರು ಆಗ ಕೂಡದು ಎಂದು ಹೇಳಿದ್ದೀರಿ. ಆದರೆ ವಕೀಲರು ಹಾಜರು ಆಗಕೂಡದು ಎಂದು ಹೇಳಿದರೂ ಕೂಡ, ನೀವು ಚಾಪೆ ಕೆಳಗೆ ನುಗ್ಗಿದರೆ ಅವರು ರಂಗೋಲಿಯ ಕೆಳಗೆ ತೂರುತ್ತಾರೆ ಎನ್ನುವ ಹಾಗೆ, ವಕೀಲರು ಅರ್ಜಿದಾರನ ಪರವಾಗಿ ನಾನು ಹಾಜರು ಆಗುತ್ತೇನೆಂದು ಅರ್ಜಿ ತೆಗೆದುಕೊಂಡು ಬಂದರೆ, ಆ ಅರ್ಜಿಯು ಮೇರೆ ಅವನನ್ನು ಅಲ್ಲೇ ಮಾಡಬೇಕಾಗುತ್ತದೆ. ಅನಂತರ ಅಪ್ಲಿಕೇಷನ್ ಕೊಡಬೇಕೆಂದು ಹೇಳುತ್ತೀರಿ. ಸಾಮಾನ್ಯವಾಗಿ ರೈತನಿಗೆ ಅಪ್ಲಿಕೇಷನ್ ಬರೆಯುವುದಕ್ಕೆ ಬರುವುದಿಲ್ಲ. ಯಥಾ ಪ್ರಕಾರ ವಕೀಲರನ್ನು ಇಡಬೇಕು. ಅರ್ಜಿಯನ್ನು ಹಾಕಬೇಕು ಪ್ರತಿಯೊಂದು ಸೆಕ್ಷನ್ ಕೋರ್ಟ್ ಮಾಡಿ ಅರ್ಜಿ ಸಲ್ಲಿಸುವುದಕ್ಕೆ ವಕೀಲರ ಸಹಾಯ ತೆಗೆದು

(ಶ್ರೀ ಎಸ್. ಎಂ ಶಿರನಾಳಿ ಚಂದ್ರಶೇಖರ್)

ಕೊಳ್ಳಬೇಕು ವಕೀಲರನ್ನು ತಾವು ಹಾಜರು ಆಗಬಾರದು ಎಂದು ಹೇಳಿದ್ದೀರಿ ಆದರೆ ವಕೀಲರನ್ನು ಬಿಟ್ಟು ಏನೂ ಮಾಡುವುದಕ್ಕೆ ಆಗುವುದಿಲ್ಲ. ತಹಶೀಲ್ದಾರರಿಗೆ ಕಂಪ್ಲೀಟ್ ಆಗಿ ಎಗ್ಜಿಕ್ಯೂಟಿಟ್ ಮಾಡತಕ್ಕ ಡ್ಯೂಟೀಸ್ ಎನು. ತಹಶೀಲ್ದಾರ್‌ರವರ ಕರ್ತವ್ಯ ಏನು ಎಂದು ಎರಡು ಭಾಗ ಮಾಡಿದ್ದೀರಿ. ಟ್ರಿಬ್ಯೂನಲ್ ಕರ್ತವ್ಯಕ್ಕೂ, ತಹಶೀಲ್ದಾರರ ಕರ್ತವ್ಯಕ್ಕೂ ಒಂದೊಂದಕ್ಕೂ ಸಂಭಂಧವಿಲ್ಲ, ಎರಡೂ ಬೇರೆ ಬೇರೆ. ಒಂದು ವೇಳೆ ಟ್ರಿಬ್ಯೂನಲ್ ಕರ್ತವ್ಯದಲ್ಲಿ ತಹಶೀಲ್ದಾರರ ಕರ್ತವ್ಯ ಒಳಗೊಂಡಿದ್ದರೆ ನನ್ನ ಅಭ್ಯಂತರವಿಲ್ಲ. ಟ್ರೈಬ್ಯೂನಲ್‌ಗೆ ಕೊಡವೇ ಇರುವ ಅಧಿಕಾರವನ್ನು ತಹಶೀಲ್ದಾರ್‌ರವರಿಗೆ ಕೊಟ್ಟಿದ್ದೀರಿ. ಅದನ್ನು ಯಾವ ಕಾರಣಕ್ಕಾಗಿ ಕೊಟ್ಟಿದ್ದೀರಿ, ಏನು ಕಾರಣಪ್ಪೋ ನನಗೆ ತಿಳಿಯದು. ಅದರಿಂದ ಅಧಿಕಾರ ದುರುಪಯೋಗ ಆಗುತ್ತದೆಯೇ ಹೊರತು ನಾಮಾಜಿಕ ನ್ಯಾಯವಾಗಲೀ, ಬಡಜನರಿಗೆ ಹಿತವಾಗಲೀ ಆಗುತ್ತದೆ ಎನ್ನುವ ಪ್ರಶ್ನೆ ಸುಳ್ಳು ಎಂದು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ ಇದನ್ನು ವಿರೋಧಿಸುತ್ತೇನೆ. ಎರಡನೆಯ ಪ್ರಶ್ನೆ ತಾವು ಕಾಫಿ ಪ್ಲಾಂಟೇಷನ್‌ಗೆ ಎಗ್ಜಂಪಷನ್ ಕೊಟ್ಟಿದ್ದೀರಿ. ತಾವು ಹೇಳಬಹುದು, ಹೇರಳವಾಗಿ ವಿದೇಶದ ಹಣವನ್ನು ಗಳಿಸತಕ್ಕ ಉದ್ದೇಶ ಇದು, ಅದಕ್ಕಾಗಿ ಎಗ್ಜಂಪಷನ್ ಕೊಡುತ್ತೇವೆಂದು ಒಂದು ವರ್ಗದವರು ಮಾತ್ರ ಶವರ್ಲೆ ಕಾರ್ ಇಟ್ಟುಕೊಂಡು ದೊಡ್ಡದೊಡ್ಡ ಬಂಗಲೆಗಳನ್ನಿವಾನ ಮಾಡುವುದಕ್ಕೆ ಅವಕಾಶ ಕೊಟ್ಟು, ಇನ್ನೊಂದು ವರ್ಗವನ್ನು ಮೂಲೋತ್ಪಾಟನೆ ಮಾಡಿದರೆ ಅದು ಸಮಾಜವಾದ ಆಗುತ್ತದೆಯೇ ಎನ್ನುವ ಪ್ರಶ್ನೆಯನ್ನು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಕಾಫಿಪ್ಲಾಂಟರ್‌ಗೆ ಏನಾಯಿತಿ ಕೊಟ್ಟಿದ್ದೀರಿ. ಅವರು ಲಕ್ಷಗಟ್ಟಲೆ ಉತ್ಪನ್ನ ವರ್ಷ್‌ವರ್ಷ ತೆಗೆದುಕೊಳ್ಳುತ್ತಾರೆ. ಹಿಂದಿನಂತೆ ಯಾವ ರೀತಿಯಲ್ಲಿಯೂ ಅವರು ಅಶನವಸನಗಳನ್ನು ನಡೆಸಿಕೊಂಡು ಅದ್ದೂರಿಯಿಂದ ಇರುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದೇ ಒಬ್ಬ ತರೀ ಜಮೀನು, ಬಾಗಾಯ್ತು ಜಮೀನು ಮಾಡಿದವನಿಗೆ ಸೀಲಿಂಗ್ ಎಫೆಕ್ಟ್ ಆಗುತ್ತದೆ. ಅಕ್ಕಪಕ್ಕದಲ್ಲಿ ಇರುವ ಕಾಫಿ ಪ್ಲಾಂಟರ್‌ನನ್ನು ನೋಡಿ ಅವನ ಮನಸ್ಸು ಏನು ಆಗುತ್ತದೆ? ಅವನ ಅಪ್ಪ ಅಜ್ಜ ಅಡಿಕೆ ತೋಟಕ್ಕೆ ದುಡ್ಡು ಹಾಕಿದ್ದು ಅಪರಾಧವೇ? ಕಾಫಿ ತೋಟಕ್ಕೆ ದುಡ್ಡು ಹಾಕಿದ್ದರೆ ಅಪರಾಧ ಆಗುತ್ತಾ ಇರಲಿಲ್ಲವೇ? ಇದು ಎಂತಹ ವಿಪರ್ಯಾಸ ಎಂದು ಅಲೋಚನೆ ಮಾಡಬೇಕು. ತಂಗು ಅರ್ಚರ್ಡ್‌ಗೆ ಮಿತಿ 54 ಎಕರೆ ಎಂದು ತಕ್ಕಡಿ ಹಿಡಿದು ನೋಡಬೇಕು, ಆಗ ಅರ್ಥವಾಗುತ್ತದೆ. ಈ ಕಾಯಿದೆಯಿಂದ ಎಂಥ ಅನ್ಯಾಯವಾಗಿದೆ ಎಂದು ಇಂದು ಒಂದು ಎಕರೆ ತೆಂಗಿನ ತೋಟದಲ್ಲಿ ಅಡಿಕೆ ತೋಟಕಿಂತ ಜಾಸ್ತಿ ಉತ್ಪತ್ತಿ ಬರುತ್ತದೆ. ಅಡಿಕೆಯು ಬೆಲೆ ನಂಪೂರ್ಣವಾಗಿ ಬಿದ್ದು ಹೋಗಿರುವಾಗ ಅಡಿಕೆ ತೋಟದಿಂದ ಏನು ಉತ್ಪತ್ತಿ ಬರುತ್ತದೆ ಅದಕ್ಕಿಂತ ಜಾಸ್ತಿ ಉತ್ಪತ್ತಿ ತೆಂಗಿನ ತೋಟದಲ್ಲಿ ಇದೆ. ಆದುದರಿಂದ ತೆಂಗಿನ ತೋಟಕ್ಕೆ 54 ಎಕರೆ ಪರಿಮಿತಿ ಇಟ್ಟು ಅಡಿಕೆ ತೋಟಕ್ಕೆ ಕಡಿಮೆ ಪರಿಮಿತಿ ಮಾಡಿರುವುದು ಯಾವ ವ್ಯವಸ್ಥೆ ಎಂದು ನನಗೆ ತಿಳಿಯುವುದಿಲ್ಲ.

ಇನ್ನು ಗುಲ್ಬರ್ಗ, ರಾಯಚೂರು, ಬಳ್ಳಾರಿ, ಕೆಲವು ಭಾಗಗಳಲ್ಲಿ ಬಾಗಾಯ್ತು ಪರಿಸ್ಥಿತಿ ಇರುವುದರಿಂದ ಅವರಿಗೆ ಇಂತಿಷ್ಟು ಮಿತಿವರೆಗೆ ಸೀಲಿಂಗ್ ಇಟ್ಟುಕೊಳ್ಳಬಹುದೆಂದು ಅಕ್ಷನಲ್ಲಿ ಅವಕಾಶ ಮಾಡಿಕೊಟ್ಟಿದ್ದೀರಿ, ನಾಳೆ ದಿವನ ಕೃಷ್ಣಾ ಯೋಜನೆಯಿಂದ ನೀರಾವರಿ ಯೋಜನೆ ಆಯಿತು ಎಂದರೆ, ಯೋಜನಾ ನಂತರ ಮತ್ತೆ ಈ ಆಕ್ಟನ್ನು ರಿಪೀಲ್ ಮಾಡುತ್ತೀರಾ? ತಾವು ಬರಗಾಲ ಜಿಲ್ಲೆಗಳು ಎಂದು ಹೇಳುವಾಗ ಶಿವಮೊಗ್ಗಾ ಜಿಲ್ಲೆಗೆ ಬರಬೇಕು. ಶಿವಮೊಗ್ಗ ಜಿಲ್ಲೆಯ ನಾಲ್ಕು ತಾಲ್ಲೂಕ್‌ಗಳಲ್ಲಿ ಮುಕ್ಕಾಲು ಮೂರು ವೀಸೆ ಬರಗಾಲವಿದೆ. ಶಿವಮೊಗ್ಗ ಜಿಲ್ಲೆಯವರು ಮಾಡಿದ ಅನ್ಯಾಯವೇನು? ಶಿವಮೊಗ್ಗ ತಾಲ್ಲೂಕ್‌ನಲ್ಲಿ 110 ಹಳ್ಳಿಗಳಲ್ಲಿ ನೀರು ಇಲ್ಲ. ಶಿವಮೊಗ್ಗ, ಹೊನ್ನಾಳಿ, ಶಿಕಾರಿಪುರ, ಚನ್ನಗಿರಿ ತಾಲ್ಲೂಕ್‌ಗಳಲ್ಲಿ ಈ ಪರಿಸ್ಥಿತಿ ಇದೆ.

ಶ್ರೀ ಕೋಣಂದರುಲಿಂಗಪ್ಪ.—400" ಮಳೆ ಆಗುವ ಆಗುಂಬೆಯಲ್ಲಿ 180" ಮಳೆ ಆಗಿದೆ, ಆದುದರಿಂದ ತೀರ್ಥಹಳ್ಳಿ, ಮತ್ತು ಹೊಸನಗರ ಅದೇ ಪಟ್ಟಿಯಲ್ಲಿ ಸೇರಬೇಕಾಗುತ್ತದೆ.

ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ್.—ಕೆಲವು ಜಿಲ್ಲೆಗಳಿಗೆ ಮಾತ್ರ ಈ ಕಾನೂನಿನ ಚೌಕಟ್ಟಿನಲ್ಲಿ ರಕ್ಷಣೆ ಕೊಟ್ಟು, ಕೆಲವು ಜಿಲ್ಲೆಗಳನ್ನು ಬಿಟ್ಟು ಬಿಡುವುದರ ಉದ್ದೇಶ ಏನು ಎಂದು ನನಗೆ ಅರ್ಥವಾಗುವುದಿಲ್ಲ. ಕ್ಷಾಮಡಾಮರಗಳು ಎಂದು ಹೇಳತಕ್ಕದ್ದು ಒಂದೇ ಸ್ಥಳಕ್ಕೆ ಸೀಮಿತ ವಾಗಿರುವುದಿಲ್ಲ ಎನ್ನುವುದನ್ನು ಎಲ್ಲರೂ ಒಪ್ಪಲೇಬೇಕು. ಒಂದು ವರ್ಷ ಮಳೆ ಆಗುತ್ತದೆ ಇನ್ನೊಂದು ವರ್ಷ ಮಳೆ ಆಗದೇ ಹೋಗಬಹುದು ಆಗ ಕಾನೂನನ್ನು ರಿಪೀಲ್ ಮಾಡುವುದಕ್ಕೆ

ಆಗುತ್ತದೆಯೇ? ಅದು ಸಾಧ್ಯವಿಲ್ಲ. ಆದುದರಿಂದ ಈ ರೀತಿ ಆಕ್ಟ್‌ನಲ್ಲಿ ಎಗ್ಮಂಷನ್ ಎನು ಕೊಟ್ಟಿದ್ದೀರಿ ಅದು ತಪ್ಪಾಗುತ್ತದೆ ಎಂದು ಹೇಳತಕ್ಕದ್ದು ನನ್ನ ಅಭಿಪ್ರಾಯ.

ಇನ್ನು ಮಾತೀಯ ಸಂಸ್ಥೆಗಳು ಸಂಪೂರ್ಣವಾಗಿ ಜಮೀನನ್ನು ಹೊಂದಲಿಕ್ಕೆ ಅವಕಾಶ ತಾವು ತೆಗೆದುಹಾಕಿದ್ದೀರಿ. ಇಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆ. ಅನುಚ್ಛಾನವಾಗಿ ನಡೆದುಕೊಂಡು ಬಂದಿರತಕ್ಕ ಮಾತೀಯ ಸಂಸ್ಥೆಗಳಲ್ಲಿ ಕೆಲವು ಒಳ್ಳೆಯವು ಇವೆ ಕೆಲವು ಕೆಟ್ಟದ್ದು ಇವೆ. ಯಾವುದು ಒಳ್ಳೆಯ ಕೆಲಸ ಮಾಡತಕ್ಕ ಸಂಸ್ಥೆಗಳು ಆಗಲೀ, ವ್ಯಕ್ತಿಯಾಗಲೀ ಅವಕ್ಕೆ ಶಹಬಾಸ್‌ಗಿರಿ ಕೊಡಬೇಕು. ಕೆಟ್ಟ ಕೆಲಸ ಮಾಡುವ ವ್ಯಕ್ತಿ, ಅಥವಾ ಸಂಸ್ಥೆಗಳಿಗೆ ಮುಟ್ಟುಗೋಲು ಹಾಕುವುದನ್ನು ಕ್ಷಿಪ್ರಗೊಳಿಸಬೇಕು. ಈ ರೀತಿಯಲ್ಲಿ ಕಾನೂನಿನಲ್ಲಿ ಅಳವಡಿಸುವುದರಿಂದ ಒಳ್ಳೆಯ ಕೆಲಸ ಮಾಡತಕ್ಕ ಸಂಸ್ಥೆಗಳ ಗತಿ ಏನು? ಎಷ್ಟೊಂದು ವಿದ್ಯಾ ಶಾಲೆಗಳನ್ನು ತೆಗೆದು ಎಷ್ಟೋ ಜನ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಕೊಡತಕ್ಕ ಸಂಸ್ಥೆಗಳು ಇವೆ. ಅವರ ಭವಿಷ್ಯ ಏನು? ಎಂದು ಯೋಚನೆ ಮಾಡಬಹುದಾಗಿತ್ತು ಏನೋ ಎಂದು ನನಗನ್ನಿಸುತ್ತದೆ.

ಸೆಕ್ಷನ್ 14 ತೆಗೆದುಹಾಕಿದ್ದಾರೆ, ಇದು ಸಂಪೂರ್ಣವಾಗಿ ಸ್ವಾಗತಾರ್ಹ. ಸಂಸ್ಥಾ ಕಾಂಗ್ರೆಸ್ ಬಿಟ್ಟು ಎಲ್ಲಾ ಪಕ್ಷಗಳೂ ಸೆಕ್ಷನ್ 14 ತೆಗೆದು ಹಾಕಬೇಕು ಎಂದು ಹೇಳುತ್ತವೆ. ಆದರೆ ಸೆಕ್ಷನ್ 14 ತೆಗೆಯುವಾಗ ಮೈನರ್ಸ್ ಮತ್ತು ವಿಧವೆಯವರಿಗೆ ಕೊಟ್ಟಿರುವ ಎಗ್ಮಂಷನ್ ಏನು ಇದೆ ಅದನ್ನು ತೆಗೆದು ಇರುವುದರಿಂದ ಎಷ್ಟೊಂದು ಕಷ್ಟ ಉದ್ಭವಿಸುತ್ತದೆ ಎನ್ನುವುದನ್ನು ತಾವು ಯೋಚನೆ ಮಾಡಬೇಕಾಗಿತ್ತು. 1961ನೇ ಇಸ್ವಿಯಲ್ಲಿ ಮೈನರ್ ಆಗಿರುವವರು ಅಥವಾ ವಿಧವೆಯವರು ಡಿಕ್ಲರೇಷನ್ ಕೊಡದೆ ಗೇಣಿ ಸಾಗುವಳಿಗೆ ಇಟ್ಟುಕೊಳ್ಳಬಹುದು ಎಂದು ಹಾಗೆಯೇ ಬಿಟ್ಟು ಬಿಟ್ಟಿದ್ದರೆ ಇವತ್ತು ಒಬ್ಬ ಮೆಜಾರಿಟಿ ಬಡವಂಥವನು ರೆಜ್ಯೂಮ್ ಮಾಡಿಕೊಳ್ಳುವುದಕ್ಕೆ ಅವಕಾಶವಿಲ್ಲ ಎಂದರೆ, ಅವನ ಅಶನವಸನಗಳ ಪರಿಸ್ಥಿತಿ ಏನು ಎಂದು ಯೋಚನೆ ಮಾಡಬೇಕಾಗುತ್ತದೆ. ವಿಧವೆಯಾದರೂ ಕೂಡ ಒಂದು ಎಕರೆ ಗೇಣಿಗೆ ಕೊಡತಕ್ಕ ಪರಿಸ್ಥಿತಿ ಇಲ್ಲ ಎಂದು ಹೇಳುವುದಾದರೆ ಯಾರು ತಾನೆ ಅವಳನ್ನು ಎಷ್ಟು ನೋಡಿಕೊಳ್ಳುತ್ತಾರೆ? ಒಬ್ಬರು ಕುಟುಂಬದಲ್ಲಿ ಮ್ಯಾನೇಜರ್ ಆಗಿದ್ದವರು ಯಾರಾದರೂ ನೋಡಿಕೊಳ್ಳಬಹುದೆಂದು ನಾಗಣ್ಣನವರು ಕೇಳಿದ ಪ್ರಶ್ನೆಗೆ ಮಂತ್ರಿಗಳು ಉತ್ತರ ಹೇಳಿದ್ದಾರೆ. ಅವರವರ ಕಾಲಮೇಲೆ ನಿಂತುಕೊಳ್ಳಬೇಕೇ ಹೊರತು ಶಿರಕ್ಕೆ ಹಸ್ತ ಯಾವಾಗಲೂ ಕೊಡುತ್ತಾನೆಂದು ನಂಬಬಾರದು. ಅದರಿಂದ ಸ್ವಲ್ಪ ಅನ್ಯಾಯ ವಾಗುತ್ತದೆ ಎನ್ನುವ ಮಾತನ್ನು ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಯಾವತ್ತು ಈ ಬಿಲ್ ಅಮೆಂಡ್‌ಮೆಂಟ್ ಆಕ್ಟ್ ಆಗಿ ಬರುತ್ತದೆ ಆ ತಾರೀಕಿನಿಂದ ಗೇಣಿದಾರರ ಸಾಗುವಳಿಯ ಹಕ್ಕಿರತಕ್ಕ ಜಮೀನು ಎಲ್ಲಾ ಸರ್ಕಾರದ ವಶ ಎಂದು ಹೇಳಿದ್ದೀರಿ. ಮೂರು ಕಾನು ಉತ್ಪತ್ತಿ ಇಲ್ಲದೆ 3, 4, 5 ಎಕರೆ ಜಮೀನು ಇರುವವರು ಪೂರಾ ಜಮೀನನ್ನು ಗೇಣಿ ಕೊಟ್ಟುಕೊಂಡು ಬಿಟ್ಟಿದ್ದಾರೆ. ಯಾರಿಗೆ ಕೊಟ್ಟಿದ್ದಾರೆ, ಅವರು ಯಾವಾಗ ಜಮೀನು ಕೊಟ್ಟಿದ್ದಾರೆ ಅವರಿಂದ ಬಿಡಿಸಿಕೊಳ್ಳುವ ಹಾಗಿಲ್ಲ. ತಾವು ಗೊತ್ತು ಮಾಡುವ ದಿನದ ಜಮೀನು ಸರ್ಕಾರದ ವಶಕ್ಕೆ ಹೋಗುತ್ತದೆ. ಅತನ ಜೀವನ ವ್ಯವಸ್ಥೆ ಏನು? ಅತನು ಫಾಲಡಾರ್ ತೆಗೆದುಕೊಂಡು ಸಾಯಬೇಕು. ಬೇರೆ ಜಿಲ್ಲೆಯ ಮಾಹಿತಿ ಕಡಿಮೆ. ಶಿವಮೊಗ್ಗ ಜಿಲ್ಲೆಯಲ್ಲಂತೂ ಭೂಸುಧಾರಣೆ ಕಾನೂನು ಬಂದರಾಗಾಯಿತು 10—15 ವರ್ಷಗಳಿಂದ ಇತ್ತಲಾಗಿ ಸರ್ಕಾರದವರು ಏನಾದರೂ ಕಾಂಪನ್ಸೇಷನ್ ಕೊಡುತ್ತಾರೆ, ಪರಿಹಾರ ಕೊಡುತ್ತಾರೆ ಎಂದು ಸಣ್ಣ ಸಣ್ಣ ಜಮೀನುದಾರರು ಮಂಡಿಯಲ್ಲಿ ಸಾಲಸೋಲ ಮಾಡಿ ಕಂದಾಯ ಕಟ್ಟಿಕೊಂಡು ಬರುತ್ತಿದ್ದಾರೆ. ಈ ಕಾನೂನು ಜಾರಿಗೆ ಬಂದರೆ ಅಂತಹವರ ಪರಿಸ್ಥಿತಿ ಏನು? ಮಂಡಿಯಲ್ಲಿ 10—15 ಸಾವಿರ ರೂಪಾಯಿ ಸಾಲಮಾಡಿ ಕಂದಾಯ ಕಟ್ಟಿಕೊಂಡು ಹಕ್ಕಿನ ದಾಖಲೆ ರಕ್ಷಣೆ ಮಾಡಿಕೊಂಡು ಬಂದರೆ, ಮಕ್ಕಳು, ಮರಿಗಳಿಗೆ ಬಾಂಡ್ ಆದರೂ ಸಿಗುತ್ತದೆ, 4 ಪರ್ಸೆಂಟ್ ಇಂಟರೆಸ್ಟ್ ಕೊಟ್ಟರೆ ಎಷ್ಟೊಂದು ಆಯಿತು, ಹೊಟ್ಟೆ ಹೊರೆದುಕೊಳ್ಳಬಹುದು ಎನ್ನುವ ಜಮೀನುದಾರರು ಇರುತ್ತಾರೆ ಅಂತಹರು ಗತಿ ಏನು! ಮೊದಲೇ ರೈತ ಜನಾಂಗದಲ್ಲಿ ಜನಜಾಗೃತಿ ಉಂಟಾಗಿ, ಗೇಣಿಗೆ ಕೊಡುತ್ತಾ ಇರಲಿಲ್ಲ. ಈಗ ಡಿಕ್ಲೇರ್ ಮಾಡಿದ ಮೇಲೆ ಕೇಳುವುದು ಸಹಜ ಬೇಡ. ಆ ವಿಷಯ ಕೋಣಂದೂರು ಲಿಂಗಪ್ಪನವರಿಗೆ ಗೊತ್ತು. ಕಾಗೋಡು ತಿಮ್ಮಪ್ಪನವರಿಗೂ ಗೊತ್ತು. ಅವರ ಜೀವನಕ್ಕೆ ವ್ಯವಸ್ಥೆ ಏನು? ಕಾಂಪನ್‌ಸೇಷನ್ ಎಷ್ಟು ಕೊಡಬೇಕೆಂದು ತೀರ್ಮಾನಮಾಡಿದ್ದೀರಿ, ಅದರಲ್ಲಿ ಕೊನೆಗೆ ಅರ್ಧ ಭಾಗವಾದರೂ ಕೊಡುತ್ತೇವೆಂದು ಹೇಳಿ. ಸಾಧ್ಯ ಪಾದಮ್ಟು ಪೂರ್ತಿ ಕೊಡಬೇಕು ಯಾಪಯಾಪುಹೋ, ಯಾತಯಾತಕ್ಕೋ ರಾಷ್ಟ್ರೀಕೃತ ಬ್ಯಾಂಕುಗಳ ಸಹಾಯ ತೆಗೆದುಕೊಂಡು ಕೆಲಸ ಮಾಡುತ್ತೀರಿ. ಇಲ್ಲಿಯೂ ಕೂಡ ಮಾನವೀಯತೆಯ ದೃಷ್ಟಿಯಿಂದ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಹಾಯ ಪಡೆದು ಸಂಪೂರ್ಣ ಕಾಂಪೆನ್‌ಸೇಷನ್ ಕೊಡುವ ವ್ಯವಸ್ಥೆ ಮಾಡದೇ ಹೋದರೆ ಇನ್ನೊಂದು ನಿರ್ಗತಿಕ ವರ್ಗವನ್ನು ತಾವು ಸೃಷ್ಟಿ ಮಾಡುತ್ತೀರಿ.

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ಶ್ರೀ ಕೋಣಂದೂರು ಲಿಂಗಪ್ಪ.—ಒಂದೇ ಸಾರಿ ಪೂರ್ತಿ ಕೊಡುವುದು ಸಾಲದು. 2,000 ರೂಪಾಯಿ 4,000 ರೂಪಾಯಿ ಆದರೆ, ಸರ್ಕಾರ ಅ ್ರೀ ಸಬ್‌ಸಿಡೈಸ್ ಮಾಡಿ, ಲಂಪ್‌ಸಂ ಕೊಡಬೇಕು. ಇಲ್ಲದೇ ಹೋದರೆ ಅವನು ದಿವಾಳಾಗುತ್ತಾರೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಈ ಕಾನೂನು ಜಾರಿಗೆ ತರುವ ಮೊದಲು ಇದನ್ನು ಯೋಚನೆ ಮಾಡಬೇಕೆಂದು ಹೇಳಿದ್ದೆ. ಬಹಳ ಜನರು ಹೊಟ್ಟೆಗೆ ಹಿಟ್ಟಿಲ್ಲದೆ ಏಷ್ಟು ತೆಗೆದುಕೊಂಡು ಸಾಯುವ ಪರಿಸ್ಥಿತಿ ಬರುತ್ತದೆ. ತಮಗೆ ಕಾಂಪೆನ್‌ಸೇಷನ್ ಬರುತ್ತದೆ ಎಂದು ತಮ್ಮ ಹಕ್ಕನ್ನು ಉಳಿಸಿಕೊಳ್ಳಲು ಮಂಡಿಯಲ್ಲಿ ಸಾಲ ಮಾಡಿಕೊಂಡಿರುತ್ತಾರೆ; ಊರು ಮನೆಗಳಲ್ಲಿ ಈ ಜಮೀನು ದಾರರು—ಈ ಜಮೀನುದಾರರಲ್ಲಿ ಉಳಿದಿರುವುದು ದಾರಂಒಂದೆ, ಜಮೀನಿಲ್ಲ—50, 100 ರೂಪಾಯಿ ಸಾಲ ಮಾಡಿಕೊಂಡಿರುತ್ತಾರೆ ದೊಡ್ಡ ದೊಡ್ಡ ಸಾಹುಕಾರರು ಇವರ ಹತ್ತಿರ ಜಮೀನು ಹೇರಳ ವಾಗಿದೆಯೆಂದು ಕನ್ನಡಿಯೊಳಗಿನ ಗಂಟನ್ನೋಡಿ ಇವರಿಗೆ ಸಾವಿರಾರು ರೂಪಾಯಿ ಸಾಲ ಕೊಟ್ಟಿರುತ್ತಾರೆ. ತಾವು ಕಾನೂನು ಜಾರಿಗೆ ಬಂದಾಗಾಯಿತಿನಿಂದ ಆತನ ಜಮೀನು ಸರ್ಕಾರದ ವಶಕ್ಕೆ ಹೋಗುತ್ತದೆ ಎಂದು ಹೇಳಿದ್ದೀರಿ. ಅವರ ಗತಿಯನು; ಅವರು ಯಾರ ಮನೆಯಲ್ಲಿ ಕೆಲಸಕ್ಕೆ ಹೋಗಬೇಕು; ಸಾಲ ಕೊಟ್ಟವರ ಮನೆಗೆ ಹೋಗಬೇಕೇ ಅಥವಾ ಫಾಲಿಡಾಲ್ ತೆಗೆದುಕೊಳ್ಳಬೇಕೇ ಎಂದು ಯೋಚನೆ ಮಾಡಬೇಕಾಗಿದೆ. ಇದನ್ನು ಮಾನವೀಯತೆಯ ದೃಷ್ಟಿಯಿಂದ ಆಲೋಚನೆ ಮಾಡಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಜಮೀನುದಾರರು ಕೋಷಣ್ ಪೂಡತಕ್ಕವರು ಎಂಬ ಪ್ರತೀತಿ ಇದೆ. ಮಾನ್ಯ ಕೋಣಂದೂರು ಲಿಂಗಪ್ಪನವರು ಹೇಳಿದ ಹಾಗೆ ಜಮೀನುದಾರರಲ್ಲಿ ಎರಡು ವರ್ಗ ಇದೆ. ಬಹಳ ಕಾಲದಿಂದ ರೈತರನ್ನು ಅವರು ನಮ್ಮ ಕುಟುಂಬಕ್ಕೆ ಸೇರಿದವರು ಎಂದು, ಅವರಿಗೆ ಭತ್ತ ಇಲ್ಲದಿದ್ದರೆ ಬತ್ತ ಕೊಟ್ಟುಕೊಂಡು, ಔಷಧಿ ಇಲ್ಲದಿದ್ದರೆ ಔಷಧಿಕೊಟ್ಟುಕೊಂಡು, ದುಡ್ಡು ಇಲ್ಲದಿದ್ದರೆ ದುಡ್ಡು ಕೊಟ್ಟು ಕೊಂಡು ಯಾವತ್ತೂ ಮಾನವೀಯತೆಯ ಅನುಕಂಪ ತೋರಿಸಿಕೊಂಡು ನಮ್ಮ ದಯಾತೆ ಇರುವ ಜಮೀನುದಾರರು ಇದ್ದಾರೆ. ಕೆಲವು ಜಮೀನುದಾರರು, ಗೇಣೀದಾರರು ಗೇಣಿ ಕೊಟ್ಟರೆ ತೆಗೆದುಕೊಂಡು, ಕೊಡದೇ ಹೋದರೆ ಕೋರ್ಟಿಗೂ ಹೋಗದೆ ಇರುವವರು ಇದ್ದಾರೆ. ಪಹಣಿಯಲ್ಲಿ ವ್ಯತ್ಯಾಸಮಾಡಿ ಎಲ್ಲಾ ಸ್ವಂತ ಸಾಗುವಳಿ ಮಾಡಿ ಕೊಳ್ಳುವ ಆಸ್ತಿ ಎಂದು ಕುಟಿಲ ತಂತ್ರವನ್ನು ಕೂಡ ಮಾಡಲಿಲ್ಲ. ಕೇವಲ ಮಾನವೀಯತೆಯ ದೃಷ್ಟಿಯಿಂದ ಇವನೂ ನನ್ನ ಹಾಗೆ ಬದುಕಬೇಕು ಎನ್ನುವ ಜಮೀನುದಾರರು ಇದ್ದಾರೆ. ಅಂತಹವರ ಪರಿಸ್ಥಿತಿ ಏನು? ಅವರು ಅಶನವಸನಗಳನ್ನು ಮಾಡಿದಾರಾದೆ? ನಾಲ್ಕು ಜನರಂತೆ ಇವರೂ ಕೂಡ ಬದುಕಬಾರದೆ, ಎನ್ನುವ ಪ್ರಶ್ನೆಯನ್ನು ನಾವು ಯೋಚನೆ ಮಾಡಬೇಕಾಗಿದೆ. ಏನೋ; ಇದರಲ್ಲಿ ೧ ವರ್ಷದ ಇನ್‌ಕಂ ಟ್ಯಾಕ್ಸ್ ಅಸೆಸ್‌ಮೆಂಟ್ ಮೇಲೆ 12,000 ರೂಪಾಯಿ ಎಂದು ನಿಗದಿ ಮಾಡಿದ್ದೀರಿ. ನಾನು ಕೇಳುತ್ತೇನೆ, ಎಲ್ಲಿಯವರೆಗೆ ಈ ದೇಶದಲ್ಲಿ ಕಪ್ಪು ಹಣವನ್ನು ಹೊರಗೆ ತರುವುದಿಲ್ಲವೋ, ಅಲ್ಲಿಯವರೆಗೆ ಇನ್‌ಕಂ ಟ್ಯಾಕ್ಸ್‌ಗೆ ಅಥವಾ ಯಾವ ಟ್ಯಾಕ್ಸಿಗೂ ಒಳಪಡದೆ ಲಕ್ಷಗಟ್ಟಲೆ ಉತ್ಪತ್ತಿ ಬರುತಕ್ಕ ಕೋಟ್ಯಾಧೀಶರು ಪಟ್ಟಣಗಳಲ್ಲಿ, ನಗರಗಳಲ್ಲಿ ಇದ್ದಾರೆ. ಇವರಿಗೆ ಯಾವ ಟ್ಯಾಕ್ಸೂ ಇಲ್ಲ. ಆದೇ ಜಮೀನುದಾರರು ಎಂದು ಏನು ಕರೆಯುತ್ತೀರಿ, ಅವರ ಜಮೀನು ಮೇಲಕ್ಕೆ ಎಷ್ಟು ಕಾಣುತ್ತದೆ. ಆದುದರಿಂದ ಎಲ್ಲ ಟ್ಯಾಕ್ಸಿಗೂ ಅವರು ಒಳಪಡಬೇಕು. ಅಗ್ರಿಕಲ್ಚರ್ ಇನ್‌ಕಂ ಟ್ಯಾಕ್ಸ್, ಅಗ್ರಿಕಲ್ಚರಲ್ ವೆಲ್ತ್ ಟ್ಯಾಕ್ಸ್ ಎಲ್ಲ ಅತನು ಕೊಡಬೇಕು. ಅವನಿಗೆ ದುಡ್ಡು ಬರಲಿ ಬಾರದೆ ಇರಲಿ, ಕೈಯ್ಯಲ್ಲಿ ದುಡ್ಡು ಇರಲಿ ಇಲ್ಲದೇ ಇರಲಿ, ಪ್ರತಿಯೊಂದು ಟ್ಯಾಕ್ಸ್‌ನ್ನೂ ಕೊಡಬೇಕಾಗಿದೆ. ಹಕ್ಕು ಉಳಿಸಿಕೊಳ್ಳಲು ಅವನು ಸಾಲ ಮಾಡಿ ಟ್ಯಾಕ್ಸ್ ಕೊಡುತ್ತಾನೆ. ಈ 12 ಸಾವಿರ ಉತ್ಪತ್ತಿಯಿಂದ ಯಾರಿಗೆ ತೊಂದರೆ, ಅಂದರೆ ಸರ್ಕಾರಿ ನೌಕರಿಯಲ್ಲಿರತಕ್ಕ ಕೆಲವೇ ಜನ ಅಧಿಕಾರಿಗಳಿಗೆ ಇದರಿಂದ ತೊಂದರೆಯಾಗುತ್ತದೋ ಏನೋ ಯಾವ ಒಬ್ಬ ವ್ಯಾಪಾರಸ್ಥನಿಗೂ, ವ್ಯವಹಾರಸ್ಥನಿಗೂ ಇದರಿಂದ ತೊಂದರೆಯಾಗುತ್ತದೆಂದು ನನಗನ್ನಿಸುವುದಿಲ್ಲ. ತಾವು ೫ ವರ್ಷದ ಅಂಕಿಅಂಶ ಆಧಾರ ಇಟ್ಟಿದ್ದೀರಿ. ಅವನು ಒಂದು ವರ್ಷ 5,000 ರೂಪಾಯಿ ಎಂದು, ತೋರಿಸುತ್ತಾನೆ ಇನ್ನೊಂದು ವರ್ಷ 10,000 ರೂಪಾಯಿ ಎಂದು ತೋರಿಸುತ್ತಾನೆ. ಮತ್ತೊಂದು ವರ್ಷ 15,000 ರೂಪಾಯಿ ಎಂದು ತೋರಿಸುತ್ತಾನೆ. ದಾಮಾಷಾ ಪ್ರಕಾರ ನೋಡಿದರೆ, ಅವನಿಗೆ ಇದು ಲಾಗೂ ಆಗುವುದಿಲ್ಲ.

ಶ್ರೀ ಡಿ. ಕೆ. ನಾಯ್ಕರ್.—ಇದು ಸರ್ಕಾರಿ ನೌಕರರಿಗೆ ಮಾತ್ರ ಲಾಗು ಆಗುತ್ತದೆಂದು ನಮ್ಮ ಅಭಿಪ್ರಾಯ ತಿಳಿಸಿದರಿ. ಅವನು ಇವ್ಹಕಂಟ್ಯಾಕ್ಸ್‌ನ ವರ್ಷ ಕಂಪಿನ್ಯೂಯಸ್ ಆಗಿ ಕಟ್ಟ

ಬೇಕು ಎಂದು ಇದೆ. ಪ್ರತಿವರ್ಷ 12,000 ರೂಪಾಯಿ ಕೊಟ್ಟಿರಬೇಕು. ಅಂದರೆ, ಅವರು ತಿಂಗಳಿಗೆ 1000 ರೂಪಾಯಿ ಸಂಬಳ ತೆಗೆದು ಕೊಂಡಿರಬೇಕು. ಅಂತಹವರು ಸರ್ಕಾರದ ನೌಕರಿಯಲ್ಲಿ ಎಷ್ಟು ಜನ ಇದ್ದಾರೆ?

9. *Marketing Department and* 10. *Weights and Measures Department* :—The C and R Rules of these departments are in the process of being finalised.

(*c*) The ratio varies from one category of posts to another and from one depatment to another. The particulars of each category of posts are available in the printed volumes of C and R Rules kept in the Legislature Library.

(*d*) Reservations for SCs and STs and Backward Classes are made in accordance with executive orders issued by Government in pursuance of Article 16 (4) of the Constitution. The C and R Rules only provide for the method of recruitment and the qualifications for each category of posts. Rule 9 (1) of the Mysore State Civil Services (General Recruitment) Rules which are applicable to all departments provides that in all cases of direct recruitment, vacancies shall be reserved and filled by members of the Scheduled Castes and Scheduled Tribes and other Backward Classes to such extent and in such manner as may be specially provided for in the rules made for that purpose.

LIFT-IRRIGATION SCHEMES IN MUDDEBIHAL TALUK

97. Sri M. M. SAJJAN (Muddebihal) :—

Will the Minister for Public Works and Electricity be pleased to state :—

(*a*) the number of L.I. Schemes proposed to be taken up in Muddebihal taluk of Bijapur District ;

(*b*) the number of Lift Irrigation Schemes ready as on 25th February 1973 for commissioning :

(*c*) of them, the number of Schemes commissioned ;

(*d*) the total acres that will be irrigated by all these proposed Lift Irrigation Schemes ;

(*e*) whether electricity has been supplied to these L.I. Works till to-day ?

Sri H. M. CHHANNABASAPPA (Minister for Public Works and Electricity) :—

(*a*) The following Five (5) L.I. Schemes have been recently taken up for execution :

1. L.I. Scheme at Devoor.
2. L.I. Scheme at Masuli

(SRI H. M. CHANNABASAPPA)

3. L.I. Scheme at Madari
4. L.I. Scheme at Tangadi
5. L.I. Scheme at Hadalgi

(*b*) Nil.

(*c*) Nil.

(*d*) Proposed atchkat is 122 acres.

(*e*) No. Only the Civil works are in progress.

IRRIGATION TANKS IN DAVANGERE TALUK

100. Smt. C. NAGAMMA KESHAVAMURTHY (Davangere).—

Will the Minister for Public Works and Electricity be pleased to state.—

(*a*) the total number of irrigation tanks (with Survey numbers) village-wise maintained and repaid by the Public Works Department in Davangere Taluk;

(*b*) the amount spent for such tanks in Davangere Taluk during the last 3 years?

Sri H. M. HANNABASAPPA (Minister for Public Works and Electricity).—

(*a*) *Vide* Statement appended.

(*b*) *Years*			*Amount spent*
1971-72	..	..	Rs. 96,273
1971-72	..	..	Rs. 73,016
1972-73 (upto January 1973).	..	..	Rs. 76,316
	Total	..	Rs. 2,45,605

STATEMENT

Sl. No.	Name of tank	Name of village	Survey No.
1	Kodeganur Tank	Kodaganur and Annapura	231 &87
2	Huchavvanahalli Tank	Huchavvanahalli	54
3	Nalkunda Tank	Nalkunda	100
4	Sultanipura Tank	Sultanipura	53
5	Echagatta Tank	Echagatta	66
6	Mayakonda Tank	Mayakonda	10,6,3,4
7	Kenchahalappanakatte	Bullapura	7
8	Kurki Tank	Kurki	122
9	Hirethogaleri Tank	Hirethogaleri	73
10	Kabbur Tank	Kabbur	173
11	Thumbigere Tank	Thumbigere	45
12	Igoor Tank	Igoor	226
13	Siddanur Tank	Siddanur	5
14	Hebbal Tank	Hebbal	63
15	Halavarathy tank	Halavarthy	18
16	Anagodu tank	Anagodu	67
17	Kogganur tank	Kogganur	36
18	Honnur tank	Honnur	240
19	Neerthadi tank	Neerthadi	78
20	Kandanakovi tank	Kandanakovi	122, 13
21	Anaji Doddakere	Anaji	321
22	Anaji Chikkere	Anaji	10
23	Naraganahalli Tank	Naraganahalli	210
24	Neralgi tank	Neralgi	62
25	Agasanakatte Tank	Agasanakatte	...

HEALTH UNITS AND PRIMARY HEALTH CENTRES IN SIRUGUPPA TALUK

103. Sri B. E. RAMAIAH (Siruguppa).—

Will the Minister for Health be pleased to state:—

(a) whether establishment of Health Units and fresh Primary Health entres is done on the basis of population;

(SRI B. E. RAMAIAH)

(*b*) if so, whether there is any proposal before Government to establish two more Primary Health Centres at Siruguppa Taluk;

(*c*) if so, when these centres will be opened?

Sri H. SIDDAVEERAPPA (Minister for Health).—

(*a*)) Health Unit Type Dispensaries are sanctioned to a 15,000 population block having no allopathic medical facilities. There is no scheme to sanction any Primary Health Centre at present.

(*b*) No.

(*c*) Does not arise view of reply to clause (*b*).

TRANSFER OF OFFICERS OF S.J. POLYTECHNIC BANGALORE.

112. Sri B. G. BANAKAR (Hirekerur).—

Will the Minister for Education be pleased to state:—

(*a*) whether the Government is aware of the fact that a large number of officers in S. J. Polytechnic, Bangalore are serving for are in service for more than 4 years to 21 years outside tre Bangalore City;

(*b*) whether the Government is also aware of the fact that many of the officers attached to the S. J. Polytechnic, Bangalore have not at all been posted to serve at Bangalore City even though they are in service for more than 4 years to 21 years outside the Bangalore City;

(*c*) whether the Government intends to regulate the transfer of these officers on sound and impartial basis without any kind of injustice, partiality and prejudice to others by taking bold and impartial steps?

Sri A. R. BADARINARAYANA (Minister for Education).—

(*a*) Yes, a few Officers connected with specialised courses.

(*b*) The question is not clear.

(*c*) Transfers are regulated subject to the exisgencies of public service, availability of equivalent posts and suitability of the persons to be posted.

Petition *re*: Water Rate Levied in North Kanara District

Presentation

Sri V. M. GHADI (Haliyal).—I present a petition signed by the President, Taluk Development Board, Karwar and others regarding water rate leived in North Kanara District.

Petition *re*: Rural electrification in Supa, Karwar and Haliyal

Presentation

Sri V. M. GHADI.—I present a petition signed by the President, Taluk Board, Supa, North Kanara and others regarding Rural Electrification in the taluks of Supa, Karwar and Haliyal in North Kanara District.

Madam SPEAKER.—Both the petitions are presented.

Views abont forming the Malnad and Arecanut Development Board

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅರಣ್ಯ ಮಂತ್ರಿಗಳು ಶ್ರೀಮಾನ್ ಜಯಪ್ರಕಾಶ್ ನಾರಾಯಣ್ ಅವರ ಗಮನಸೆಳೆಯುವ ಸೂಚನೆಗೆ ಉತ್ತರ ಕೊಡುವಾಗ ಒಂದು ವಿಷಯವನ್ನು ಅದರಲ್ಲಿ ಪ್ರಸ್ತಾಪ ಮಾಡಿದ್ದಾರೆ.

ಅಧ್ಯಕ್ಷರು.—ಈಗ ಆ ವಿಷಯ ಮುಗಿದುಹೋಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಕಾಡಿನ ಮಂತ್ರಿಗಳು ಏನಾದರು ಹೇಳಿ ಹೊರಟುಹೋಗುತ್ತಾರೆ. ಸಭೆಯಲ್ಲಿ ಇರುವುದಿಲ್ಲ.

ಅಧ್ಯಕ್ಷರು.—ಆ ರೀತಿ ಹಗುರವಾಗಿ ಮಾತನಾಡಬಾರದು. ಅವರು ಕಾಡಿನ ಮಂತ್ರಿಗಳಾದರೆ ತಾವು ಊರಿನ ಸದಸ್ಯರೇನು ? ಆ ರೀತಿ ಮಾತನಾಡಬಾರದು.

ಶ್ರೀ ಕೋಣಂದೂರು ಲಿಂಗಪ್ಪ.—ಅವರು ಹೇಳಿಕೆ ಕೊಡುವಾಗ ;

"In view of the measure taken by Government, it is expected that the areca growers will be relived of the present difficulties and there appears to be no need to form either a Malnad Development Board, Areca Development Board or a Corporation for the purpose". ಎಂದು ಹೇಳಿದ್ದಾರೆ. ಈ ರೀತಿ ಮಲೆನಾಡು ಅಭಿವೃದ್ಧಿ ಮಂಡಲಿಯ ವಿಷಯವನ್ನು ಇದರಲ್ಲಿ ಪ್ರಸ್ತಾಪ ಮಾಡಬೇಕಾದ ಅವಶ್ಯಕತೆ ಏನೇನೂ ಇರಲಿಲ್ಲ. ಕೇವಲ ದುರುದ್ದೇಶದಿಂದ ಈ ರೀತಿ ಹೇಳಿಕೆ ಕೊಟ್ಟಿದ್ದಾರೆ ಮತ್ತು ಆಪಾದನೆ ಮಾಡಿದ್ದಾರೆ. ಹೇಗಾದರೂ ಮಾಡಿ ಮಲೆನಾಡು ಅಭಿವೃದ್ಧಿ ಮಂಡಲಿಯ ರಚನೆಗೆ ಅಡ್ಡಗಾಲು ಕೊಡುವ ಯೋಚನೆ ಮಾಡುತ್ತಿದ್ದಾರೆಂದು ಕಾಣುತ್ತಿದೆ. ಅದಕ್ಕಾಗಿ ಈ ರೀತಿ ಹೇಳಿಕೆ ಕೊಟ್ಟಿದ್ದಾರೆಂದು ಹೇಳುತ್ತಿದ್ದೇನೆ. ಈ ಮಾತನ್ನು ಅವರು ವಾಪಸ್ ತೆಗೆದುಕೊಳ್ಳಬೇಕು ಇಲ್ಲವೇ ಸರ್ಕಾರದವರು ಈ ಬಗ್ಗೆ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಸಂಬಂಧಪಟ್ಟ ಮಂತ್ರಿಗಳು ಇಲ್ಲದಿರುವಾಗ ತಾವು ಚರ್ಚೆ ಎಂದು ಏನಾದರು ಕೇಳುವುದು ಸರಿಯಲ್ಲ. ಅವರು ಹೇಳಿರುವುದು ದುರುದ್ದೇಶದಿಂದ ಕೂಡಿದೆ, ಅದನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಇದು ಸಮಯವಲ್ಲ. ಮತ್ತು, ಈ ವಿಚಾರದಲ್ಲಿ ಒಂದು ಖಾನಗೀ ನಿರ್ಣಯ ಚರ್ಚೆಯಾಗುತ್ತಿದೆ; ಅದರ ಬಗ್ಗೆ ಮಾನ್ಯ ಕಾಗೋಡು ತಿಮ್ಮಪ್ಪನವರು ಮಾತನಾಡುತ್ತಿದ್ದಾರೆ. ಅದಕ್ಕೆ ಸರ್ಕಾರದವರು ಉತ್ತರ ಕೊಡುತ್ತಾರೆ.

Continuation of the term of the Taluk Development Boards

ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ತಾಲ್ಲೂಕ್ ಅಭಿವೃದ್ಧಿ ಮಂಡಲಗಳ ಅವಧಿ ಇವೊತ್ತಿಗೆ ಮುಗಿದುಹೋಗುತ್ತದೆ. ಪುನಃ ಟರ್ಮನ್ನು ಎಕ್ಸ್‌ಟೆಂಡ್ ಮಾಡುತ್ತಾರೆಂಬ ವದಂತಿ ಇದೆ. ಮತ್ತು, ತಾಲ್ಲೂಕ್ ಬೋರ್ಡ್‌ಗಳನ್ನು ವಜಾ ಮಾಡಿ ಆಡಳಿತಾಧಿಕಾರಿಗಳನ್ನು ನೇಮಕ ಮಾಡುವ ಬಗ್ಗೆ ತಮ್ಮ ಪಾರ್ಟಿಯಲ್ಲಿ ನಿರ್ಣಯವಾಗಿದೆ ಎಂದು ಬಹಳ ಜನರು ಮಾತನಾಡುತ್ತಿದ್ದಾರೆ. ಆದಕಾರಣ ಈ ಬಗ್ಗೆ ಮಾನ್ಯ ಸಚಿವರು ಸ್ಪಷ್ಟವಾದ ಅಭಿಪ್ರಾಯವನ್ನು ತಿಳಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ತಾಲ್ಲೂಕು ಬೋರ್ಡ್‌ಗಳಿಗೆ ಚುನಾವಣೆ ನಡೆಸುವ ವಿಚಾರದಲ್ಲಿ ಸರ್ಕಾರದ ನಿಲುವೇನು ಎಂಬುದನ್ನು ನಿರ್ದಿಷ್ಟವಾಗಿ ತಿಳಿಸಬೇಕು:

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ. ಮಾನ್ಯ ಅಧ್ಯಕ್ಷರೇ, ಈಗಾಗಲೇ ಅಭಿವೃದ್ಧಿ ಇರಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆಗಳ ಮೇಲೆ ಚರ್ಚೆ ನಡೆದು ಉತ್ತರ ಕೊಡುವಾಗ ನಾನು ಈ ಘನವನ್ನು ಹೊಂದಿದ ಸಭೆಗೆ ಈ ವಿಷಯದಲ್ಲಿ ತಿಳಿಸಿದ್ದೆ. ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಲಗಳಿಗೆ ಚುನಾವಣೆಗೆ ಸಂಬಂಧಪಟ್ಟ ವಿಷಯ ಹಾಗೂ ಅದನ್ನು ಮುಂದುವರೆಸಬೇಕೇ ಅಥವಾ ಬೇಡವೇ, ಅಥವಾ ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡಬೇಕೇ ಅಥವಾ ಬೇಡವೇ, ಅಥವಾ ಅಡ್ಮಿನಿಸ್ಟ್ರೇಷನ್ ಕಾನ್ಸಿಲನ್ನು ಮಾಡಬೇಕೇ ಅಥವಾ ಬೇಡವೇ ಎಂಬತಕ್ಕಂಥ ಎಲ್ಲ ವಿಷಯಗಳು ಈಗ ಸರ್ಕಾರದ ಮುಂದೆ ಇವೆ, ಅಸೆಂಬ್ಲಿ ಮುಗಿಯುವುದರೊಳಗೆ ಆ ಬಗ್ಗೆ ಒಂದು ತೀರ್ಮಾನವನ್ನು ಹೇಳುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡುತ್ತೇವೆಂದು ಹೇಳಿದ್ದೆ. ಆದರೆ ಅದು ಇನ್ನೂ ಕೂಡ ಸರ್ಕಾರದ ತೀವ್ರವಾದ ಪರಿಶೀಲನೆಯಲ್ಲಿದೆ. ನಾವು ಯಾವ ಒಂದು ತೀರ್ಮಾನವನ್ನೂ ತೆಗೆದು ಕೊಂಡಿಲ್ಲ. ಇವೊತ್ತಿನದಿವಸ ತಾಲ್ಲೂಕ್ ಅಭಿವೃದ್ಧಿ ಮಂಡಲಗಳ ಅವಧಿ ಮುಗಿಯುತ್ತಿರುವುದರಿಂದ, ಅದರ ಅವಧಿಯನ್ನು ಮುಂದುವರೆಸಬೇಕಾಗಿದೆ ಎಂಬ ವಿಷಯವನ್ನು ಈ ಸದನಕ್ಕೆ ತಿಳಿಸುತ್ತಿದ್ದೇನೆ.

ಕೆಲವು ಮಾನ್ಯ ಸದಸ್ಯರು.—ಎಷ್ಟು ಕಾಲದವರೆಗೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಆ ಬಗ್ಗೆ ಪರ್ಯಾಲೋಚನೆ ಮಾಡುವವರೆಗೆ ಮುಂದಕ್ಕೆ ಹಾಕಲಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಈ ಬಗ್ಗೆ ಇನ್ನೂ ತೀರ್ಮಾನ ತೆಗೆದು ಕೊಂಡಿಲ್ಲ ಎಂದು ಹೇಳಿದರು. ನಾವು ಇನ್ನೂ 10-15 ದಿವಸ ಕೂರುತ್ತೇವೆ. ಅಷ್ಟರೊಳಗೆ ತಾವು ಉತ್ತರ ಹೇಳುತ್ತೀರಾ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಪಂಚಾಯತಿ ಆಕ್ಟ್ ಪ್ರಕಾರ ಡಿವಿಜನರ್ ಕಮೀಷನರ್ ಅವರಿಗೆ ಅಧಿಕಾರವಿದೆ. ಅದರ ಪ್ರಕಾರ ಅವಧಿ ಹೆಚ್ಚಿಸುವುದಕ್ಕೆ ಅವರಿಗೆ ನಾವು ಸೂಕ್ತವಾದಂಥ ಆದೇಶ ಕೊಟ್ಟಿದ್ದೇವೆ. ಸರ್ಕಾರದವರು ಮತ್ತೆ ಅಜ್ಞೆ ಮಾಡುವ ತನಕ ಅವಧಿಯನ್ನು ಮುಂದುವರೆಸಬೇಕೆಂದು ಈಗಾಗಲೇ ಆದೇಶ ಕೊಟ್ಟಿದ್ದೇವೆ. ಇಷ್ಟು ಮಾತ್ರ ಹೇಳುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಪ್ರತಿಯೊಂದು ಬೋರ್ಡಿನವರು ಇಂದಿಗೆ ತಮ್ಮ ಅವಧಿ ಮುಗಿಯುತ್ತದೆಂದುಕೊಂಡು ಎರಡು ಸಾವಿರ ರೂಪಾಯಿಗಳವರೆಗೆ ಬೋರ್ಡಿನ ಹಣವನ್ನು ಡಿನ್ನರ್ ಮತ್ತು ಹೋಜೋ ತೆಗೆಸಿಕೊಳ್ಳುವುದಕ್ಕೆ ಖರ್ಚು ಮಾಡಿದ್ದಾರೆ. ಈ ವಿಚಾರದಲ್ಲಿ ಸರ್ಕಾರದವರು ನಿರ್ದಿಷ್ಟವಾದ ಡೈರಕ್ಷನನ್ನು ದೇಶದಾದ್ಯಂತವಿರುವ ಎಲ್ಲ ತಾಲ್ಲೂಕ್ ಬೋರ್ಡ್‌ನವರಿಗೂ ಕೊಡದೇ ಹೋದರೆ ಇದೇ ರೀತಿ ಹಣವನ್ನು ಪೋಲು ಮಾಡುತ್ತಾರೆ. ಆದಕಾರಣ ಇಂತಹ ತಾರೀಖಿನೊಳಗೆ ಚುನಾವಣೆ ನಡೆಸುತ್ತೇವೆಂಬುದನ್ನು ನಿರ್ದಿಷ್ಟವಾಗಿ ಹೇಳುವುದು ಒಳ್ಳೆಯದು.

ಶ್ರೀ ಕೆ. ಎನ್. ವೀರಪ್ಪಗೌಡ.—ಅದು ಬೋರ್ಡಿನ ಹಣವಲ್ಲ, ಸ್ವಂತ ಹಣ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸರ್ಕಾರದ ನಿಲುವು ಈ ಬಗ್ಗೆ ಖಚಿತವಾಗಿಲ್ಲದಿರುವುದರಿಂದ ಅಧ್ಯಕ್ಷರುಗಳಿಗೆ ಸಭೆಗಳನ್ನು ಕರೆಯುವ ಉತ್ಸಾಹವೇ ಇಲ್ಲ. ಸಭೆ ಕರೆದರೂ ಸಹ ಸದಸ್ಯರು ಸಭೆಗೆ ಹಾಜರಾಗುತ್ತಿಲ್ಲ. ಕಾರಣ ತಾವು ಇಂದು ಹೋಗುತ್ತೇವೋ ಅಥವಾ ನಾಳೆ ಹೋಗುತ್ತೇವೋ ಎಂಬ ಅನುಮಾನ ರಾಜ್ಯದಾದ್ಯಂತವಿರುವ ಎಲ್ಲ ಸದಸ್ಯರಿಗೂ ಇದೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಬಗ್ಗೆ ಸರ್ಕಾರದ ನಿಲುವೇನು ಎಂಬುದನ್ನು ನಿರ್ದಿಷ್ಟವಾಗಿ ಹೇಳಬೇಕು. ಪ್ರಜಾ ಪ್ರಭುತ್ವದ ನೀತಿಯ ಬಗ್ಗೆ ಮಾನ್ಯ ಮಂತ್ರಿಗಳು ಇಷ್ಟೊಂದು ಲಘುವಾಗಿ ಉತ್ತರ ಕೊಡುವುದು ಸರಿಯಲ್ಲ. ಮುಖ್ಯವಾಗಿ ಚುನಾವಣೆ ನಡೆಸುತ್ತೀರಾ ಅಥವಾ ಆಡಳಿತಾಧಿಕಾರಿಗಳನ್ನು ನೇಮಕ ಮಾಡುತ್ತೀರಾ ಎಂಬ ಬಗ್ಗೆ ನಿರ್ದಿಷ್ಟವಾದ ನಿಲುವನ್ನು ರಾಜ್ಯಕ್ಕೆ ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಘನವನ್ನು ಹೊಂದಿದ ಸಭೆಯಲ್ಲಿ ಹೇಳಿಕೆ ಕೊಟ್ಟಿದ್ದೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಘನವಾದ ಹೇಳಿಕೆಯನ್ನು ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿರುವ ಯಾರೇ ಆಗಲಿ ಚುನಾವಣೆಗಳನ್ನು ನಡೆಸಬೇಕೆಂಬುದೇ ಅವರ ಅಭಿಪ್ರಾಯವಾಗಿರುವುದರಿಂದ, ಚುನಾವಣೆಗಳನ್ನು ಯಾವ ಕಾರಣದಿಂದ ಮುಂದಕ್ಕೆ ಹಾಕಿದ್ದೇವೆಂಬುದು ಸಹ ಮಾನ್ಯ ಸದಸ್ಯರಿಗೆ ತಿಳಿದಿದೆ. ಚುನಾವಣೆಗೆ ಸಂಬಂಧಪಟ್ಟ ಎಲ್ಲ ವಿಷಯಗಳು ಸರ್ಕಾರದ ಪರಿಶೀಲನೆಯಲ್ಲಿದೆ ಎಂಬುದನ್ನು ತಿಳಿಸಿದ್ದೇನೆ. ಈ ಅಸೆಂಬ್ಲಿ ಅಧಿವೇಶನ ಮುಗಿಯುವುದರೊಳಗೆ ಸರ್ಕಾರದ ಅಭಿಪ್ರಾಯವನ್ನು ಹೇಳುವುದಕ್ಕೆ ಸರ್ವ ಪ್ರಯತ್ನ ಮಾಡುತ್ತೇನೆಂದು ನಾನು ಈ ಸಭೆಗೆ ಹೇಳಿದ್ದೇನೆ. ಈಗಲೂ ಅದನ್ನೇ ಹೇಳುತ್ತೇನೆ.

12-30 P.M.

Banning the Bangalore University Syndicate to Change the Posts in the University

ಶ್ರೀ ಕೆ. ಆರ್. ಶ್ರೀನಿವಾಸಾಲುನಾಯ್ಡು.—ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾ ಸಚಿವರು ಯೂನಿವರ್ಸಿಟಿಗೆ ಸಂಬಂಧಪಟ್ಟ ಬಿಲ್ಲನ್ನು ಇಂಟ್ರಡ್ಯೂಸ್ ಮಾಡಿದ್ದಾರೆ. ಬೆಂಗಳೂರು ಯೂನಿವರ್ಸಿಟಿಯ ಸಿಂಡಿಕೇಟ್‌ನವರು ಕೆಲವು ಉನ್ನತ ಹುದ್ದೆಗಳನ್ನು ಬದಲಾವಣೆ ಮಾಡುತ್ತಿದ್ದಾರೆ ಎಂದು ಗೊತ್ತಾಗಿದೆ. ಆದ್ದರಿಂದ ಆ ಬಿಲ್ಲು ಈ ಸಭೆಯಲ್ಲಿ ಡಿಸ್‌ಕಷನ್ ಸ್ಟೇಜಿನಲ್ಲಿರುವುದರಿಂದ ಅದು ಮುಕ್ತಾಯವಾಗುವವರೆಗೆ ಬೆಂಗಳೂರು ಯೂನಿವರ್ಸಿಟಿಯಲ್ಲಿ ಯಾವ ಹುದ್ದೆಗಳನ್ನೂ ಬದಲಾವಣೆ ಮಾಡಬಾರದು ಎಂದು ನಾನು ತಮ್ಮ ಮೂಲಕ ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Reply to a Call Attention Notice

ಶ್ರೀ ಟಿ. ಎಂ. ಮಂಜುನಾಥ್.—ಈಗ್ಗೆ ಸ್ವಲ್ಪದಿವಸಗಳ ಹಿಂದೆ ತಿಪ್ಪಟೂರಿನಲ್ಲಿ ಪೋಲೀಸಿನವರು ಮಾಡಿರತಕ್ಕ ಕೃತ್ಯಗಳ ಬಗ್ಗೆ ಮತ್ತು ನೇಕಾರರ ಬಗ್ಗೆ ಹಾಗೂ ಸೀಮೆ ಎಣ್ಣೆಯ ಬಗ್ಗೆ ನಾನು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ. ಅವು ಏನಾದವು ಎಂಬುದು ಗೊತ್ತಾಗಲಿಲ್ಲ.

ಅಧ್ಯಕ್ಷರು.—ನಾನು ಅದನ್ನು ತರಿಸಿ ನೋಡುತ್ತೇನೆ.

Beating Sri Gopi near the Bangalore City Railway Station

ಶ್ರೀ ಎಂ. ಎಸ್. ಕೃಷ್ಣನ್.—ನಿನ್ನೆ ದಿವಸ ನ್ಯಾಯಾಧೀಶರಾದ ಶ್ರೀಮಾನ್ ಹೆಗ್ಗಡೆಯವರು ಬಂದಾಗ ಅವರಿಗೆ ಪರವಾಗಿ ಸ್ವಾಗತ ಮತ್ತು ವಿರೋಧವಾಗಿ ಕೆಲವು ಪ್ರದರ್ಶನಗಳು ರೈಲ್ವೆ ಸ್ಟೇಷನ್‌ನಲ್ಲಿ ನಡೆದವು. ಆಗ ಪೋಲೀಸಿನವರು ಜನಗಳನ್ನು ಹೊಡೆದರು. ಆ ಸಂದರ್ಭದಲ್ಲಿ ನಮ್ಮ ಸ್ನೇಹಿತರಾಂದಂತಹ ಗೋಪಿ ಎನ್ನುವವರನ್ನೂ ಪೋಲೀಸಿನವರು ಹೊಡೆದಿದ್ದಾರೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಪುಂಡಾಟಿಕೆಯನ್ನು ಮಾಡಿದವರನ್ನು ಹೊಡೆಯಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರು ಪ್ರದರ್ಶನ ನಡೆಸುವುದಕ್ಕೆ ಹೋಗಿದ್ದರೆ ಅವರನ್ನು ಪೋಲೀಸಿನವರು ಸಿಕ್ಕಾಪಟ್ಟೆ ಹೊಡೆದಿದ್ದಾರೆ.

ಅಧ್ಯಕ್ಷರು.—ಈ ಬಗ್ಗೆ ಮಾನ್ಯ ಸದಸ್ಯರು ನನಗೆ ನೋಟೀಸ್ ಕಳುಹಿಸಿಲ್ಲ. ಈ ರೀತಿ ಇದ್ದಕ್ಕಿದ್ದಹಾಗೆಯೇ ಎದ್ದು ನಿಂತು ಮಾತನಾಡಿದರೆ ನನಗೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಆ ಬಗ್ಗೆ ನೋಟೀಸು ಕಳುಹಿಸಿ ನಂತರ ಹೇಳಿ.

Search of one Prakash in Bangalore by his Parents

ಶ್ರೀ ಕಾಗೋಡು ತಿಮ್ಮಪ್ಪ.—ನಾನು ರೂಲ್ ನಂಬರ್ 312ರ ಪ್ರಕಾರ ಒಂದು ನೋಟೀಸನ್ನು ತಮಗೆ ಕಳುಹಿಸಿದ್ದೆ. ಆ ವಿಚಾರ ಇಷ್ಟೆ. ಬೆಂಗಳೂರಿನಲ್ಲಿ ಪ್ರಕಾಶ ಎನ್ನುವ ಹುಡುಗನನ್ನು ಯಾರೋ ಅಪಹರಣ ಮಾಡಿದ್ದಾರೆ. ಆ ಹುಡುಗನ ತಂದೆತಾಯಿಗಳು ಅವನನ್ನು ಹುಡುಕಿಕೊಂಡು ಬೀದಿ ಬೀದಿಯಲ್ಲಿ ಅಲೆಯುತ್ತಿದ್ದಾರೆ. ಪೋಲೀಸಿನವರು ಆ ಹುಡುಗನನ್ನು ಹುಡುಕಿಲ್ಲ. 8 ದಿವಸಗಳಿಂದ ಒಬ್ಬ ಹುಡುಗನನ್ನು ಪೋಲೀಸಿನವರು ಹುಡುಕಲಿಲ್ಲ ಎಂದರೆ ಸರ್ಕಾರ ಇದೆಯೇ?

ಅಧ್ಯಕ್ಷರು.—ತಮ್ಮ ನೋಟೀಸನ್ನು ಕಾಲ್‌ಅಟೆನ್‌ಷನ್ ನೋಟೀಸಾಗಿ ಗಣನೆಮಾಡಿ ಕಳುಹಿಸಿದ್ದೇನೆ. ಅದಕ್ಕೆ ಇನ್ನೂ ಉತ್ತರ ಬರಲಿಲ್ಲ. ಉತ್ತರ ಬಂದ ಕೂಡಲೇ ಅದನ್ನು ಅಜೆಂಡಾವಲ್ಲಿ ಸೇರಿಸುತ್ತೇನೆ.

Mysore Land Reforms (Amendment) Bill, 1973, as reported by the J.S.C.

Motion to consider.

(Debate contd.)

†Sri B. B. SAYANAK (Belgaum).—Madam Speaker, according to Section 112 some powers have been given to the Tribunal according to Section 112 some powers have been given to the Tribunal-whether he is a tenant or not must be decieded by the Tribunal. But according to Section 4 of the Joint Select ommittee's recommendation they have retained the word 'Court' as it is. According to the Mysore Land Reforms Act, the Court has a power to deal with the tenants. The word 'Court' is there and there would be complications, and delay. Therefore, I request the Government that this is a grave mistake and it must be rectified and you must use the word 'Tribunal'

in place of the word 'Court'. According to Section 5, a right has been given to a soldier or a seaman to create and continue the lease in respect of his lands. But the same right and privilege are denied to the minor, widow, unmarried woman or a person physically and mentally disabled. This is not correct, because the minor, wido or unmarried women or physically handicapped persons are weaker sections of the Society. We must protect the rights and interests of these persons.

According to Section 15, resumption is given only to the soldiers or seamen. I have no objection because they are doing yeoman service. But if we are not going to protect the interests of these women—unmarried or widows—they will have to sell their body in order to maintain themselves. You must also protect the interests of the minors. This seems to be very incorrect on the part of the Government and I should say that the right of resumption should be given to these persons also.

Section 13 is a good Section. When there is a flood, or when there is drought and some crop is damaged, you are going to give remission or reduction in land revenue to the landlord and in the same way the tenant has a right to get remission or reduction. That is a good provision but you have given the right of award to the court. When the landlord has taken some excess money from the tenant and applies to the court, the court will be ignorant of this. So, the Tashildar is the proper man to know the situation and so the power must be given to the Tashildar under Section 13.

Section 14 has been deleted. It is a good thing. You are going to make the tiller the owner of the soil, but you have not declared the date when the tiller will become the owner. First, you must declare the date when the tiller is to be the owner of the soil.

Another thing: under the Mysore Land Reforms Act, 1961. the landlord or the owner has the right to apply to the Land Tribunal within 15 months from the 2nd October 1965. 80,000 people have made applications and about 60,000 applications have been disposed of. About 20,000 cases are still pending. Who is at fault here? Why should this discrimination be made by the Government? Why should it show partiality in favour of the parties whose cases are disposed of and against those whose cases are not disposed of? Give a direction that the cases should be disposed of within this period and after that period, you must declare that all the matter is over. Now, the time-limit is over regarding Section 14 of the old Mysore Land Reforms Act.

Regarding the surrender of land under Section 25, the landlord, by inducement or by coersion, has got resumption of some land and after the resumption of the land, has sold the land to other tenants. What is the Government going to do in respect of this land? Not only that. Some of the persons—the landlord—have not even gone

(SRI B. B. SAYANAK)

to the Court. They have gone to the Talati and they have changed the diary. There are so many such cases. In such cases, what the Government is going to do in respect of these surrender cases ?

According to Section 48, there is a conctitution of a Tribunal for each taluka. My apprehension is that this Tribunal will be a Congress Party one, because the Assistant Commissioner is a revenue man and you are not going to appoint the M.L.As. of the Opposition Party in my taluka. I can specifically say this. There are so many Committees ; but you have not appointed the M.E.S. Members as Members of the Committees. So, my apprehension is well-founded. You will not appoint any of the three members, *viz.*, Sriyuths Pawashe, Sirdesai or myself. You will appoint Sri S. A. Patil or some other man of your own party. So my apprehension is that this Tribunal will be a Congress Party Tribunal and the other people will not get any justice from this Tribunal. Only your party-men or your henchmen will get justice. I am pre-judging, because this is my experience.

Then, you have not given the right of engaging an Advocate by the tenant. Taking into consideration that most of them are illiterate persons, you must allow an Advocate to put forth their cases. There is another thing. This Tribunal must have judicial powers and against the order of this Tribunal, there must be an appeal. The orders of this Tribunal should not be final.

Regarding the ceiling on land, I have no objection for the ceiling on land, because this matter will not affect our Bombay-Karnatak area, because we are very poor landlords and we have got land below even the ceiling prescribed. We have no objection regarding the ceiling on land but the ceiling must have a retrospective effect from 18th November 1961.

There is another provision which refers to the sugar factories. You have not given exemption in respect of the sugar factories. That is a good thing, because, I know that Mandya Sugar Factory has sold excess land to some of the persons. I would like to request the Government to take back the land that is sold by the Sugar Factory.

Regarding the disposal of surplus land, Government have stated that 4 lakh-acres will be in surplus and they are going to distribute it ; 50 per cent of it will be given to the Scheduled Castes and Scheduled Tribes. Government are going to give one acre of the First Class land to each person. Government should consider whether this is an economic holding and whether that person holding that land would be able to maintain even a bullock. Instead, I would request the Government to encourage co-operative farming. In co-operative farming, there are so many advantages and so many facilities

are afforded. Even 10 persons can register a Co-operative Farm. According to Clause 98, the contribution by a member to the Co-operative Farm is (1) Funds, (ii) personal labour, (iii) agricultural implements, agricultural stock and such other articles as may be prescribed. According to Clause 102, the Co-operative Farm will be entitled to concessions and facilities such as :

(*a*) reduction of land revenue ;

(*b*) reduction of or exemption from agricultural incometax ;

(*c*) free technical advice from experts employed by the Government ;

(*d*) financial aid and grant of subsidies and loans with or interest ; and

(*e*) priority in irrigations from State irrigation works.

So, I request the Government to encourage the Co-operative Farms so that people will de justice to agricultura production. The aim of the land reforms is to increase production from agriculture and hence if formation of Co-operative Farms are encouraged, there will be more yield and more production from land.

A word about Plantations. Under Clause 104, Plantations are exempted from ceiling. Plantation is a commercial crop and, therefore, according to me, Government should not give exemption from ceiling to it also. Plantations also must be brought under the purview of the ceiling limit.

Religious, charitable and educational institutions have been prohibited from holding any land. I am of the opinion that under the British regime, these institutions have rendered good service in promoting education ; they have also done good social work. But now it is the duty of the Government to provide educational facilities and Government is doing its best to educate the poor people. So, it is good that Government have introduced this provision relating to religious institutions, etc.

According to me, Government have given too many powers to the Tahsildar. As you know, the Revenue Department is the most corrupt Department. So it is not advisable to give too many powers to the Tahsildar. The administration of 21 Clauses has been entrusted to the Tahsildar. I request the Government not to give too many powers to the Revenue Department. According to Clause 9 of the Bill, when there is a dispute regarding the rent payable, the dispute between the landlord and the tenant should bb settled by the Tahsildar. There are so many cases pending before the Tahsildar's Court. Yet, I want to know why the settlement of this dispute is entrusted to the Tahsildar. I request the Revenue Minister and the Government to entrust the administration of this Clause to the Court.

(SRI B. B. SAYANAK)

Under Clause 8, the rent payable in respect of any land by the tenant, is 10 times the land revenue payable in respect of such land. This is too high because, according to Clause 10-A, the tenant has so many liabilities and responsibilities. He has to pay land revenue, water rate and all cesses or fees levied thereon to the State Government or a local authority in respect of the land. There are so many cesses on the land. Therefore, the rent must be five times the assessment.

Government should take the initiative to have this urban ceiling also. If Government are going to take side by side this urban ceiling, the land reforms will be a success and will fulfil the objectives we have in view. Otherwise, the urban people will get the benefits and the rural people or the villagers will suffer.

With these few words, I thank the Chair and conclude.

† ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ). — ಸನ್ಮಾನ್ಯ ಅಧ್ಯಕ್ಷಣಿಯವರೇ, ನಾನು ಸಭೆಯ ಮುಂದಿರುವ ಪ್ರಭುಸುಧಾರಣೆಯ ಮಸೂದೆಯ ಜಾಯಂಟ್ ಸೆಲೆಕ್ಟ್ ಕಮಿಟಿಯ ವರದಿಯನ್ನು ನಾನು ಮೊಟ್ಟಮೊದಲನೆಯದಾಗಿ ಸ್ವಾಗತಿಸುತ್ತೇನೆ. ನಾನು ಪ್ಲಾಂಟೇಷನ್ ವಿಚಾರದಲ್ಲಿ ಈ ಬಿಲ್ಲಿನಲ್ಲಿ ಅಡಕವಾಗಿರುವ ಕೆಲವಾರು ಅಂಶಗಳನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ಈ ಪ್ಲಾಂಟೇಷನ್ ಎಂಬುದು ಪರದೇಶಗಳಿಂದ ಡಾಲರನ್ನು ಸಂಪಾದನೆ ಮಾಡತಕ್ಕ ಉದ್ಯಮವಾಗಿದೆ. ಈ ಉದ್ಯಮದ ದೆಸೆಯಿಂದ ಲಕ್ಷಾಂತರ ಜನರು ಕೂಲಿಗಾರರು ತಮ್ಮ ಜೀವನವನ್ನು ಅವಲಂಬಿಸಿದ್ದಾರೆ. ಕೂಲಿಗಾರರ ಅಭಿವೃದ್ಧಿಗಾಗಿ ಅನೇಕ ಸೌಲಭ್ಯಗಳನ್ನು ಮಾಡಿದ್ದಾರೆ. ಕಾಫಿ ಪ್ಲಾಂಟೇಷನ್ಸ್ ಉದ್ಯಮಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೂ ಸಹ ಹೆಚ್ಚಿನ ಮುತುವರ್ಜಿ ವಹಿಸುತ್ತಿದ್ದಾರೆ. ಅದಕ್ಕಾಗಿ ಏನೇನು ಸೌಲಭ್ಯಗಳನ್ನು ಒದಗಿಸಬೇಕೆಂಬ ಬಗ್ಗೆ ನಾನು ಕೆಲವಾರು ವಿವರಣೆಗಳನ್ನು ಕೊಡಲು ಬಯಸುತ್ತೇನೆ. ಆ ವಿವರಣೆಗಳು ಅಂಕಿಅಂಶಗಳಿಂದ ಕೂಡಿವೆ. ಅವು ಯಾವ್ಯಾಪ ಅಂದರೆ, ದೇಶದಲ್ಲಿ ಇಡೀ ಕೈಗಾರಿಕೆಯು ಏಸ್ಟ್ರೀರ್ಣ—1 ಲಕ್ಷ 36 ಸಾವಿರದ 400 ಹೆಕ್ಟೇರುಗಳು, ಮೈಸೂರು ದೇಶದಲ್ಲಿ ಕೈಗಾರಿಕೆಯ ಏಸ್ಟ್ರೀರ್ಣ—82 ಸಾವಿರದ 400 ಹೆಕ್ಟೇರುಗಳು, ಮೈಸೂರಿನಲ್ಲಿ ದೇಶದ ಒಟ್ಟು ಕಾಫಿ ಉತ್ಪತ್ತಿಯ ಶೇಕಡ 70 ರಷ್ಟು ಉತ್ಪಾದಿಸಲಾಗುತ್ತಿದೆ. 1972-73ನೇ ಸಾಲಿನಲ್ಲಿ ಕಾಫಿ ರಫ್ತಿನಿಂದ ವಿದೇಶೀ ವಿನಿಮಯ-31.5 ಕೋಟಿ ರೂಪಾಯಿಗಳು. ಮೈಸೂರಿನಲ್ಲಿ ಪ್ಲಾಂಟೇಷನ್ ಉದ್ದಿಮೆಯು ಇಡೀ ಬೇಸಾಯ ವರಮಾನ ತೆರಿಗೆಯ ಶೇಕಡ 80ಕ್ಕೂ ಹೆಚ್ಚಿಗೆ ಕೂಡ ತ್ತದೆ. ಮೈಸೂರಿನಲ್ಲಿ ಬೆಳೆದ ಕಾಫಿಯು ಕೊಡುತ್ತಿರುವ ಎಕ್ಸೈಜು ತೆರಿಗೆಯ ಮೊಬಲಗು—ಸುಮಾರು 7 ಕೋಟಿ ರೂಪಾಯಿಗಳು. ವಾರಾಟ ತೆರಿಗೆ ಮೊಬಲಗು—ಸುಮಾರು 3 ಕೋಟಿ ರೂಪಾಯಿಗಳು. ಕಾಫಿ ಪ್ಲಾಂಟೇಷನ್ ಉದ್ದಿಮೆಯಲ್ಲಿನಿರತರಾಗಿರುವ ಕಾರ್ಮಿಕರ ಸಂಖ್ಯೆ—105 ಲಕ್ಷ. ಕಾರ್ಮಿಕರಿಗೆ ಈಗ ಇರುವ ಸೌಲಭ್ಯಗಳು—ಊಟ, ವಸತಿ ಮತ್ತು ವೈದ್ಯಕೀಯ ಸೌಲಭ್ಯ, ಪೆನ್‌ಷನ್ ಮತ್ತು ಪ್ರಾವಿಡೆಂಟ್ ಫಂಡ್, ಗ್ರಾಚುಟಿ, ಬೋನಸ್, ರಜಾ ಸಂಬಳ, ಹೆರಿಗೆ ಭತ್ಯ, ಕಾಯಿಲೆ ಭತ್ಯ, ಇತ್ಯಾದಿ. ಮೈಸೂರಿನಲ್ಲಿ ಪ್ಲಾಂಟೇಷನ್ ಉದ್ದಿಮೆಯ ವಿಸ್ತೀರ್ಣ—ಇಡೀ ಬೇಸಾಯದಲ್ಲಿರುವ ಜಮೀನಿನ ವಿಸ್ತೀರ್ಣದ ಶೇಕಡ 0.96 ರಷ್ಟು. ಎಕರೆವಾರು ಇಳುವರಿಯಲ್ಲಿ ಪ್ರಪಂಚದ ಇತರೇ ಬೆಳೆಯುವ ದೇಶಗಳಿಗೆ ಹೋಲಿಸಿದರೆ, ಭಾರತದ ಸ್ಥಾನ ನಾಲ್ಕನೆಯದು.

ಇನ್ನು ಮಲೆನಾಡಿನ ಬಗ್ಗೆ ಕೆಲವು ಮಾಹಿತಿಗಳನ್ನು ಕೊಡುತ್ತೇನೆ. ಮಲೆನಾಡು ಜಿಲ್ಲೆಗಳಾದ ಕೊಡಗು, ಚಿಕ್ಕಮಗಳೂರು ಮತ್ತು ಹಾಸನ ಇವುಗಳ ಉತ್ಕರ್ಷಕ್ಕೆ ಪ್ಲಾಂಟೇಷನ್ ಉದ್ದಿಮೆಯೇ ಮೂಲ ಕಾರಣ. ಈ ಮೂರು ಜಿಲ್ಲೆಗಳ ಆರ್ಥಿಕ ಪರಿಸ್ಥಿತಿ ಪ್ಲಾಂಟೇಷನ್ ಉದ್ದಿಮೆಯ ಪರಿಸ್ಥಿತಿಯನ್ನು ಅವಲಂಬಿಸಿದೆ. ಪ್ಲಾಂಟೇಷನ್ ಉದ್ದಿಮೆಯು ಮಲೆನಾಡಿನ ಮೂಲೆಮೂಲೆಯನ್ನೂ ವಾಸಯೋಗ್ಯವನ್ನಾಗಿ ಮಾಡಿದೆ. ಈ ಮೂರು ಮಲೆನಾಡು ಜಿಲ್ಲೆಗಳಲ್ಲಿ ಪ್ಲಾಂಟೇಷನ್ ಉದ್ದಿಮೆ

ಯನ್ನಷ್ಟಿಟ್ಟರೆ ಬೇರೆ ಯಾವ ಕೈಗಾರಿಕೆಗಳೂ ಇಲ್ಲ. ಈಗ ಮಲೆನಾಡಿನಲ್ಲಿರತಕ್ಕ ಪ್ಲಾಂಟೇಷನ್ ಗಳು—ಕಾಫಿ, ಟೀ, ಕಾರ್ಡಮಮ್—ಇವು ಅಲ್ಲಿ ಹೆಚ್ಚಿಗೆ ಬೆಳೆಯತಕ್ಕ ಬೆಳೆಗಳು. ಈ ಬೆಳೆಗಳ ಅಭಿವೃದ್ಧಿ, ಹಾಸನದ ಸ್ವಲ್ಪ ಭಾಗದಲ್ಲಿ, ಹಾಗೂ ಚಿಕ್ಕಮಗಳೂರಿನ ಮತ್ತು ಕೊಡಗು ಜಿಲ್ಲೆಯ ಪೂರ್ತಾ ಭಾಗದಲ್ಲಿ ಅಷ್ಟೇ. ಹೀಗಿರುವಾಗ ಬೇರೆ ಜಿಲ್ಲೆಗಳಿಗೆ ಇದು ವಿಸ್ತರಿಸುವುದಿಲ್ಲ. ಆದರೆ ಈ ಉದ್ದಿಮೆಯ ಪರಿಚಯ ಕೆಲವರಿಗೆ ಗೊತ್ತಿರಬಹುದು, ಮತ್ತೆ ಕೆಲವರಿಗೆ ಗೊತ್ತಿಲ್ಲದೆಯೂ ಇರಬಹುದು. ಆ ವಿಚಾರಕ್ಕೆ ನಾನು ಹೋಗುವುದಿಲ್ಲ.

3-00 P.M.

ಆದರೆ ಬೇರೆ ಬೇಸಾಯದ ಮಾದರಿಯಲ್ಲಿ ಪ್ಲಾಂಟೇಷನ್ ಬೇಸಾಯವಲ್ಲ. ಪ್ಲಾಂಟೇಷನ್ ಉದ್ಯಮವು ಕೈಗಾರಿಕೋಪಾದಿಯಲ್ಲಿ ಸಂಘಟಿತ ಆಗಿದೆ. ಪ್ರತಿಯೊಂದು ಪ್ಲಾಂಟೇಷನ್ ಘಟಕವೂ ಸಮಗ್ರವಾಗಿ ಸಂಘಟಿಸಲ್ಪಟ್ಟು ಆ ಘಟಕಕ್ಕೆ ಅವಶ್ಯಕವಿರುವಂತಹ ಕೆಲಸಗಾರರ ವಾಸದ ಮನೆಗಳು, ಆಸ್ಪತ್ರೆ ವಗೈರೆಗಳು, ಅದು ಉತ್ಪಾದಿಸುವಂತಹ ಪ್ಲಾಂಟೇಷನ್ ಪದಾರ್ಥ ಗಳ ಪರಿಷ್ಕರಣಕ್ಕಾಗಿ ಬೇಕಾದಂತಹ ಫ್ಯಾಕ್ಟರಿ, ಹದವಾಡುವ ಹಾಗ, ಜಲಮೂಲ ಇತ್ಯಾದಿ ಗಳನ್ನು ಅಳವಡಿಸಿಕೊಂಡಿದೆ. ಜಂಟೀ ಸೆಲೆಕ್ಟ್ ಕಮಿಟಿಯವರು ಶಿಫಾರ್ಸುಗಳನ್ನು ಪರಿಶೀಲಿಸು ವಾಗ ಈ ವೈಲ್ಯಾಣಿಸಿದ ವಿಶೇಷತೆಯನ್ನು ಸಹಾ ಗಮನದಲ್ಲಿಟ್ಟುಕೊಂಡಿಲ್ಲವೆಂದು ತಿಳಿಯುತ್ತೆ. ಆದರೆ ಈ ಬೆಳೆ ಮಳೆ ಬಂದರೆ ಉಂಟು; ಇಲ್ಲದಿದ್ದರೆ ಇಲ್ಲ. ಅಲ್ಲದೆ ಇದಕ್ಕೆ ಮಳೆ ಇಂಥಾ ತಿಂಗಳಲ್ಲೆ ಬರಬೇಕು, ಇಷ್ಟೇ ಮಳೆ ಬರಬೇಕು ಎಂಬ ನೇಮವಿದೆ. ಆದರೆ ಏಲಕ್ಕಿ ಬೆಳೆಗೆ ಅದರ ಬೇಸಾಯವೇ ಬೇರೆ. ಅದಕ್ಕೆ ಮಳೆ ವಿಶೇಷವಾಗಿಬೇಕು. ಈ ವಿಚಾರದಲ್ಲಿ ಅನೇಕ ತಜ್ಞರು ಅನೇಕ ಪ್ರಬಂಧಗಳನ್ನು ಬರೆದು ಅಂಕಿಅಂಶಗಳನ್ನು ಒದಗಿಸಿದ್ದಾರೆ. ಈ ಕಾಫಿ ಬೆಳೆ ಸಮಾಜದ ಆರ್ಥಿಕಾಭಿವೃದ್ಧಿಯನ್ನಷ್ಟೆ ಅಲ್ಲದೆ ದೇಶಾಭಿವೃದ್ಧಿಯನ್ನೂ ಮಾಡತಕ್ಕಂಥ ಒಂದು ಬೆಳೆ. ಇದನ್ನು ನಾವು ತರೆಕೆಳಗು ಮಾಡುವುದಕ್ಕೆ ಪ್ರಯತ್ನ ಮಾಡಬಾರದು. ನಾನು ಮುಖ್ಯವಾಗಿ ಈ ಪ್ಲಾಂಟೇ ಷನ್ಗಳಲ್ಲಿ ಕೆಲಸದಲ್ಲಿರತಕ್ಕ ಸಕಸಾರು ಕಾರ್ಮಿಕರನ್ನು ಗಮನದಲ್ಲಿಟ್ಟುಕೊಂಡು, ನಾನೊಬ್ಬ ಕಾರ್ಮಿಕ ಮುಖಂಡನಾಗಿ ಇದನ್ನು ಹೇಳುತ್ತಿದ್ದೇನೆ. ಈ ದಿವಸ ಈ ಬೆಳೆ ಹಾಳಾದರೆ ಆ ಸಹಸ್ರಾರು ಕಾರ್ಮಿಕರ ಗತಿ ಏನಾಗಬೇಕು? ಅದಕ್ಕಾಗಿ ನಾನೀಗ ಇದರ ಬಗ್ಗೆ ಹೆಚ್ಚಿನ ಪ್ರಸ್ತಾಪಮಾಡಬೇಕಾಗಿದೆ. ಸರ್ಕಾರದವರು ಈ ಕಾಫೀ ಬೆಳೆಗಾರರ ಸ್ಥಿತಿಗತಿಗಳೇನೆಂಬುದನ್ನು ಚೆನ್ನಾಗಿ ಅರಿತುಕೊಳ್ಳಬೇಕು. ಅವರಿಗೆ ಒಂದು ಎಕರೆಗೆ ಎಷ್ಟು ಖರ್ಚುಬರುತ್ತದೆ, ಒಂದು ಎಕರೆಯಲ್ಲಿ ಎಷ್ಟು ಉತ್ಪತ್ತಿ ಬರುತ್ತದೆ ಎಂಬುದನ್ನು ಲೆಕ್ಕ ಹಾಕಿದರೆ ಅದರಲ್ಲಿ ಬರತಕ್ಕ ಉತ್ಪತ್ತಿಗೂ ಖರ್ಚಿಗೂ ಸ್ವಲ್ಪ ಹೆಚ್ಚುಕಡಿಮೆ ಸರಿಹೋಗಬಹುದು, ಅಷ್ಟೇ: ಆ ಪ್ಲಾಂಟರುಗಳೂ ಕೂಡ ಬಹಳ ಸಾಲವಂದಿರಗರಾಗಿದ್ದಾರೆ. ಅವರು ಬ್ಯಾಂಕ್ ಮತ್ತು ಸೊಸೈಟಿಗಳಲ್ಲಿ ಅವರ ಲೆಕ್ಕಗಳನ್ನು ನೋಡಿಸಿದರೆ ಅವರ ನಿಜಪರಿಸ್ಥಿತಿ ಗೊತ್ತಾಗುತ್ತದೆ.

ಈಗ ಸೆಲೆಕ್ಟ್ ಕಮಿಟಿಯವರು ಸೂಚಿಸಿರುವ ಸೆಕ್ಷನ್ಗಳಾವ 63 (8); 67 (1) (ಸಿ); 77 (3); 79 (ಬಿ); 104 ಮತ್ತು 110 ಇವು ಪ್ಲಾಂಟೇಷನ್ಗಳನ್ನು ಮುಖ್ಯವಾಗಿ ಬಾಧಿಸುತ್ತವೆ. ಇವುಗಳ ಪರಿಣಾಮವಾಗಿ ಉದ್ಯಮದ ಪರಿಸ್ಥಿತಿ ತಲೆಕೆಳಗಾಗುವಂತಾಗಿದೆ. ಆರ್ಟಿಕರ್: 104 :—ಸೆಲೆಕ್ಟ್ ಸಮಿತಿಯವರು ರೂಪಿಸಿರುವ ಸೆಕ್ಷನ್ 104 ಈಗ ಜಾರಿಯಲ್ಲಿ ಇರುವಂಥ ಭೂಸುಧಾರಣಾ ಕಾನೂನು (1961) ರಲ್ಲೂ ಮತ್ತು 1972 ರಲ್ಲಿ ಸರ್ಕಾರ ವಿಧಾನ ಸಭೆಯಲ್ಲಿ ಮಂಡಿಸಿದ ತಿದ್ದುಪಡಿ ಮಸೂದೆಯಲ್ಲೂ ನಮೂದಿಸಿರುವ ಇದೇ ಸೆಕ್ಷನ್ನಿಗಿಂತ ಬಹಳ ವಿಭಿನ್ನವಾಗಿರುತ್ತದೆ. 1961ರ ಕಾನೂನು ಮತ್ತು ತಿದ್ದುಪಡಿ ಮಸೂದೆಯಲ್ಲಿ ಪ್ಲಾಂಟೇಷನ್—ಎಂದರೆ ಏನು ಎಂಬ ಅರ್ಥ ವಿವರಣೆ ಒಂದೇ ಆಗಿರುತ್ತದೆ. ಆದರೆ ಸೆಲೆಕ್ಟ್ ಕಮಿಟಿ 104 ನೇ ಸೆಕ್ಷನ್ನಿನಲ್ಲಿ ಪ್ಲಾಂಟೇಷನ್ ಬಗ್ಗೆ ಕೊಟ್ಟಿರುವ ಅರ್ಥ ವಿವರಣೆ ವಾಸ್ತವಕ್ಕಿಂತ ದೂರವಾಗಿದೆ. ಅಲ್ಲದೆ ಭವಿಷ್ಯದಲ್ಲಿ ಪ್ಲಾಂಟೇಷನ್ ಪಡೆದುಕೊಳ್ಳಲು ಒಂದು ಮಿತಿಯನ್ನು ವಿಧಿಸಲಾಗಿದೆ. 1961ನೇ ಭೂಸುಧಾರಣಾ ಶಾಸನ ಮತ್ತು 1972ರ ತಿದ್ದುಪಡಿ ಮಸೂದೆಯಲ್ಲಿ ಪ್ಲಾಂಟೇಷನ್ನಿನ ಅರ್ಥ ವಿವರಣೆ ವಾಸ್ತವಕ್ಕೆಗೆ ಅನುಗುಣವಾಗಿದ್ದು ಅವು ದಕ್ಷಿಣಿಯಿಂದ ಮುಂದುಪರಿಯಲು ಮತ್ತು ಉದ್ಯಮವು ಮತ್ತಷ್ಟು ಪ್ರಗತಿ ಸಾಧಿಸಲು ಸಹಾಯಕವಾಗಿರುತ್ತದೆ. ಅಷ್ಟೇ ಅಲ್ಲದೆ ಈ ಅರ್ಥ ವಿವರಣೆಗೂ ಮತ್ತು ಬೇರೆ ರಾಜ್ಯಗಳ ಅರ್ಥವಿವರಣೆಗೂ ಸಾಮರಸ್ಯವಿರುತ್ತದೆ.

ಆದರೆ ಸೆಲೆಕ್ಟ್ ಕಮಿಟಿಯವರು ಕೊಟ್ಟಿರುವ ಪ್ಲಾಂಟೇಷನ್ ಅರ್ಥ ವಿವರಣೆ ಒಂದು ವಿಪರ್ಯಾಸ ಆಗಿದ್ದು ಪ್ಲಾಂಟೇಷನ್ ಘಟಕಗಳು, ಒಂದು ಸಮಗ್ರ ಘಟಕಗಳಾಗಿ ಉಳಿಯುವುದೇ ಅಸಾಧ್ಯವಾಗಿದೆ. ಈ ವಿವರಣೆಯ ಪರಿಣಾಮವಾಗಿ ಪ್ಲಾಂಟೇಷನ್ ಘಟಕಗಳು ಅಗತ್ಯವಾದ

(ಶ್ರೀ ಜಿ. ಪುಟ್ಟಸ್ವಾಮಿ)

ಅಂಗಾಂಗಗಳನ್ನು ಕಳೆದುಕೊಂಡು ಸಿಥಿಲವಾಗುತ್ತದೆ. ಇದರಿಂದಾಗಿ ಪ್ಲಾಂಟೇಷನ್ ಉದ್ಯಮದ ದ ನಿರ್ವಹಣೆ ಅಸಾಧ್ಯವಾಗಿ ಅವುಗಳ ಅಸ್ತಿತ್ವಕ್ಕೆ ಧಕ್ಕೆಯುಂಟಾಗುತ್ತದೆ. ಸೆಲೆಕ್ಟ್ ಕಮಿಟಿಯು ವಿವರಣೆಯಿಂದಾಗಿ ಪ್ಲಾಂಟೇಷನ್ ಘಟಕಗಳು ತಮ್ಮ ಜೀವನಾಡಿಯಂತಿರುವ ಜಲಮೂಲಗಳು ಮತ್ತು ಇತರ ಮುಖ್ಯ ಸೌಲಭ್ಯಗಳನ್ನು ಕಳೆದುಕೊಳ್ಳಬೇಕಾದ ಪರಿಸ್ಥಿತಿ ಉಂಟಾಗಬಹುದು. ಅಷ್ಟೇ ಅಲ್ಲದೆ ಘಟಕದ ಮುಧ್ಯದಲ್ಲಯೇ ಅವರ ಹಿತದಲ್ಲಿ ಆನಕ್ತಿಯಿಲ್ಲದ ಮತ್ತು ಅದರ ಹಿತಕ್ಕೆ ವಿರೋಧವಾಗಿ ನಿಲುವನ್ನು ತೆಗೆದುಕೊಳ್ಳಬಹುದಾದಂಥ ಆಗಂತಕರು ಪ್ರತಿಪ್ಠಾಪನೆಯಾಗುವ ಪರಿಸ್ಥಿತಿಯು ಈ ವಿವರಣೆಯಿಂದ ಉಂಟಾಗಬಹುದು. ಕಾರ್ಖಾನೆಯೊಂದರ ಅವರಣದಲ್ಲಿ ಆಗಂತಕರಿಗೆ ಸ್ವಲ್ಪ ಸ್ವಲ್ಪ ನೆಲೆಗಳ ಮಾಲೀಕತ್ವ ಕೊಡಿಸಿ ಆ ಕಾರ್ಖಾನೆಯ ನಿರ್ವಹಣೆ ಅಸಾಧ್ಯ ಪಡಿಸಿದಂತಾಗುತ್ತದೆ.....

ಶ್ರೀ ಕೋಣಂದೂರು ಲಿಂಗಪ್ಪ.—ಈಗ ಆ ಕಾಫೀ ಪ್ಲಾಂಟರುಗಳು ಬರೆಸಿಕೊಟ್ಟಿರುವುದನ್ನು ಮಾನ್ಯ ಸದಸ್ಯರಾದ ಶ್ರೀ ಪುಟ್ಟಸ್ವಾಮಿಯವರು ಓದುತ್ತಿದ್ದಾರೆ, ಅದನ್ನು ಕೈ ಬಿಟ್ಟು ಅವರ ನ್ಯಂತ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರೆ, ಆಗ ಅವರ ಅಭಿಪ್ರಾಯಕ್ಕೂ ನಮ್ಮ ಅಭಿಪ್ರಾಯಕ್ಕೂ ಅಷ್ಟು ಹೆಚ್ಚಿನ ವ್ಯತ್ಯಾಸವಿರುವುದಿಲ್ಲ ಅನ್ನುವುದನ್ನು ಅವರು ಒಪ್ಪುವರಲ್ಲವೇ ?

ಶ್ರೀ ಜಿ. ಪುಟ್ಟಸ್ವಾಮಿ.—ಉಳುವವನಿಗೇ ಹೊಲದ ಒಡೆಯತನ ಇರಬೇಕೆಂಬುದನ್ನು ನಾನೂ ಒಪ್ಪುತ್ತೇನೆ. ಆದರೆ ಈ ಪ್ಲಾಂಟೇಷನ್‌ಗಳಿಗೆ ಯಾವ ನಿರ್ಬಂಧವೂ ಇರಬಾರದೆಂದು ನಾನು ಹೇಳುತ್ತೇನೆ.

ಪ್ಲಾಂಟೇಷನ್ ಉದ್ಯಮವು ತಮ್ಮ ದಿನ ನಿತ್ಯದ ನಿರ್ವಹಣೆಯನ್ನು ನಿರಾತಂಕವಾಗಿ ನಡೆಸಿ ಉದ್ಯಮದ ದಕ್ಷತೆಯನ್ನು ಕಾಪಾಡಿಕೊಂಡು ಬರುವ ನಲುವಾಗಿ 1961ನೇ ಭೂಸುಧಾರಣಾ ಕಾನೂನು ಮತ್ತು 1972ರ ತಿದ್ದುಪಡಿ ಮಸೂದೆಯಲ್ಲಿ ಪ್ಲಾಂಟೇಷನ್ ಎಂಬ ಪದಕ್ಕೆ ನೀಡಿರುವ ವಿವರಣೆಯನ್ನೇ ಇರಿಸಿಕೊಂಡು ಸೆಲೆಕ್ಟ್ ಕಮಿಟಿಯವರು ನೀಡಿರುವ ವಿವರಣೆಯನ್ನು ಕೈಬಿಡ ಬೇಕಾದುದು ಸೂಕ್ತ.

ಸೆಕ್ಷನ್-104 (2).—ಸೆಲೆಕ್ಟ್ ಸಮಿತಿಯವರ ಶಿಫಾರ್ಸಿನಂತೆ ಸೆಕ್ಷನ್ 104 (2)ರ ಪರಿಣಾಮವಾಗಿ ತಿದ್ದುಪಡಿ ಮಸೂದಾಕಾನೂನಾದ ನಂತರದಲ್ಲಿ ಯಾರೋ ಹೊಸದಾಗಿ ಒಂದು ಮೀಗಿಂತ ಜಾಸ್ತಿಯಾಗಿ ಅಂದರೆ 108 ಎಕರೆಗಳಿಗಿಂತ ಜಾಸ್ತಿ ಪ್ಲಾಂಟೇಷನ್ ಹಿಡುವಳಿಯನ್ನು ಪಡೆದುಕೊಳ್ಳಲು ಸಾಧ್ಯವಿರುವುದಿಲ್ಲ. ಇದರಿಂದಾಗಿ ಈಗ ಅಸ್ತಿತ್ವದಲ್ಲಿರುವ ದೊಡ್ಡ ಪ್ಲಾಂಟೇಷನ್ ಹಿಡುವಳಿಗಳಿಗೆ ಬಹಳ ಆತಂಕವಾಗುತ್ತದೆ. ಈ ಘಟಕಗಳ ಪಹಿವಾಟುಗಳಿಗೆ ಅಂದರೆ ಮಾರಾಟ, ಸಾಲತೆಗೆದುಕೊಳ್ಳುವಿಕೆ, ಇತ್ಯಾದಿಗಳಿಗೆ ಬಹಳ ಅಡಚಣೆಯಾಗುತ್ತದೆ. ಅಷ್ಟೇ ಅಲ್ಲದೆ ಈ ಸೆಕ್ಷನ್ 104 (2) ಪ್ಲಾಂಟೇಷನ್ ಉದ್ಯಮಕ್ಕೆ ಹಿಡುವಳಿ ಪರಿಮಿತಿಯಿಂದ ವಿನಾಯಿತಿ ಕೊಟ್ಟಿರುವುದರ ಧೋರಣೆಗೆ ವ್ಯತಿರಿಕ್ತವಾಗಿರುತ್ತದೆ.

ಸೆಕ್ಷನ್ 110.—1972ರ ಭೂಸುಧಾರಣಾ ತಿದ್ದುಪಡಿ ಮಸೂದೆ ಮತ್ತು ಸೆಲೆಕ್ಟ್ ಸಮಿತಿ ಶಿಫಾರ್ಸು ಇವೆರಡರ ಪ್ರಕಾರ ಸೆಕ್ಷನ್ 110 ರಿಂದಾಗಿ ಸರ್ಕಾರವು ಯಾವ ಮುನ್ನೆಚ್ಚರಿಕೆಯೂ ಇಲ್ಲದೆ ಒಂದು ಪ್ರಕಟಣೆಯನ್ನು ಹೊರಡಿಸುವುದರ ಮೂಲಕ ಪ್ಲಾಂಟೇಷನ್ ಉದ್ಯಮಕ್ಕೆ ಹಿಡುವಳಿ ಮಿತಿಯಿಂದ ವಿನಾಯಿತಿ ಕೊಟ್ಟಿರುವುದನ್ನು ರದ್ದು ಗೊಳಿಸಲು ಸಾಧ್ಯವಿದೆ. 1961ರ ಭೂ ಮಸೂದೆ ಶಾಸನದ ಪ್ರಕಾರ ಈ ವಿನಾಯಿತಿಯನ್ನು ರದ್ದು ಮಾಡಬೇಕಾಗಿದ್ದರೆ ಶಾಸನಕ್ಕೆ ವಿಧಾನ ಸಭೆಯು ಮೂಲಕ ಒಂದು ತಿದ್ದುಪಡಿ ತರಬೇಕಾಗಿತ್ತು. ಆದ್ದರಿಂದ ಈ ಹೊಸ ತಿದ್ದುಪಡಿಯಿಂದ ಭೂಮಿತಿ ವಿನಾಯಿತಿಯ ಮೂಲಭೂತ ರೂಪವೇ ಬದಲಾವಣೆಯಾಗುವಂತಾಗುತ್ತದೆ, ಹಾಗೂ ಪ್ಲಾಂಟೇಷನ್ ಉದ್ಯಮದ ಭವಿಷ್ಯ ಅನಿಶ್ಚಿತತೆಯ ತೂಗುಯ್ಯಾಲೆಯಲ್ಲಿ ಬೀಳುತ್ತದೆ. ಈ ಅನಿಶ್ಚಿತತೆಯ ಪರಿಣಾಮದಿಂದಾಗಿ ಮತ್ತು ಯಾವ ಘಳಿಗೆಯಲ್ಲಿ ಈ ವಿನಾಯಿತಿ ರದ್ದಾಗುವುದೋ ಎಂಬ ಭೀತಿಯಿಂದಾಗಿ ಉದಿ ಮೆದ್ದಾರರು ಈ ಉದ್ಯಮದಲ್ಲಿ ಬಂಡವಾಳ ಹೂಡಿ ಅಭಿವೃದ್ಧಿ ಪಡಿಸುತ್ತಾರೆಂಬುದು ಕನಸಿನ ಮಾತಾಗುತ್ತದೆ. ಪ್ಲಾಂಟೇಷನ್ ಉದ್ಯಮದ ಹಿತದೃಷ್ಟಿಯಿಂದ ಮತ್ತು ಅದು ಅವನತಿಯ ದಾರಿಯನ್ನು ಹಿಡಿಯದಂತೆ ರಕ್ಷಿಸಲು ಈ ಅನಿಶ್ಚಿತತೆಯನ್ನು ತಪ್ಪಿಸಿ ಸರಕಾರವು ಸೆಕ್ಷನ್ 110ರ ಮೂಲಕ ಕೇವಲ ಒಂದು ಪ್ರಕಟಣೆಯಿಂದ ಪ್ಲಾಂಟೇಷನ್ ಭೂಮಿತಿ ವಿನಾಯಿತಿ ರದ್ದು ಮಾಡುವುದನ್ನು ತೆಗೆದು ಪರಿಸ್ಥಿತಿಯನ್ನು 1961ರ ಭೂ ಸುಧಾರಣಾ ಕಾನೂನಿನಲ್ಲಿದ್ದಂತೆಯೇ ಇಡಬೇಕಾಗಿದೆ.

ಸೆಕ್ಷನ್ 63(8).—ಸೆಲೆಕ್ಟ್ ಕಮಿಟಿಯು ಸೂಚಿಸುವ ಈ ಸೆಕ್ಷನ್ನಿನಿಂದಾಗಿ ಯಾರಾದರೂ 10 ಯೂನಿಟ್ ಅಂದರೆ 54 ಎಕರೆ ಪ್ಲಾಂಟೇಷನ್ ಭೂಮಿ ಹೊಂದಿದ್ದರೆ ಅಂತಹವರು ಬೇರೆ ಯಾವ ಬೇಸಾಯದ ಜಮೀನನ್ನು ಇಟ್ಟುಕೊಳ್ಳಲು ಸಾಧ್ಯವಿಲ್ಲ. ಪ್ಲಾಂಟೇಷನ್ ಉದ್ಯಮಕ್ಕೆ, ಭೂಮಿತಿಯಿಂದ ವಿನಾಯಿತಿ ದೊರಕಿಸುವುದು ಅದೊಂದು ಕೈಗಾರಿಕಾ ಘಟಕ ಎಂದು. ಹಾಗೆ ಸಂಘಟಿತ ವಾಗಿರುವುದರಿಂದ ಮತ್ತು ದೇಶದ ಹಿತದ ದೃಷ್ಟಿಯಿಂದ ಅದರಮೇಲೆ ಭೂಮಿತಿ ಹೇರುವುದು ಸರಿಯಲ್ಲವೆಂಬುದನ್ನು ಮನಗಾಣಬೇಕಾಗಿದೆ. ಈ ವಿನಾಯಿತಿ ಕೊಟ್ಟಿರುವುದು ಯಾರೊಬ್ಬರ ಸ್ವಾಮ್ಯದಿಂದಿರುವ ದೃಷ್ಟಿಯಿಂದಲ್ಲ. ಆದ್ದರಿಂದ ಪ್ಲಾಂಟೇಷನ್ ಉದ್ದಿಮೆದಾರರು ಬೇರಾವ ಜಮೀನನ್ನೂ ಇಟ್ಟುಕೊಳ್ಳಕೂಡದೆಂಬ ನಿಲುಮೆ ಸರಿಯಲ್ಲ. ಸೆಕ್ಷನ್‌ಗಳಾದ 63(8) ಮತ್ತು 67 ಇವುಗಳಿಂದಾಗಿ ಒಂದೆಡೆ ಪ್ಲಾಂಟೇಷನ್ ಉದ್ಯಮಕ್ಕೆ ಭೂಮಿತಿಯಿಂದ ವಿನಾಯಿತಿ ಕೊಟ್ಟಿರುವುದನ್ನು ಇನ್ನೊಂದು ಕಡೆ ಕಸಿದುಕೊಂಡಂತಾಗಿದೆ. 1961ರ ಭೂಸುಧಾರಣಾ ಕಾನೂನು ಮತ್ತು 1972ರ ತಿದ್ದುಪಡಿ ಮಸೂದೆ ಎರಡರಲ್ಲೂ ಪ್ಲಾಂಟೇಷನ್ ಉದ್ದಿಮೆದಾರನಿಗೆ ಭೂ ಹಿಡುವಳಿ ಮಿತಿಯೊಳಗೆ ಬೇರೆ ಜಮೀನನ್ನು ಇಟ್ಟುಕೊಳ್ಳಲು ಅವಕಾಶವುಂಟು. ಪ್ಲಾಂಟೇಷನ್ನುಗಳು ಮನೆನಾಡಿನ ಮೂಲೆಗಳಲ್ಲಿ ಕಾಡುಮೇಡುಗಳಲ್ಲಿ ಸ್ಥಾಪಿತವಾಗಿದ್ದು ಊರು ಮತ್ತು ಪೇಟೆಗಳಿಂದ ದೂರದಲ್ಲವೆ. ಆದ್ದರಿಂದ ಉದ್ದಿಮೆದಾರರು ಪ್ಲಾಂಟೇಷನ್ನಿನಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ನ್ಯಾಯ ದರದಲ್ಲಿ ಭತ್ತ ಅಥವ ಅಕ್ಕಿಯನ್ನು ಸರಬರಾಜು ಮಾಡಬೇಕಾಗಿ ಬರುತ್ತದೆ. ಇದನ್ನು ನಿರ್ವಹಿಸಲು ಅವರಲ್ಲಿರುವ ಬೇರೆ ತರಿ ಜಮೀನು ಬಹಳ ಉಪಯುಕ್ತವಾಗುತ್ತದೆ. ಇಂತಹ ಜಮೀನುಗಳನ್ನು ಪ್ಲಾಂಟೇಷನ್ ಉದ್ದಿಮೆದಾರರು ಕಳೆದುಕೊಳ್ಳುವುದರಿಂದ ಪ್ಲಾಂಟೇಷನ್ ಕಾರ್ಮಿಕರು ತೊಂದರೆಪಡಬೇಕಾಗುತ್ತದೆ. ಭೂಮಿತಿ ಶಾಸನದ ಪರಿಮಿತಿಯಲ್ಲಿ ಪ್ಲಾಂಟೇಷನ್ ಉದ್ದಿಮೆದಾರರು ಬೇರೆ ಜಮೀನನ್ನು ಇರಿಸಿಕೊಳ್ಳಲು ಅವಕಾಶ ಕೊಡುವುದು ಸೂಕ್ತ. ಆದ್ದರಿಂದ ಸೆಕ್ಷನ್ 63(8)ನ್ನು ಬಿಡಬೇಕಾಗುತ್ತದೆ.

ಸೆಕ್ಷನ್ 79-ಬಿ.—ಸೆಲೆಕ್ಟ್ ಸಮಿತಿಯು ಇದೊಂದು ಹೊಸದನ್ನು ಸೂಚಿಸಿದೆ. ಇದರ ಪ್ರಕಾರ ಕಂಪನಿಗಳು ಮತ್ತು ಪಾರ್ಟ್‌ನರ್‌ಷಿಪ್ ಕೂಟಗಳು ಪ್ಲಾಂಟೇಷನ್ನುಗಳನ್ನೊಂದನ್ನು ಬಿಟ್ಟು ಬೇರಾವ ಜಮೀನನ್ನು ಇಟ್ಟುಕೊಳ್ಳುವ ಹಾಗಿಲ್ಲ. ಪ್ಲಾಂಟೇಷನ್ ಉದ್ದಿಮೆಯಲ್ಲಿ ಕಂಪನಿಗಳ ಮತ್ತು ಪಾರ್ಟ್‌ನರ್‌ಷಿಪ್ ಸಂಸ್ಥೆಗಳ ಪಾತ್ರ ವಿಶೇಷವಾದದ್ದು. ಕೆಲವೊಂದು ದೇಶೀ ಪ್ಲಾಂಟೇಷನ್ನುಗಳ ಜೊತೆಯಲ್ಲಂತೂ ಈ ಸಮಸ್ಯೆಗಳು ಬೇರೆ ಜಮೀನುಗಳನ್ನು ಸಹ ಹೊಂದಿವೆ. ಈ ಜಮೀನುಗಳಲ್ಲಿ ಆಧುನಿಕ ರೀತಿಯಲ್ಲಿ ಭತ್ತ ಮತ್ತು ಇತರ ಬೆಳೆಗಳನ್ನು ಬೇಸಾಯದಾರರಿಗೆ ಪ್ರಾದರಿಯಾಗುವ ರೀತಿಯಲ್ಲಿ ಉತ್ಕೃಷ್ಟವಾಗಿ ಬೆಳೆದಿದ್ದಾರೆ. ಈ ಜಮೀನುಗಳಲ್ಲಿ ಬೆಳೆ ತೆಗೆದು ಕಾರ್ಮಿಕರಿಗೆ ಅವಶ್ಯಕವಾದ ದವಸವನ್ನು ನ್ಯಾಯ ದರದಲ್ಲಿ ಒದಗಿಸಿದ್ದಾರೆ. ಪ್ಲಾಂಟೇಷನ್ ಬೇಸಾಯ ಮತ್ತು ಬೇರೆ ಬೇಸಾಯ ಒಂದಕ್ಕೊಂದು ಒತ್ತಾಸೆಯಾಗಿವೆ. ಅಷ್ಟೇ ಅಲ್ಲದೆ ಈ ಜಮೀನುಗಳು ಬೆಳೆ ತೆಗೆದಾದಮೇಲೆ ಪ್ಲಾಂಟೇಷನ್ ಬೆಳೆ ತೆಗೆಯುವುದಕ್ಕೆ ಉಪಯೋಗವಾಗತಕ್ಕಂತಹ ಕೆಲಸಗಳಿಗೆ ಉಪಯೋಗಿಸಲ್ಪಡುತ್ತವೆ. ಆದ್ದರಿಂದ ಪ್ಲಾಂಟೇಷನ್ನುಗಳನ್ನು ನಡೆಸುವಂತಹ ಕಂಪನಿ ಮತ್ತು ಪಾರ್ಟ್‌ನರ್‌ಷಿಪ್ ಸಂಸ್ಥೆಗಳನ್ನು ಸೆಕ್ಷನ್ 79(ಬಿ)ಯಿಂದ ಮುಕ್ತಗೊಳಿಸಬೇಕಾದ್ದು ಅವಶ್ಯಕ.

ಈ ಮೇಲ್ಕಾಣಿಸಿದ ಕಾರಣಗಳಿಗಾಗಿ ಮತ್ತು ಒಂದು ಸಮಂಜಸವಾದ ಆಧಾರದ ಮೇಲೆ ಪ್ಲಾಂಟೇಷನ್ ಉದ್ದಿಮೆಯನ್ನು ರಕ್ಷಿಸಿ ತನ್ಮೂಲಕ ದೇಶದ ಹಿತವನ್ನು ಸಾಧಿಸಲು,

(1) 1961ರ ಭೂಸುಧಾರಣಾ ಕಾನೂನು ಮತ್ತು 1972ರ ತಿದ್ದುಪಡಿಯಲ್ಲಿ ಇರುವಂತೆಯೆ "ಪ್ಲಾಂಟೇಷನ್" ಎಂಬ ಪದಕ್ಕೆ ವಿವರಣೆ ಕೊಡಬೇಕು.

(2) ಸೆಲೆಕ್ಟ್ ಕಮಿಟಿಯು ರೂಪಿಸಿರುವ ಸೆಕ್ಷನ್ 104(2) ಬಿಡಬೇಕು.

(3) ಸೆಕ್ಷನ್ 110ರ ಪರಿಮಿತಿಯಿಂದ ಪ್ಲಾಂಟೇಷನ್‌ಗಳನ್ನು ವಿಮೋಚನೆಗೊಳಿಸಬೇಕು.

(4) ಸೆಲೆಕ್ಟ್ ಸಮಿತಿಯವರು ಸೂಚಿಸಿರುವ ಸೆಕ್ಷನ್ 63(8) ಮಾರ್ಪಡಿಸಿ ಪ್ಲಾಂಟೇಷನ್ ಉದ್ದಿಮೆದಾರರು ಭೂ ಹಿಡುವಳಿ ಪರಿಮಿತಿಯೊಳಗೆ ಜಮೀನನ್ನು ಇಟ್ಟುಕೊಳ್ಳಲು ಅವಕಾಶ ಮಾಡಿಕೊಡಬೇಕು.

(5) ಪ್ಲಾಂಟೇಷನ್ ಉದ್ದಿಮೆಯನ್ನು ನಡೆಸಲು ಕಂಪನಿ ಮತ್ತು ಪಾರ್ಟ್‌ನರ್‌ಷಿಪ್ ಸಂಸ್ಥೆಗಳನ್ನು ಸೆಲೆಕ್ಟ್ ಕಮಿಟಿ ಸೂಚಿಸುವ ಸೆಕ್ಷನ್ 79(ಬಿ)ಯ ಪ್ರಭಾವದಿಂದ ಹೊರಗಿಡಬೇಕು.

ಹೀಗೆ ಮಾಡಿದರೆ ಈ ಉದ್ದಿಮೆ ಅಭಿವೃದ್ಧಿಯಾಗುವುದು. ಈ ಉದ್ದಿಮೆ ಕೈಗಾರಿಕೆಯೇ ಅಥವ ವ್ಯವಸಾಯವೇ ಎಂಬ ಬಗ್ಗೆ ಪ್ಲಾನಿಂಗ್ ಕಮಿಷನ್ ಕೂಡ ವಿಚಾರ ಮಾಡಿ ವಿನಾಯಿತಿ

(ಶ್ರೀ ಬಿ. ಪುಟ್ಟಸ್ವಾಮಿ)

ಕೊಟ್ಟಿದೆ. ಅವರು ಇದರ ಬಗ್ಗೆ ಆದೇಶ ಕೊಟ್ಟಿದ್ದಾರೆ. ಇಡೀ ಭಾರತವಲ್ಲಿರುವ ಈ ಉದ್ದಿಮೆಗೆ ಸಾಕಷ್ಟು ಪ್ರೋತ್ಸಾಹ ಕೊಡದಿದ್ದಾರೆ ಇದರಿಂದ ಬರುವ ವರಮಾನ ಕಡಮೆಯಾಗುವುದು; ಹೊರ ದೇಶದಿಂದ ಬರುವ ಡಾಲರ್ ವಿನಿಮಯ ಕಡಮೆಯಾಗಿ ಭಾರತದ ಆರ್ಥಿಕ ಪರಿಸ್ಥಿತಿಗೆ ಧಕ್ಕೆ ಬರುವುದು. ಇದನ್ನು ಗಮನಿಸಿ ಇದಕ್ಕೆ ವಿನಾಯಿತಿ ಕೊಟ್ಟಿದ್ದಾರೆ. ಹೀಗೆ ಪ್ಲಾನಿಂಗ್ ಕಮಿಷನ್ ಕೂಡ ವಿನಾಯಿತಿ ಕೊಟ್ಟಿರುವಾಗ ರಾಜ್ಯ ಸರಕಾರ ಯಾರದೋ ಒತ್ತಡದಿಂದ ವಿನಾಯಿತಿ ಕೊಡದಿರುವುದು ಸರಿಯಿಲ್ಲ. ರಾಷ್ಟ್ರದ ಹಿತದೃಷ್ಟಿಯಿಂದ, ಆರ್ಥಿಕ ದೃಷ್ಟಿಯಿಂದ, ಕೂಲಿಗಾರರ ಹಿತದೃಷ್ಟಿಯಿಂದ ಮತ್ತು ಸಂಪತ್ತಿನ ದೃಷ್ಟಿಯಿಂದ ಇದನ್ನು ನೋಡಬೇಕೇ ವಿನಾ ಬೇರೆ ಯಾವ ರೀತಿಯಿಂದಲೂ ವಿಮರ್ಶೆ ಮಾಡಬಾರದು. ಇದನ್ನು ವಿಮರ್ಶೆ ಮಾಡಬೇಕು, ಅಂಕಿಅಂಶ ತರಿಸಿ ನೋಡಬೇಕು. ನೋಡಿ ಸರಿಯಾದ ನಿರ್ಣಯ ಮಾಡಬೇಕು. ಹತ್ತು ಎಕರೆ ಕಾಫಿ ತೋಟ ಮಾಡಿದರೆ ಇದರ ಕಷ್ಟ ಗೊತ್ತಾಗುವುದು. ನನ್ನ ಕೈಯಿಂದ ಮಾಡುವುದಕ್ಕಾಗದೆ ಬಿಟ್ಟು ಬಿಟ್ಟೆ. ಬಂಡವಾಳ ಸಾಕಷ್ಟು ಹಾಕಿದರೆ ಹೆಚ್ಚು ವರಮಾನ ಬರುವುದು. ಇದರ ಕಡೆಗೆ ಯಾವಾಗಲೂ ನಿಗ ಕೊಡಬೇಕು, ಪ್ರತಿ ದಿವಸವೂ ನಿಗಾ ಕೊಡಬೇಕು. ಹೀಗಿರುವುದರಿಂದ ನನ್ನ ಸಲಹೆಗಳಿಗೆ ಗಮನ ಕೊಟ್ಟು ಸೂಕ್ತ ತೀರ್ಮಾನ ಕೈಕೊಳ್ಳಬೇಕೆಂದು ತಿಳಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣ ಮುಗಿಸುತ್ತೇನೆ.

† ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ಸನ್ಮಾನ್ಯ ಸಭಾಧ್ಯಕ್ಷಣಿಯರೇ, ಈ ಭೂಸುಧಾರಣಾ ಕಾನೂನೇನಿದೆ ಅದನ್ನು ನಾವು ನಮ್ಮ ಪಕ್ಷದ ಪರವಾಗಿ ಸ್ವಾಗತಿಸುವುದಾದರೂ ಇದರಲ್ಲಿರುವ ಅನೇಕ ಲೋಪದೋಷಗಳನ್ನು ತಮ್ಮ ಮುಂಜಾಕರ ಗಮನಕ್ಕೆ ತರುತ್ತೇನೆ. ಮಾನ್ಯ ಅಧ್ಯಕ್ಷರೇ, ಈ ದೇಶದಲ್ಲಿ, ಅದರಲ್ಲೂ ನಮ್ಮ ಭರತಖಂಡದಲ್ಲಿ ಅಮಿಯಿಂದಲೂ ಸ್ವಾತಂತ್ರ್ಯ ಬರುವ ವರೆಗೆ ಯಾವುದೇ ಸರಕಾರ ರಾಜ್ಯಭಾರ ವಹಿಸಿದರೂ ಕೂಡ ಅದು ಎರಡು ಆಧಾರದಮೇಲೆ ರಾಜ್ಯ ಭಾರ ನಡೆಸಿಕೊಂಡು ಬಂದಿದೆ; ಮೊದಲನೆಯದು ಅರಮನೆ, ಎರಡನೆಯದು ಗುರುಮನೆ. ಬಹುತೇಕ ಯಾವುದೇ ಕೋಮನ್ನು ತೆಗೆದುಕೊಂಡರೂ ಹಿಂದುಗಳು, ಮುಸ್ಲಿಮರು, ಕ್ರಿಶ್ಚಿಯನ್ನರು ಯಾರನ್ನು ನೋಡಿದರೂ ಕೂಡ ಗುರುವಿನ ಆಶೀರ್ವಾದದ ಆಧಾರದಮೇಲೆ ಹಿಂದೆ ರಾಜ್ಯ ಭಾರ ನಡೆಸಿದ್ದಾರೆ. ಈಗ ಕಾಂಗ್ರೆಸ್ ಸರ್ಕಾರ ಬಂದಮೇಲೆ, ಸ್ವಾತಂತ್ರ್ಯದ ತರುವಾಯ ದಲ್ಲಿ.....

ಶ್ರೀ ಕೆ. ಬಿ. ಶಿವಮ್ಮ.—ಗುರುವಿನ ಆಶೀರ್ವಾದ ಈಗಲೂ ಬೇಕು, ಬೇಡ ಎಂದು ಹೇಳುವುದಿಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ.—ಅರಮನೆಗಳನ್ನು ನುಂಗಿ, ಈಗ ಗುರುಮನೆಗಳನ್ನು ನುಂಗುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಅವರ ದೃಷ್ಟಿ ಹೇಗೆ ಇದೆಯೋ ಕಾಣೆ. ನನಗನಿಸುತ್ತದೆ, ಯಾವುದೇ ಸರ್ಕಾರ ಧರ್ಮದ ತಳಹದಿಯ ಮೇಲೆ ವ್ಯವಸಿದರೆ ಅದರಿಂದ ದೇಶಕ್ಕೆ, ಸರ್ಕಾರಕ್ಕೆ ಜನತೆಗೆ ಒಳ್ಳೆಯದಾಗದೆಂತು ಎಂದು ನನ್ನ ಭಾವನೆ. ಈಗ ಇವರು ಸಂಘಸಂಸ್ಥೆಗಳು ಏನು ಇವೆ ಅವುಗಳ ಜಮೀನನ್ನು ಕಿತ್ತುಕೊಂಡು ಕಾಂಪೆನ್ಸೇಷನ್ ಅನ್ನು ಕೊಡಲು ಹೊರಟಿದ್ದಾರೆ. ಒಂದು ದೇವಸ್ಥಾನಕ್ಕೆ, ಅದರ ವ್ಯವಹಾರ ನಡೆಸುವುದಕ್ಕೆ, ದೇವಸ್ಥಾನದ ಪೂಜೆಪುನಸ್ಕಾರಗಳನ್ನು ಅಥವಾ ಅರ್ಚಕರಿಗೆ ಏನು ಕೊಡಬೇಕಾಗಿತ್ತೋ ಅದನ್ನು ಕೊಡುವುದಕ್ಕೆ ವ್ಯವಸ್ಥೆಮಾಡುತ್ತಾ ಇದ್ದಾರೆ; ಇದಕ್ಕೆ ಸರ್ಕಾರ ಖರ್ಚುವೆಚ್ಚಗಳನ್ನು ಹೊತ್ತಿದೆ. ಇದರಿಂದ ಸರ್ಕಾರಕ್ಕೆ ಬಹಳ ಕೇಡು ಸಂಭವಿಸುತ್ತದೆ. ಒಳ್ಳೆಯದಾಗುವುದಿಲ್ಲ ಎಂದು ನನ್ನ ಭಾವನೆ. ಅನೇಕ ದೇವಸ್ಥಾನಗಳು, ಅನೇಕ ಸಂಘಸಂಸ್ಥೆಗಳು ಅವುಗಳ ವ್ಯವಹಾರವನ್ನು ನಡೆಸುವುದಕ್ಕೆ ಸಾಕಷ್ಟು ಜಮೀನುಗಳನ್ನು ಹೊಂದಿವೆ. ಉದಾಹರಣೆಗೆ ಹೇಳುವುದಾದರೆ, ತಿರುಪತಿ ದೇವಸ್ಥಾನಕ್ಕೆ ಬೇಕಾದಷ್ಟು ಜಮೀನು ಇದೆ. ಅನೇಕ ಸಾರ್ವಜನಿಕ ಸೇವಾಕ್ಷೇತ್ರಗಳನ್ನು, ವಿದ್ಯಾಭ್ಯಾಸದ ಪ್ರಗತಿ, ಜನ್ಮನಿರ್ವಹಣೆ ಮಾಡತಕ್ಕಂಥ ಅನೇಕ ಉತ್ತಮವಾದ ಕೆಲಸಗಳನ್ನು ಆ ಜಮೀನಿನ ಉತ್ಪನ್ನದಿಂದ ಮಾಡತಕ್ಕಂಥಾದ್ದು ಸರ್ವ ವಿಧಿತವಾದುದು. ಹೀಗೆ ಇರುವಾಗ, ಇಂಥ ವ್ಯವಸ್ಥೆಗಳನ್ನು ಸರ್ಕಾರ ಮಾಡುವುದಕ್ಕೆ ಹಣ ಕೊಡುತ್ತದೆ ಎನ್ನುವ ಭರವಸೆಯನ್ನು ಕೊಟ್ಟಿದೆ. ಈ ರೀತಿ ಜಮೀನನ್ನು ಎಲ್ಲಿ ವನ್ನೂ ಸರ್ಕಾರ ವಹಿಸಿಕೊಳ್ಳುವುದರಲ್ಲಿ ಯಶಶ್ವಿಯಾಗಲಾರದು. ಇದರಿಂದ ಸಾರ್ವಜನಿಕ ಹಿತ ದೃಷ್ಟಿಗೆ ಧಕ್ಕೆಯಾದೀತು ಎನ್ನುವ ಭೀತಿಯನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ಕೆಲವು ದೇವಸ್ಥಾನಗಳಿಗೆ ಜಮೀನು ಬೇಕಾದಷ್ಟು ಇದೆ ಗೇಣಿದಾರರು ಇದನ್ನು ತೆಗೆದುಕೊಳ್ಳುತ್ತಿದ್ದಾರೆ. ಇವಕ್ಕು ಅನೇಕ ಕಡೆಗಳಲ್ಲಿ ಉದುಗಡ್ಡಿ ಹಚ್ಚದ ದೇವಸ್ಥಾನಗಳು ಎಷ್ಟೋ ಇವೆ,

ಮಂಗಳಾರತಿ ಮಾಡದ ದೇವಸ್ಥಾನಗಳು ಎಷ್ಟೋ ಇವೆ. ಮಂತ್ರಿಗಳನ್ನು ತಮ್ಮ ಊರಿಗೆ ಕರೆದುಕೊಂಡು ಹೋಗಿ, ಅವರಿಗೆ ಹಾರ ಹಾಕಿ ಈ ದೇವಸ್ಥಾನ, ಪುರಾತನವಾದುದು ಚೋಳರ ಕಾಲದ್ದು, ಅಂಘಾದ್ದು ಇಂಘಾದ್ದು ಎಂದು ಹೇಳಿ ರಿಪೇರಿಗೋಸ್ಕರ 500—1000 ರೂಪಾಯಿ ಪಡೆಯತಕ್ಕ ದೇವಸ್ಥಾನಗಳವರೂ ಇದ್ದಾರೆ. ನಮ್ಮ ಭೂಸುಧಾರಣೆ ಕಾನೂನಿನಲ್ಲಿ ದೇವಸ್ಥಾನಗಳನ್ನು ಮೇಲಿನ ಮಾಡುವುದಕ್ಕೆ ಸಾಕಷ್ಟು ಹೇಳವನ್ನು ಕೊಡುತ್ತಿದ್ದಾರೆ. ಇದನ್ನು ಜನ ಪತ್ರಿಕೆಯಲ್ಲಿ ಓದಿದ ಮೇಲೆ ತಮ್ಮ ಮನೆಯಿಂದಲೇ ಒಣಗಿದ ಬಾಳೆಹಣ್ಣು, ಉದುಕಡ್ಡಿ ತೆಗೆದುಕೊಂಡು ಹೋಗಿ ದೇವಸ್ಥಾನದಲ್ಲಿ ಪೂಜೆಮಾಡುತ್ತಿದ್ದಾರೆ. ಕುಂಕುಮಾರ್ಚನೆ ಮಾಡಬೇಕು, ಆ ಸೇವೆ ಮಾಡಬೇಕು, ಈ ಅರ್ಚನೆಮಾಡಬೇಕು ಎಂದು ಹೇಳಿ ತಿಂಗಳಿಗೆ ಎರಡು ಸಾವಿರ ರೂಪಾಯಿ ಬೇಕು ಎಂದು ಕೇಳುತ್ತಾರೆ. ಅಲ್ಲಿನ ಅಧಿಕಾರಿಗಳನ್ನು ಒಳಗೆ ಹಾಕಿಕೊಂಡು, ಆ ಅಧಿಕಾರಿಯು ಮುಂಬಾಂತರ ಈರೀತಿ ಶಿಫಾರಸ್ ಮಾಡಿಸುತ್ತಾರೆ, ಇಂಥ ವ್ಯವಸ್ಥೆಯನ್ನು ನೀವು ಮಾಡಿ ಬೇಕಾದ ಅವಶ್ಯಕತೆ ಏನು ಇತ್ತು? ನಾನು ಹೇಳುತ್ತೇನೆ, ಹೇಗೆ ಸಾರ್ವಜನಿಕರಿಗೆ ರೈತಾಪಿ ಜನರಿಗೆ ನೀವು ಸೀಲಿಂಗ್ ಫಿಕ್ಸ್ ಮಾಡಿದ್ದೀರೋ, ಹಾಗೆ ಸಂಘಸಂಸ್ಥೆಗಳಿಗೆ ಸೀಲಿಂಗ್ ಅನ್ನು ಏತಕ್ಕೆ ಫಿಕ್ಸ್ ಮಾಡಬಾರದಾಗಿತ್ತು. ಮಾಡಿದರೆ ಒಳ್ಳೆಯದು. ಇದು ಮಾಡದೆ ದೇವಸ್ಥಾನಗಳ ಜಮೀನನ್ನು ವಹಿಸಿಕೊಂಡು ಅವುಗಳಿಗೆ ಖರ್ಚುವೆಚ್ಚವನ್ನು ಕೊಡುತ್ತೇವೆಂದು ಹೇಳಿದರಿ. ಇದರಲ್ಲಿ ನೀವು ವಿಫಲರಾಗಿದ್ದೀರಿ ಎಂದು ನಾನು ಹೇಳುತ್ತೇನೆ. ಇದಕ್ಕೆ ಇನ್ನೊಂದು ಉದಾಹರಣೆಯನ್ನು ಹೇಳಬೇಕು ಎಂದರೆ, ಶ್ಯಾನುಭೋಗರು ಇರಬೇಕು ಎಂದು ನಾನು ಹೇಳುವುದಿಲ್ಲ, ಅವರನ್ನು ತೆಗೆದು ಈಗ ವಿಲೇಜ್ ಅಕೌಂಟೆಂಟ್ಸ್ ಅನ್ನು ಹಾಕಿ ಗ್ರಾಮದ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ. ಇದಕ್ಕೆ ಕೈಹಾಕಿ ಎಷ್ಟು ಯಶಸ್ಸನ್ನು ಗಳಿಸಿದ್ದೇವೆಂದು ನೀವೇ ಆಲೋಚನೆಮಾಡಿ. ಈ ದಿವಸ ಯಾವ ಗ್ರಾಮಪಂಚಾಯತಿಯೂ ಸರಿಯಾಗಿ ಕೆಲಸಮಾಡುತ್ತಿಲ್ಲ. ಪಂಚಾಯತಿಯು ಹಣವನ್ನು ಸೆಕ್ರೆಟರಿಗಳು ಹೊಡೆದುಕೊಂಡು ತಿಂದು ಅವರು ಪತ್ತೆ ಇಲ್ಲ. ಅವರಿಗೆ ಸೆಕ್ಯುರಿಟಿ ಇಲ್ಲ. ಹಾಗೆ ದೇವಸ್ಥಾನಗಳ, ಸಂಘಸಂಸ್ಥೆಗಳ ಜಮೀನನ್ನು ವಹಿಸಿಕೊಂಡು ಅವನ್ನು ಮೇಲಿನ ಮಾಡುತ್ತೇವೆಂದು, ಹಣಕೊಡುತ್ತೇವೆಂದು ಹೇಳತಕ್ಕಂಥಾದ್ದರಲ್ಲಿಯೂ ಕೂಡ ಇದೇ ರೀತಿ ನಿಷ್ಪ್ರಯೋಜಕವಾಗಿದೆ. ಅದಕ್ಕಾಗಿ ನಾನು ನಿಮಗೆ ಒಂದು ಸಲಹೆಯನ್ನು ಮಾಡುತ್ತೇನೆ. ಯಾವ ಯಾವ ಸಂಸ್ಥೆ, ಯಾವ ಯಾವ ಸಾರ್ವಜನಿಕ ಸೇವೆ ಮಾಡುತ್ತಿವೆ; ಯಾವ ಯಾವ ದೇವಸ್ಥಾನದಲ್ಲಿ ಏನೇನು ವ್ಯವಹಾರ ನಡೆಯುತ್ತಿದೆ ಅವನ್ನು ಅರಿತು ಅದಕ್ಕೆ ಸೀಲಿಂಗ್ ಹಾಕಿದರೆ ಒಳ್ಳೆಯದಾದೀತು. ಸರ್ಕಾರದಲ್ಲಿ ವೃಥಾ ಕೂರಯನ್ನು ಹೊತ್ತು ಕೂಳ್ಳುವುದು ಬೇಡ. ಇದರಿಂದ ಮೋಸ ಲಂಚ, ದಗ ಹೆಚ್ಚಾಗುತ್ತದೆ; ಎಂದು ಈ ಸಮಯದಲ್ಲಿ ನಾನು ಹೇಳುತ್ತೇನೆ.

ಅಧ್ಯಕ್ಷರೇ, ಭೂಸುಧಾರಣೆ ಎಂದರೆ, ಭೂಮಿ ಎಂದರೆ ಹೊಟ್ಟೆ, ಧಾರಣೆ ಎಂದರೆ ತುಂಬಿಕೊಳ್ಳುವುದು. ಇದು ಹೊಟ್ಟೆ ತುಂಬಿಕೊಳ್ಳುವ ವ್ಯವಹಾರ. ಯಾರು ಯಾರಿಗೆ ಹೊಟ್ಟೆ ತುಂಬಿಸಬೇಕು, ಯಾರು ಯಾರಿಗೆ ಹೊಟ್ಟೆ ತುಂಬಿಸಬಾರದು ಎನ್ನುವುದನ್ನು ನಾವು ವಿವರವಾಗಿ ಆಲೋಚನೆ ಮಾಡಬೇಕಾಗಿದೆ; ಪುನಃ ಈಗ ಮಾಡಿರತಕ್ಕ ಭೂಸುಧಾರಣೆಯಲ್ಲಿ ಹೊಟ್ಟೆ ತುಂಬಿದವರಿಗೆ ತುಂಬ ತ್ಕೇಪೆ ಹೊರತು ಖಾಲಿ ಇರುವವರಿಗೆ ಹೊಟ್ಟೆ ತುಂಬುವ ವ್ಯವಸ್ಥೆಯನ್ನು ನಾವು ಏನೂ ಮಾಡಿಲ್ಲ; ಅದ್ದರಿಂದ ಇದನ್ನು ಇನ್ನೊಮ್ಮೆ ಪರ್ಯಾಲೋಚಿಸಬೇಕು ಎಂದು ನಾನು ನಿಮಗೆ ಅಧ್ಯಕ್ಷರ ಮುಖಾಂತರ ಮನವಿಮಾಡಿಕೊಳ್ಳುತ್ತೇನೆ. ಕೆಲವು ವಿದ್ಯಾಸಂಸ್ಥೆಗಳು, ಕೆಲವು ಮಠ ಮಾನ್ಯಗಳು ಅನೇಕ ಉತ್ತಮವಾದ ಕೆಲಸಗಳನ್ನು, ಹತ್ತಾರು ಕಾರೇಜುಗಳನ್ನು, ಹತ್ತಾರು ವಿದ್ಯಾಸಂಸ್ಥೆಗಳನ್ನು, ವಿದ್ಯಾರ್ಥಿನಿಲಯಗಳನ್ನು ತಮ್ಮ ಜಮೀನಿನ ಉತ್ಪತ್ತಿಯಲ್ಲಿ ನಡೆಸುತ್ತಿವೆ. ಇವತ್ತು ನಮಗೆ ಆಹಾರದ ಕೊರತೆ ಇದೆ. ಹಣದ ಕೊರತೆ ಇವೆ. ಈ ಎರಡನ್ನೂ ಇಟ್ಟುಕೊಂಡು ನಮ್ಮ ಸರ್ಕಾರಕ್ಕಿಂತಲೂ ಉತ್ತಮವಾದ ಸೇವೆಯನ್ನು ನಡೆಸತಕ್ಕ ಸಂಘಸಂಸ್ಥೆಗಳು ಇವೆ. ಅವುಗಳ ಜಮೀನನ್ನು ನಾವು ಕಿತ್ತುಕೊಂಡು ನಾವು ಆ ಕೆಲಸ ನಿರ್ವಹಿಸುತ್ತೇವೆ ಎಂದು ಹೋಗತಕ್ಕದ್ದು ಸರಿಯಲ್ಲ. ಇದರಲ್ಲಿ ಅಯಶಸ್ಸು ಹೊಂದುತ್ತೀರಿ ಎಂದು ನಾನು ಹೇಳುತ್ತೇನೆ. ಈಗಲಾದರೂ ಕೂಡ ಸರ್ಕಾರದವರು ಇದನ್ನು ಪರ್ಯಾಲೋಚಿಸಬೇಕು. ಯಾವ ಯಾವ ಸಂಘಸಂಸ್ಥೆಗಳು ಅವರ ಕಾಲಮೇಲೆ ನಿಂತು ಮಾಡತಕ್ಕ ಸಾರ್ವಜನಿಕ ಸೇವೆ ಇವುಗಳನ್ನು ವಿಚಾರಮಾಡಿ ಸಂಘಸಂಸ್ಥೆಗಳಿಗೂ ಮಠಮಾನ್ಯಗಳಿಗೂ ಸೀಲಿಂಗ್ ಇಟ್ಟರೆ ಒಳ್ಳೆಯದಾಗುತ್ತದೆ ಎಂದು ನಾನು ಹೇಳುತ್ತೇನೆ. ಅನೇಕ ಮಠಮಾನ್ಯಗಳಲ್ಲಿ ಲೆಕ್ಕ ಪತ್ರಗಳೇ ಇರುವುದಿಲ್ಲ. ಅವರ ವ್ಯವಹಾರವೇ ಬೇರೆ ಇರುತ್ತದೆ. ಇನ್ನೂ ಕೆಲವು ಮಠಮಾನ್ಯಗಳಲ್ಲಿ ಉತ್ತಮವಾದ ಕೆಲಸ ನಡೆಯುತ್ತಾ ಇರಬಹುದು. ದೇವರೇ ಇಲ್ಲದ ಪೊಳ್ಳು ದೇವಸ್ಥಾನಗಳಿಗೆ ಇವತ್ತು ದೇವರನ್ನು ಇಟ್ಟಂಥ ದೇವಸ್ಥಾನಗಳಿಗೆ ಕೊಡುವಂತ ಹಣ ಕೊಡುವುದು ಒಳ್ಳೆಯದು

(ಶ್ರೀ ಎಚ್. ಎಸ್. ಸಿದ್ದಪ್ಪ)

ಅಲ್ಲ. ಎಷ್ಟು ಸೀಲಿಂಗ್ ಫಿಕ್ಸ್ ಮಾಡಬೇಕೋ ಅವನ್ನು ಫಿಕ್ಸ್‌ಮಾಡಿ. ಎಂದು ನಾನು ಹೇಳಬಯಸುತ್ತೇನೆ.

ಇನ್ನು ಕಾಫಿ ಪ್ಲಾಂಟೇಷನ್‌ಗಳಿಗೆ ತಾವು ವಿನಾಯಿತಿಯನ್ನು ಕೊಟ್ಟಿದ್ದೀರಿ. ನನಗಂತೂ ಇದು ಅರ್ಥವಾಗದೆ ಇರುವ ವಿಷಯ: ಕಾಫಿ ಪ್ಲಾಂಟೇಷನ್‌ಗಳಿಗೆ ವಿನಾಯಿತಿ ಕೊಟ್ಟಮೇಲೆ ತೆಂಗು ಅಡಿಕೆ ಇವುಗಳೂ ಪ್ಲಾಂಟೇಷನ್‌ಗಳು, ಇದೂ ಕೂಡ ವಿದೇಶಿ ವಿನಿಮಯ ಗಳಿಸುತ್ತದೆ. ಕಾಫೀ ಪ್ಲಾಂಟೇಷನ್‌ಗೆ ವಿನಾಯಿತಿ ಕೊಟ್ಟ ಜನ ತೆಂಗು ಅಡಿಕೆಗೆ ಯಾತಕ್ಕೆ ಕೊಡಲಿಲ್ಲ. ಚನಾವಣೆ ಯಲ್ಲಿ ತೆಂಗು ಅಡಿಕೆಯ ಜನ ನಿಮ್ಮನ್ನು ವಿರೋಧಮಾಡಿದ್ದರೇ, ಕಾಫೀಪ್ಲಾಂಟೇಷನ್ ಅವರು ಫಾರ್ ಮಾಡಿ ಸಿಮೆಂಟ್ ಮೂಟೆಯಲ್ಲಿ ಹಣ ಕಟ್ಟ ಕೊಟ್ಟಿದ್ದರೆ? ಇದನ್ನು ತಾವು ಸಭೆಯ ಮುಂದೆ ಇಡಬೇಕು ಎಂದು ಕಳಕಳಿಯಿಂದ ಮನವಿ ಮಾಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಗೋಣಿ ಚೀಲದಲ್ಲಿ ಮೂಟೆ ಕಟ್ಟಿಕೊಂಡು ಕೊಟ್ಟಿದ್ದನ್ನು ಇಲ್ಲಿ ತಂದಿಡಬೇಕೆ?

ಶ್ರೀ ಎಚ್. ಎಸ್. ಸಿದ್ದಪ್ಪ.—ಎಷ್ಟು ಹಣ ಕೊಟ್ಟಿದ್ದಾರೆ ಅದನ್ನು ತಂದು ಇಡಬೇಡಿ, ನಿಮ್ಮ ಅಂತರಾತ್ಮವನ್ನು ಪ್ರಶ್ನೆ ಮಾಡಿಕೊಳ್ಳಿ. ಕಾಫಿ ಪ್ಲಾಂಟೇಷನ್‌ಗೆ, ಏಲಕ್ಕಿ ಪ್ಲಾಂಟೇಷನ್‌ಗೆ ವಿನಾಯಿತಿ ಕೊಟ್ಟಮೇಲೆ, ತೆಂಗು ಅಡಿಕೆ ಪ್ಲಾಂಟೇಷನ್‌ಗೆ ಏತಕ್ಕೆ ವಿನಾಯಿತಿ ಕೊಡಬಾರದು? ಕಾಫಿ ಪ್ಲಾಂಟೇಷನ್ ಮಧ್ಯ ಇವುಗಳಲ್ಲಿ ಜಮೀನಿಗೆ ಸೀಲಿಂಗ ವಿನಾಯಿತಿ ಕೊಡುತ್ತೇವೆಂದು ಹೇಳುತ್ತಿದ್ದೀರಿ, ತೆಂಗು ಅಡಿಕೆಗೆ ಏತಕ್ಕೆ ವಿನಾಯಿತಿ ಕೊಡಬಾರದು? ದೇಶದಲ್ಲಿ ಒಂದು ಭಾಗದ ಜನಕ್ಕೆ ಒಂದು ತರಹ ವ್ಯವಹಾರ, ಇನ್ನೊಂದು ಭಾಗದ ಜನಕ್ಕೆ ಇನ್ನೊಂದು ತರಹ ವ್ಯವಹಾರ ಮಾಡುವುದು ಸಮಾಜವಾದದ ನೀತಿಯೇ? ಸಮಾಜವಾದದ ನೀತಿಗೆ ಅಂಟಿಕೊಂಡಿರಬೇಕಾದರೆ, ಒಂದು ಸಾಮಾನ್ಯವಾದ ನೀತಿಯನ್ನು ನೀವು ಅನುಸರಿಸಬೇಕು. ಆದ್ದರಿಂದ ಇದನ್ನೆಲ್ಲಾ ಪರಿಶೀಲನೆ ಮಾಡಿ ತೆಂಗು ಅಡಿಕೆಗೂ ಸೀಲಿಂಗ್ ವಿನಾಯಿತಿ ಕೊಡಬೇಕು ಎಂದು ಮನವಿ ಮಾಡುತ್ತೇನೆ.

ಸನ್ಮಾನ್ಯ ಅಧ್ಯಕ್ಷಣಿಯವರೇ ಭೂ ಸುಧಾರಣೆ ನೀತಿಯಲ್ಲಿ ಜಮೀನನ್ನು ಯಾರಿಗೆ ಭೂಮಿ ಇಲ್ಲವೋ ಯಾರಿಗೆ ಜೀವನಕ್ಕೆ ಮಾರ್ಗ ಇಲ್ಲವೋ, ಅಂಥವರಿಗೆ ಭೂಮಿ ಹೆಚ್ಚಿಗೆ ಇರುವವರಿಂದ ತೆಗೆದುಕೊಡುತ್ತೇವೆ ಎನ್ನುವುದನ್ನು ತಮ್ಮ ಘೋಷಣೆಯಲ್ಲಿ ಹೇಳಿದ್ದೀರಿ. ಈ ನದನದ ಪ್ರಾರಂಭದ ಅಧಿವೇಶನದಲ್ಲಿ ನಾನು ಒಂದು ಪ್ರಶ್ನೆಯನ್ನು ತಮಗೆ ಹಾಕಿದ್ದೆ; ಅದಕ್ಕೆ ಉತ್ತರವಾಗಿ 61-62 ರಲ್ಲಿ ದೇಶಾದ್ಯಂತ 25 ಲಕ್ಷ ಖಾತೆಗಳು ಇತ್ತು, ಅವು ಈಗ 45 ಲಕ್ಷ ಖಾತೆಗಳು ಆಗಿವೆ. ಹಿಂದೆ ಜಮೀನು ಎಷ್ಟು ಇತ್ತೋ ಅದು ಈಗಲೂ ಅಷ್ಟೇ ಇದೆ.

3-30 P. M.

ಸನ್ಮಾನ್ಯ ಅಧ್ಯಕ್ಷಣೀಯವರೇ, 25 ಲಕ್ಷ ಖಾತೆ ಇದ್ದದ್ದು 45 ಲಕ್ಷ ಖಾತೆ ಆಗಬೇಕಾದರೆ ಅದಕ್ಕೆ ಕಾರಣ ಹೆಚ್ಚು ಜಮೀನು ಇದ್ದ ಜನ ಖಾತೆಗಳನ್ನು ಹೆಚ್ಚಿಗೆ ಮಾಡಿಕೊಂಡಿರುತ್ತಾರೆ. ಆದುದರಿಂದ ಅವರಿಂದ ಎಷ್ಟು ಜಮೀನು ಸಿಗಬಹುದು ಎನ್ನುವುದನ್ನು ತಾವು ಪ್ರಯತ್ನಿಸಿ ನೋಡಬೇಕು. ಬಹುತೇಕ ಜಮೀನು ಸಿಕ್ಕಿದರೆ ನಿಮ್ಮ ಸೀಲಿಂಗ್ ಹೊರತಾಗಿ ಒಬ್ಬೊಬ್ಬರ ಹತ್ತಿರ ಉಳಿದಿದ್ದರೆ ಅರ್ಧ ಎಕರೆ, ಒಂದು ಎಕರೆ ಉಳಿಯಬಹುದು. ಒಬ್ಬ ಬಡವನಿಗೆ ವ್ಯವಸಾಯದ ಕೂಲಿಗಾರನಿಗೆ ಒಂದು ಊರಿನಲ್ಲಿ ನಾಲ್ಕು ಎಕರೆ ಜಮೀನು ಕೂಡ ಸಿಗುತ್ತದೆಯೆ? ಎಂದು ಆಲೋಚನೆ ಮಾಡಿ. ಇದಕ್ಕೆ ತಾವು ಏನು ವ್ಯವಸ್ಥೆ ಮಾಡಿದ್ದಿರಿ? ಅರ್ಧ ಎಕರೆ ಒಂದು ಎಕರೆ ಜಮೀನನ್ನು ಬಿಡಿಸಿಕೊಂಡು ಏನಾದರೂ ಮಾಡಲಿಕ್ಕೆ ಸಾಧ್ಯವಿದೆಯೇ? ನಿಮ್ಮ ಸೀಲಿಂಗ್‌ನ ಭೂ ನಿಧಾರಣೆಯ ಕಾನೂನು ಏನು ಇದೆ ಇದು ನೋಡಿದರೆ, ಅರಸೀಕೆರೆ ತಾಲ್ಲೂಕಿಗೆ ಏನೂ ಪ್ರಯೋಜನವಿಲ್ಲ. ಅಲ್ಲಿ ಯಾವ ಬಡವನಿಗೂ ಜಮೀನು ಸಿಕ್ಕುವುದಿಲ್ಲ. ಹಾಗಾದರೆ ಅವನನ್ನು ಹೇಗೆ ಉದ್ಧಾರ ಮಾಡುವುದು? ಫಾರೆಸ್ಟ್ ಜಮೀನು ಕೊಡುವುದಿಲ್ಲ, ಎಂದು ಹೇಳುತ್ತೀರಿ. ಕಾವಲು ಜಮೀನು ಕೊಡುವುದಿಲ್ಲ, ಅಲ್ಲ ಅಷ್ಟು ತಮಿಹರ್ ತಳಿ ದನ ಬೆಳೆಸುತ್ತೇವೆ ಎಂದು ಹೇಳುತ್ತೀರಿ. ಆದರೆ ಮನುಷ್ಯನ ತಳಿ ಬೆಳೆಸುವುದಕ್ಕೆ ತಮ್ಮ ಹತ್ತಿರ ಜಮೀನು ಎಲ್ಲಿದೆ? ಭೂ ಸುಧಾರಣೆ ಕಾನೂನಿಂದ ಎಷ್ಟು ಲಕ್ಷ ಎಕರೆ ಜಮೀನು ಸಿಗುತ್ತದೆ? ಎಷ್ಟು ಲಕ್ಷ ಜನಕ್ಕೆ ಜಮೀನನ್ನು ಕೊಡುತ್ತೀರಿ ಎಂಬುದನ್ನು ತಿಳಿಸುವುದಕ್ಕೆ ನಿಮಗೆ ಚೈತನ್ಯವಿಲ್ಲ. ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಈ ಭೂಸುಧಾರಣೆಯಿಂದ ನಿಮಗೆ ಬಂದು ಊರಿನಲ್ಲಿ ಮೂರು ಎಕರೆ, ಇನ್ನೊಂದು ಊರಿನಲ್ಲಿ ಎರಡು

ಎಕರೆ, ಇನ್ನೊಂದು ಹಳ್ಳಿಯಲ್ಲಿ ಒಂದೊವರೆ ಎಕರೆ ಸಿಕ್ಕಿದರೆ ಅದನ್ನು ಬಿಡಿಸಿ ಕೊಳ್ಳುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅದಕ್ಕಾಗಿ ಹೊಟ್ಟಗೆ ಇಲ್ಲದೇ ಇರತಕ್ಕ ಈ ಬಡ ರೈತರಿಗೆ ಭೂಮಿಯುಳ್ಳ ಕೆಲಸ ಮಾಡತಕ್ಕವರಿಗೆ ಜಮೀನು ಕೊಡುವ ವ್ಯವಸ್ಥೆ ಹೇಗೆ ಮಾಡುತ್ತೀರಿ, ಯಾವ ರೀತಿ ಮಾಡುತ್ತೀರಿ, ಎನ್ನುವುದನ್ನು ನಿಮ್ಮ ಧೋರಣೆಯಲ್ಲಿ ವ್ಯಕ್ತಪಡಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೀಯವರೇ ನಾನು ಹಿಂದೆ ಹೇಳಿದ್ದ ವಚನವನ್ನು ಪುನಃ ಹೇಳುತ್ತೇನೆ. ಇದರ ಬಗ್ಗೆ ವಿವೇಚನೆ ಮುಖ್ಯ. ''ಬೇಡುವಾತ ಕರ್ತನಲ್ಲ, ಪಾಡುವಾತ ಭಕ್ತನಲ್ಲ, ಬೇಡಬೇಕು ಹೇಗೆ ಮನ ನೋಯದಂತೆ. ಮಾಡಬೇಕು ಹೇಗೆ ಮನ ಮರುಗದಂತೆ. ಇದು ಕಾರಣ, ಉಭಯದುಃಖದ ದ್ರೋಹಕಣ.'' ?

ಈ ವ್ಯವಸ್ಥೆಯನ್ನು ನಿಮ್ಮ ಭೂ ಸುಧಾರಣೆಯಲ್ಲಿ ಮಾಡಿದರೆ, ಅದನ್ನು ಅನುಷ್ಠಾನಕ್ಕೆ ತಂದಾಗ್ಗೆ ಸರ್ಕಾರಕ್ಕೆ ಒಳ್ಳೆಯದು ಆದೀತು, ಜನಕ್ಕೂ ಒಳ್ಳೆಯದು ಆದೀತು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಸನ್ಮಾನ್ಯ ಅಧ್ಯಕ್ಷರೀಯವರೇ, ಡಿಫರೆನ್ಷಿಯಲ್ ''ರೆಜ್ಯೂವೆನೇಬರ್ ಲ್ಯಾಂಡ್'' ಇಲ್ಲವೇ ಇಲ್ಲ. ಮೊದಲನೇ ಅಕ್ಟೋಬರ್‌ನಲ್ಲಿ ಅದು 29 ನೇ ಪ್ಯಾರಿಜಿನ್‌ನಲ್ಲಿ ಇತ್ತು. ಇಲ್ಲಿ ಅದನ್ನು ಕೈ ಬಿಟ್ಟು ಬಿಟ್ಟಿದ್ದೀರಿ. ಸೂಲ್ಚರ್ಸ್‌ಗೆ ಅಥವಾ ನೇಮಿಸಿರುವ ತಕ್ಕವರಿಗೆ ಮಾತ್ರ ರೆಜೂಮೆ ಮಾಡಿ ಪಾಪಸ್ಸು ಕೊಡತಕ್ಕ ವ್ಯವಸ್ಥೆ ಮಾಡಿದ್ದೀರಿ. ಸ್ವಾಮಿ, ತಾವು ಇದರ ಬಗ್ಗೆ ಸ್ವಲ್ಪ ವಿವೇಚನೆ ಮಾಡಿ, ಈಗಲೂ ಕಾಲ ಮೀರಿ ಹೋಗಿಲ್ಲ. ಸಂಘ ಸಂಸ್ಥೆಗಳು ಜಮೀನು ಅಧ್ಯಕ್ಷರ ಹೆಸರಿನಲ್ಲಿ ಇರುತ್ತದೆ, ಇಥವಾ ಸಂಘ ಸಂಸ್ಥೆಗಳ ಮುಖ್ಯಾಧಿಕಾರಿಗಳ ಹೆಸರಿನಲ್ಲಿರುತ್ತದೆ. ಸಂಘ ಸಂಸ್ಥೆಗಳಲ್ಲಿ ಸದಸ್ಯರು ಭಕ್ತಾದಿಗಳೂ ಇರುತ್ತಾರೆ. ರೈತರು ಇರುತ್ತಾರೆ. ಸಂಸ್ಥೆಯ ಹಿತದೃಷ್ಟಿಯಿಂದ ಸಂಸ್ಥೆ ಮಾಡತಕ್ಕ ಸಾರ್ವಜನಿಕ ಸೇವೆಯ ಹಿತದೃಷ್ಟಿಯಿಂದ ಬೇಸಾಯದ ಕಾಲದಲ್ಲಿ ಮಳೆಗಾಲದಲ್ಲಿ ಒಂದು ಮನೆಯಿಂದ ಒಂದು ಒಂದು ಜೊತೆ ಎತ್ತು ಇನ್ನೊಂದು ಮನೆಯಿಂದ ನೇಗಿಲು ತಂದು ವ್ಯವಸಾಯ ಮಾಡುತ್ತಾ ಇರುತ್ತಾರೆ. ಜೆನೆಂಟ್ ಯಾರು ಎಂದು ಫಿಕ್ಸ್ ಮಾಡುವುದಕ್ಕೆ ಆಗುವುದಿಲ್ಲ. ಸಂಸ್ಥೆಯ ಜಮೀನುಗಳನ್ನು ಸರ್ಕಾರ ವಹಿಸಿಕೊಂಡು ಡಿಕ್ಲರೇಷನ್ ಮಾಡಿ ಕೊಡಿಕೊಡಬೇಕೆಂದು ಮಾಡಿದ್ದೀರಿ. ಜಮೀನು ಅವನಿಗೆ ಕೊಟ್ಟರೆ ಸಂಸ್ಥೆಗಳನ್ನು ನಡೆಸುವುದಕ್ಕೆ ವ್ಯವಸ್ಥೆ ಮಾಡುವ ತನಕ, ಈಗ ನಡೆಯುತ್ತಿರುವ ಸಂಸ್ಥೆಗಳ ಗತಿ ಏನು? ಅದನ್ನು ತಾವು ಯೋಚನೆ ಮಾಡಿ ಅದಕ್ಕಾಗಿ ನಾನು ಹೇಳುತ್ತೇನೆ. ಈ ಸಾರ್ವಜನಿಕರ ವಿದ್ಯಾರ್ಥಿ ನಿಲಯಗಳನ್ನು ನಡೆಸತಕ್ಕ ಸಂಸ್ಥೆಗಳಿವೆ. ಕಾಲೇಜನ್ನು ನಡೆಸತಕ್ಕ ಸಂಸ್ಥೆಗಳು ಇವೆ. ಬಡಜನತೆಯನ್ನು ಜಾಣರು ಮತ್ತು ಜ್ಞಾನಸಂಪನ್ನರು ಮಾಡುವ ಸಂಸ್ಥೆಗಳಿವೆ ಹಾಗೆ ಮಾಡಬೇಡಿ. ಸತ್ಕಾರ್ಯಗಳನ್ನು ಮಾಡುವುದಕ್ಕೆ ಪಾರ್ಷಿಕ ವೆಚ್ಚ ಎಷ್ಟು ಆಗುತ್ತದೆ ಎನ್ನುವುದನ್ನು ನಿಗದಿ ಮಾಡಿ ಒಂದೆರಡು ಮೂರು ಜನರ ಉಪಸಮಿತಿ ಮಾಡಿ ಅವಕ್ಕೆ ಇಷ್ಟಿಷ್ಟೇ ಜಮೀನು ಬಿಡಬೇಕು ಎನ್ನುವ ಸೀಲಿಂಗ್ ಹಾಕಿ ಸಂಸ್ಥೆಗಳು ಸದಾ ಸರ್ಕಾರಕ್ಕೆ ಹೊರೆ ಆಗದಂತೆ ಸೇವೆಯನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಈ ಸಂದರ್ಭದಲ್ಲಿ ಸೂಚಿಸ ಮಾಡುತ್ತೇನೆ

ಇನ್ನು ಪ್ರಾಪರ್ಟಿಷನ್ ಆಫ್ ಲೀಜಸ್ ವಿಷಯುಗಳ ಮೈನರ್ ಮಕ್ಕಳು, ವಿಧವೆಯರ ಬಗ್ಗೆ ಸೆಲೆಕ್ಟ್ ಕಮಿಟಿಯವರು ಸೂಚನೆ ಮಾಡಿರುವುದು ದೊಡ್ಡ ಆಘಾತ. ವಿಧವೆಯರು ವ್ಯವಸಾಯ ಮಾಡುವುದಕ್ಕೆ ಆಗುತ್ತದೆಯೇ ? ಆಳುಗಳನ್ನು ಇಟ್ಟುಕೊಂಡು, ಅಣ್ಣ ತಮ್ಮಂಧಿರ ಮನೆಯವರನ್ನು ಕರೆದುಕೊಂಡು ವ್ಯವಸಾಯ ಮಾಡಿಕೊಂಡು ಅವರು ಜೀವನ ಮಾಡಬೇಕಾಗಿರುತ್ತದೆ. ದೇಶದಲ್ಲಿರುವ ಎಷ್ಟು ವಿಧವೆಯರು ಮತ್ತು ಮೈನರ್ ಮಕ್ಕಳನ್ನು ಸಾಕಲಿಕ್ಕೆ ಸಾಧ್ಯವಾಗುತ್ತದೆ ಮತ್ತು ಅವರ ಹಿತವನ್ನು ಕಾಪಾಡಲಿಕ್ಕೆ ಸಾಧ್ಯವಾಗುತ್ತದೆಯೇ ? ಅವರು ಈಗಾಗಲೇ ಜಮೀನಿನ ಮೇಲೆ ಸಾಕಷ್ಟು ಸಾಲ ಸೋಲ ಮಾಡಿಕೊಂಡಿದ್ದಾರೆ. ವಿಧವೆಯು ಗಂಡ ಸತ್ತು ಹೋದ ಮೇಲೆ ಮುಂದಿನ ವಿದ್ಯಾಭ್ಯಾಸ ಮಾಡಿ ಜೀವನವನ್ನು ಸುಗಮವಾಗಿ ಮಾಡುವುದಕ್ಕೆ ಅಬ್ಬಾ ಎಲ್ಲ ಹಣವನ್ನು, ಜಮೀನಿನ ಮೇಲೆ ಹಾಕಿದಿದ್ದಾರೆ. ಹಣವನ್ನು ತೀರಿಸತಕ್ಕ ಪರಿಸ್ಥಿತಿ ಏನು ? ಜಮೀನಿನ ಮೇಲೆ ಹಕ್ಕನ್ನು ಕೊಡದೇ ಹೋದರೆ ಅವರನ್ನು ಪಾಪಕೂಪಕ್ಕೆ ತಳ್ಳಿದ ಹಾಗಾಗುತ್ತದೆ. ಮಹಿಳೆಯರನ್ನು ನಾವೇ ದುರ್ದೆಯ ಹಾದಿಗೆ ಕಳುಹಿಸಿದ ಹಾಗಾಗುವುದಿಲ್ಲವೇ ? ಈ ಬಗ್ಗೆ ತೀವ್ರವಾಗಿ ಆಲೋಚನೆ ಮಾಡಬೇಕು. ಅವರು ಮಾನ ಸಂರಕ್ಷಣೆ ಮಾಡಿಕೊಂಡು ಸಾರ್ವಜನಿಕ ಜೀವನದಲ್ಲಿ ಮರ್ಯಾದೆಯಿಂದ ಜೀವನ ಮಾಡಬೇಕಾದರೆ ಅವರಿಗೆ ಜಮೀನು ಹಕ್ಕನ್ನು ನೀವು ಕೊಡಬೇಕು. ಇತರೇ ದೊಡ್ಡ ದೊಡ್ಡ ಜಮೀನ್ದಾರರಿಂದ ಜಮೀನು ಕಿತ್ತುಕೊಳ್ಳಿ ಅದಕ್ಕೆ ನನ್ನ ಪೂರ್ಣವಾದ ಬೆಂಬಲ ಇದೆ. ಆದರೆ ಮೈನರ್ ಮಕ್ಕಳಿಗೆ ಮತ್ತು ವಿಧವೆಯರಿಗೆ ಸಂಕಷ್ಟ ಒದ್ದುವುದು ಸರಿಯಲ್ಲ. ಅವರ ಶಾಪಕ್ಕೆ ನಿಮಗೆ ತಪ್ಪಿದರೆ ನಿಮಗೆ ಒಳ್ಳೆಯದು ಆಗುವುದೇ ಎಂಬ ಯೋಚನೆ

(ಶ್ರೀ ಎಚ್. ಎಸ್. ಸಿದ್ದಪ್ಪ)

ಮಾಡಿ. ಉದಾಹರಣೆಗೆ ಮಾನ್ಯಮುಂತ್ರಿಗಳು, ಶಿವಣ್ಣನವರು ಮತ್ತು ಇವರ ಹೆಂಡತಿ ಕಾರಿನಲ್ಲಿ ಹೋಗುತ್ತಿದ್ದಾಗ, ಆಕ್ಸಿಡೆಂಟ್ ಆಗಿ ಶಿವಣ್ಣನವರು ಸತ್ತು ಹೋದರೆ, ಆ ಯಮ್ಮನ ಗತಿ ಏನು ? ಆಕ್ಸಿಡೆಂಟ್ ಆಗಬೇಕು ಎಂದು ನನ್ನ ಆಸ್ ಅಲ್ಲ. ನನ್ನ ಮನಸ್ಸಿನ ಕಳಕಳಿಯನ್ನು ಹೇಳುತ್ತಿದ್ದೇನೆ. ಈ ಬಗ್ಗೆ ತೀವ್ರ ಆಲೋಚನೆ ಮಾಡಿ ಎಂತಹವರಿಗೆ ನ್ಯಾಯವಾಗಿ ಅವಕಾಶ ಕೊಡಬೇಕೋ ಅವರಿಗೆ ಕೊಡಿ. ಕೋಣ ಈದಿದೆ ಅಂದರೆ ಕೊಟ್ಟಿಗೆಗೆ ಕಟ್ಟು ಎನ್ನುವ ವ್ಯವಹಾರ ಮಾಡಬೇಡಿ.

ಅಧ್ಯಕ್ಷೆಯವರೇ, ಮದುವೆ ಆಗದೇ ಇರತಕ್ಕ ಹೆಣ್ಣು ಮಕ್ಕಳ ಬಗ್ಗೆ ಒಂದು ವಿಚಾರ ಹೇಳುತ್ತೇನೆ. ನನಗೆ ನಿಮ್ಮ ಸೀಲಿಂಗ ಎಫೆಕ್ಟ್ ಆಗುವುದಿಲ್ಲ. ನನ್ನ ಹಾಗೆ ಇರುವವರು ಹೆಣ್ಣು ಮಕ್ಕಳಿಗೆ ಜಮೀನು ಕೊಡೋಣ ಎಂದು ಇದ್ದರೆ ಅವರ ಗತಿ ಏನು ? ನೀವು ಯೋಚನೆ ಮಾಡಿ. ನಾನು ಮತ್ತು ನನ್ನ ಹೆಂಡತಿ ಏಕಸ್ಮಾತ್ತಾಗಿ ಎಲ್ಲಿಗೋ ಕಾರಿನಲ್ಲಿ ಹೋದಾಗ ಅಪಘಾತಕ್ಕೆ ಈಡಾದರೆ ಆಗ ನನ ನಾಲ್ಕು ಮೈನರ್ ಹೆಣ್ಣುಮಕ್ಕಳಿಗೆ ಜಮೀನು ಕೊಡುವುದಿಲ್ಲ ಎಂದರೆ ಅವರು ಏನು ಜೀವನ ಮಾಡುವುದು ; ಅವರ ಗತಿ ಏನು ? ಈ ಮಕ್ಕಳು ನೇಗಿಲು ಹಿಡಿದು ವ್ಯವಸಾಯ ಮಾಡುವುದಿಲ್ಲ. ಅವರ ಚಿಕ್ಕಪ್ಪ ದೊಡ್ಡಪ್ಪ ಇರುವವರನ್ನು ಕರೆದುಕೊಂಡು ಹೋಗಿ ಜಮೀನಿನಲ್ಲಿ ಉತ್ತು, ಬಿತ್ತಿ ವ್ಯವಸಾಯದಿಂದ ಜೀವನ ಮಾಡಬೇಕಾಗಿದೆ. ಇಂತಹ ಸಂದರ್ಭದಲ್ಲಿ ಸೀಲಿಂಗ್ ಏನಾಯಿತಿ ಕೊಡದೇ ಹೋದರೆ ದೇಶದ ಹಿತದೃಷ್ಟಿಯಿಂದ ಒಳ್ಳೆಯದಲ್ಲ. ಇವತ್ತು ಕಾರ್ಮಿಕರ ಒಂದು ಸಂಕಷ್ಟ ಏನು ಇದೆ, ಅದನ್ನು ನಿರ್ಮಾಮಾಡುವುದಕ್ಕೆ ಜೈತನ್ಯವಿಲ್ಲದೆ ನರಳುತ್ತಿದ್ದಾರೆ. ವ್ಯವಸಾಯ ಕೂಲಿಗಾರರು ಏನಿದ್ದಾರೆ, ಅವರಿಗೆ ಒಳ್ಳೆಯ ಮಾರ್ಗದಲ್ಲಿ ಅನ್ನ, ಆಹಾರ ಒದಗಿಸುವುದಕ್ಕೆ ಚೈತನ್ಯವಿಲ್ಲ, ಹೀಗಾದರೆ ವಿಧವೆಯರು, ಮೈನರು ಮಕ್ಕಳು ಇಲ್ಲ ಎಂದು ಗೋಳಿಟ್ಟು ವಿಧಾನ ಸೌಧದ ಮುಂದೆ ಬರುವ ಪರಿಸ್ಥಿತಿಯನ್ನು ಆಹ್ವಾನಿಸುವುದು ಸರಿಯೇ ? ಇವರಿಗೆ ಕನಿಷ್ಟ ಮಿತಿ ಜಮೀನನ್ನು ಕೊಡಬೇಕು. ನಾವು ಮರಿ ಮಕ್ಕಳನ್ನು ಇಟ್ಟುಕೊಂಡಿರುವ ಜನ. ಇದೇ ರೀತಿ ದೇಶದಲ್ಲಿರುವ ಕುಟುಂಬಗಳನ್ನೂ ನೋಡಬೇಕು. ಅವರ ಸಂಕಷ್ಟಕ್ಕೆ ತಕ್ಕ ಪರಿಹಾರವನ್ನು ಒದಗಿಸತಕ್ಕ ವ್ಯವಸ್ಥೆ ಈ ಭೂಸುಧಾರಣೆ ಕಾನೂನಿನಲ್ಲಿ ಬರಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಹೆಣ್ಣು ಮಕ್ಕಳಿಗೆ ಪರಿಹಾರ ಮಾರ್ಗಗಳನ್ನು ಪಂಚವಾರ್ಷಿಕ ಯೋಜನೆಯಲ್ಲಿ ಅಳವಡಿಸಿದ್ದೇವೆ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಅದರಲ್ಲಿ ವಿಫಲರಾಗಿದ್ದೀರಿ. ಆಕಾಶಕ್ಕೆ ಹಚ್ಚಡ ಹೊದಿಸುವುದಕ್ಕೆ ಸಾಧ್ಯವೇ ? ಆಕಾಶಕ್ಕೆ ಹಚ್ಚಡ ಹೊದಿಸುವುದಕ್ಕೆ ಸೃಷ್ಟಿಕರ್ತ ಬ್ರಹ್ಮನಿಂದ ಸಾಧ್ಯ. ತಾವು ಮೇಧಾವಿಗಳು, ಜಾಣರು ಇದ್ದೀರಿ. ಅದು ಸಾಧ್ಯವೇ ಹೇಳಿ. ಪಂಚವಾರ್ಷಿಕ ಯೋಜನೆಯಲ್ಲಿ ಎಲ್ಲಾ ಮಹಿಳೆಯರ ಕಲ್ಯಾಣ, ಅಬಲೆಯರ ಕಲ್ಯಾಣ, ಮಕ್ಕಳ ಕಲ್ಯಾಣ ಆಗುತ್ತದೆಯೇ ? ಎಲ್ಲರಿಗೂ ಕಲ್ಯಾಣ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನೀವು ಕೊಡತಕ್ಕ 5 ಕೋಟಿ ರೂಪಾಯಿ ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕ ಅಬಲೆಯರಿಗೆ, ವಿಧವೆಯರಿಗೆ, ಹೆಣ್ಣು ಮಕ್ಕಳಿಗೆ, ಮೈನರ್ ಮಕ್ಕಳಿಗೆ; ನೊಂದಿರುವ ಜನಕ್ಕೆ ತಲುಪಬೇಕಾದರೆ ಒಂದು ಕೋಟಿ ತಲುಪಬಹುದು. ಇನ್ನು 4 ಕೋಟಿಯನ್ನು ಹೆಗ್ಗಣಗಳು ತಿಂದು ಬಿಡುತ್ತವೆ. ಅದು ತಮಗೆ ಗೊತ್ತಿದೆ. ನಮ್ಮ ಜನಾಂಗದ ನೈತಿಕಮಟ್ಟ ಯಾವ ಮಟ್ಟದಲ್ಲಿದೆ ? ನನ್ನಂತೆ ಇನ್ನೊಬ್ಬ ಎನ್ನುವ ಭಾವನೆ ನಮ್ಮ ಜನಕ್ಕೆ ಬಂದಿದೆಯೇ ? ಧಾರ್ಮಿಕ ಹಿನ್ನೆಲೆಯು ತಳಹದಿ ಇದೆಯೇ ? ಇದನ್ನು ನೀವು ಪರ್ಯಾಲೋಚನೆಮಾಡಿ ಈ ವಿನಾಯಿತಿಗಳನ್ನು ಕನಿಷ್ಟವಾಗಿ ಕೊಡಬೇಕು ಎಂದು ನಾನು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ.

ನನ್ಮಾನ್ಯ ಅಧ್ಯಕ್ಷೆಯರೇ, ಭೂಸುಧಾರಣಾ ಮಸೂದೆಯಲ್ಲಿ ತಹಶೀಲ್ದಾರರಿಗೆ ವಿಶಿಷ್ಟ ಅಧಿಕಾರವನ್ನು ಕೊಟ್ಟಿದ್ದೀರಿ. ಇವತ್ತು ನಾನು ತಮಗೆ ಹೇಳುತ್ತೇನೆ. ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಒಬ್ಬ ತಹಶೀಲ್ದಾರನಿಗೆ ಏನು ಒಂದು ಬಗುಮಾನದ ಅಧಿಕಾರವಿತ್ತೋ, ಆ ಅಧಿಕಾರ ಈ ಭೂಸುಧಾರಣಾ ಮಸೂದೆಯಿಂದ ಪುನಹ ಸಿಗುತ್ತಾ ಇದೆ. ಇವತ್ತಿನ ದಿವನ ಭೂಸುಧಾರಣಾ ಮಸೂದೆಯಲ್ಲಿ ತಹಸೀಲ್ದಾರರಿಗೆ ಕೊಡತಕ್ಕ ಅಧಿಕಾರ ನೋಡಿ, ಅವರಿಗೆ ಮತ್ತೆ ಕಾಳೆ ಹಿಡಿದು ಕೊಂಡು ಪಲ್ಲಕಿ ಹೊಂಚಿಕೊಳ್ಳತಕ್ಕ ಯೋಚನೆ ಬರುತ್ತದೆ. ಏತಕ್ಕೆಂದರೆ, ಪ್ರತಿಯೊಂದೂ ಕೂಡ ತಹಶೀಲ್ದಾರರ ವ್ಯಾಪ್ತಿಯಲ್ಲಿ ಪರ್ಯವಸಾನವಾಗುವ ಪರಿಸ್ಥಿತಿಯಲ್ಲಿ ಇಟ್ಟಿದ್ದೀರಿ. ತಹಶೀಲ್ದಾರ ತಾಲ್ಲೂಕು ಮಟ್ಟದಲ್ಲಿ ಅನೇಕ ರಾಜಕೀಯ ಜನರ ಕೈಗೊಂಬೆ ಯಾಗಿರುತ್ತಾನೆ, ಶೀಮಂತರ ಕೈಗೊಂಬೆಯಾಗಿರುತ್ತಾನೆ. ಇನ್ನು ಮುಂದೆ ಹೋದರೆ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ

ತಾಲ್ಲೂಕು ಮಟ್ಟದಲ್ಲಿ ಅರಿಸ್ಟ್ರೇಟ್ ಕಮಿಷನರನ್ನು ಥೇರ್ಮನ್ ಮಾಡಿ ಒಂದು ಜ್ರೈಬ್ಯುನಲ್ ಮಾಡುತ್ತಿದ್ದೀರಿ. ನಿಮಗೆ ದೇವರಲ್ಲಿ ನಂಬಿಕೆ ಇದ್ದರೆ, ಯಾವುದಾದರೂ ದೇವರ ಮುಂದೆ ಹೋಗಿ, ದೇವರನ್ನು ಅನನ್ಯ ಭಕ್ತಿಯಿಂದ ಪೂಜೆಮಾಡಿ, ನೀವು ಮಾಡುತ್ತಿರುವುದು ಸರಿಯೇ ಎಂದು ದೇವರನ್ನು ಪ್ರಾರ್ಥಿಸಿ, ದೇವರು ಒಪ್ಪುವುದಾದರೆ, ಮಾಡಿ.

ಶ್ರೀ ಎಂ. ಮಲ್ಲಪ್ಪ.—ನಿಮಗೆ ಯಾವುದಾದರೂ ದೇವರು ವರ ಕೊಟ್ಟಿದ್ದಾರೆಯೇ?

ಶ್ರೀ ಹೆಚ್. ಎಸ್. ಸಿದ್ದಪ್ಪ.—ನನಗೆ ವರ ಕೊಟ್ಟಿರುವುದು ಗುಟ್ಟು. ನೀವೂ ನನ್ನ ಜೊತೆಗೆ ಬಂದರೆ ನನಗೇನೂ ಸಿಕ್ಕದ ಹಾಗೆ ಆಗುತ್ತದೆ. ಆ ತರಹ ನೈತಿಕಮಟ್ಟ ನಮ್ಮದು. ಜ್ರೈಬ್ಯುನಲ್‌ನಲ್ಲಿ ಖಾಸಗಿ ಜನರನ್ನು ಮತ್ತು ಅಧಿಕಾರಿಗಳನ್ನು ಹಾಕತಕ್ಕ ಹವ್ಯಾಸ ಸರಿಯಿಲ್ಲ. ಜುಡಿಶಿಯರಿಯಿಂದ ಹಾಕುವುದರ ಜೊತೆಗೆ ವ್ಯವಹಾರಗಳನ್ನು ಇಂತಿಷ್ಟೇ ದಿವಸದಲ್ಲಿ ಬಗೆಹರಿಸಬೇಕು; ಎಂದು ವ್ಯವಸ್ಥೆ ಮಾಡಬೇಕು. ಕೇಸ್ ಅಡ್ಜರ್ನ್ ಮಾಡಿ ಪೋಸ್ಟಾಂಗ್ ಮಾಡಿಕೊಂಡ ಹೋಗತಕ್ಕ ಹವ್ಯಾಸ ಇಲ್ಲದ ಹಾಗೆ ಪ್ರತಿಯೊಂದು ಕೇಸ್‌ನ್ನೂ ಇಂತಿಷ್ಟೇ ದಿವಸದಲ್ಲಿ ಬಗೆಹರಿಸಬೇಕು ಎನ್ನುವ ವ್ಯವಸ್ಥೆ ತಾವು ಮಾಡಬೇಕು. ಜ್ರೈಬ್ಯುನಲ್‌ನಲ್ಲಿ ಖಾಸಗಿ ಜನ ನೇಮಕಮಾಡುವಾಗ ರಾಜಕೀಯ ಜನ ಅಲ್ಲ ಎಂದು ಹೊಡಲು ಸೇರುತ್ತಾರೆ. ಅವರು ಸೇರಿದ ತಕ್ಷಣ ರಾಜಕೀಯ ಬರುತ್ತದೆ. ಹೀಗೆ ಮಾಡುವುದು ಒಳ್ಳೆಯದಲ್ಲ. ನಿಮ್ಮ ಘಾತು ಕೇಳುವ ಜನ ಹಾಕಿ, ಹಾಗೆಮಾಡು, ಹೀಗೆಮಾಡು ಎಂದು ಸೇಳಿ ಬಹುದು. ಆದರೆ ನಿಮ್ಮ ಸರ್ಕಾರವೇ ಇರುತ್ತದೆ ಎನ್ನುವ ನಂಬಿಕೆ ನಿಮಗೆ ಇದೆಯೇ? ನಾಳೆ ಎಂ. ಎಸ್. ಕೃಷ್ಣನ್ ಸರ್ಕಾರ ಬಂದರೆ, ಎಲ್ಲರನ್ನೂ ಸದೆಬಡಿದು ಮುಗಿಸಿ ಬಿಡುತ್ತಾರೆ.

ಶ್ರೀ ವಿ. ಎನ್. ಪಾಟೀಲ್.—ಕೇರಳದಲ್ಲಿ ಕಮ್ಯುನಿಸ್ಟ್ ಮುಖ್ಯ ಮಂತ್ರಿಗಳು ಇದ್ದಾರೆ. ಅವರು ಕಾಂಗ್ರೋ ಜನರನ್ನು ಎಲ್ಲ ಹೊಡೆ ಹಿಂಸಿದ್ದಾರೆಯೇ?

ಶ್ರೀ ಹೆಚ್. ಎಸ್. ಸಿದ್ದಪ್ಪ.—ಕೇರಳದಲ್ಲಿರುವ ಭೂಸುಧಾರಣೆ ತೆಗೆದುಕೊಂಡರೆ ಅದು ನಮ್ಮ ಭೂಸುಧಾರಣೆ ಕಾಯಿದೆಗಿಂತಲೂ ಉತ್ತಮವಾಗಿದೆಯೆಂದು ಕಮ್ಯುನಿಸ್ಟ್ ಒಪ್ಪಿಕೊಂಡಿದ್ದಾರೆ. ಕಾಲ ಬದಲಾಯಿಸಿದ ಹಾಗೆ ನೀವೂ ಬದಲಾಯಿಸಬೇಕಾಗಿ ಬರುತ್ತದೆ. ನಿಮ್ಮ ಪ್ರೊಟ್ ಸ್ಟ್ಯಾಗ್ ನೆಂಟ್ ಇಲ್ಲ.

ಶ್ರೀ ವಿ. ಎನ್. ಪಾಟೀಲ್.—ನಿಮ್ಮನ್ನು ಬದಲಾಯಿಸುತ್ತೇವೆ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ನಮ್ಮನ್ನು ಬದಲಾಯಿಸುವುದಕ್ಕೆ? ದೇವರೇ ರೈಲ್ವೆ ಸ್ಟೇಷನ್ನಿನಲ್ಲಿ ನಿನ್ನೆ ನಡೆದುದ್ದು ಗೊತ್ತಿದೆಯಲ್ಲ, ಜ್ರೈಬ್ಯುನಲ್‌ಗೆ ಜುಡಿಸಿಯರಿಂದ ಹಾಕುವುದು ಒಳ್ಳೆಯದು. ಅದನ್ನು ಬಲವಾಗಿ ಪ್ರತಿಪಾದನೆ ಮಾಡುತ್ತೇನೆ. ರಾಜಕೀಯ ಜನ ಹಾಕಬೇಡಿ, ಖಾಸಗಿ ಜನ ಹಾಕಬೇಡಿ. ಅವನ್ನು ಹಾಕುವುದರಿಂದ ನಿಮಗೆ ಕೆಟ್ಟ ಹೆಸರು ಬರುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕ ಅನ್ಯಾಯಗಳು ನಡೆದು ಖೂನಿ, ಹೊಡೆದಾಟ, ರಂಪವಾಗಿ ಶಾಂತಿ ಇರುವುದಿಲ್ಲ. ಹಿಂದೆ ಸ್ವಾತಂತ್ರ್ಯ ಪೂರ್ವ ಪಂಚಾಯತಿ ಕೋರ್ಟ್‌ಗಳು ತಾಲ್ಲೂಕು ಕಛೇರಿಗಳಲ್ಲಿದ್ದುವು. ಪಂಚಾಯತಿ ಕೋರ್ಟ್‌ಗಳಿಗೆ ಖಾಸಗಿ ಜನ ಮ್ಯಾಜಿಸ್ಟ್ರೇಟಾಗಿ ನೇಮಕ ಮಾಡುತ್ತಿದ್ದರು. ಖಾಸಗಿ ಜನರು ಪಂಚಾಯತಿ ಕೋರ್ಟ್‌ನಲ್ಲಿ ಏನು ಮಾಡುತ್ತಿದ್ದರು? ಒಂದು ಚೀಲ ರಾಗಿ, 20 ಕಾಯಿ ತೆಗೆದುಕೊಂಡು ನಾಳೆ ಬಾ, ಕೇಸ್ ಮುಗಿಸಿ ಕೊಡುತ್ತೇನೆ ಎಂದು ಹೇಳುತ್ತಿದ್ದರು. ಈಗ ಕಾಯಿ, ರಾಗಿ ತೆಗೆದುಕೊಂಡು ಬಾ ಅಂತ ಇಲ್ಲ. 25 ತೊಲ ಚಿನ್ನ ತೆಗೆದುಕೊಂಡು ಬಾ, 20,000 ರೂಪಾಯಿ ತೆಗೆದುಕೊಂಡು ಬಾ, ನಮ್ಮ ಮನೆ ಹೆಂಗಸರಿಗೆ ರೇಷ್ಮೆ ಸೀರೆ ತೆಗೆದುಕೊಂಡು ಬಾ ಎಂದು ಹೇಳುವ ಜ್ರೈಬ್ಯುನಲ್‌ಗಳಾಗುತ್ತವೆ. ಆದುದರಿಂದ ತಾವು, ಸರ್ಕಾರ ಒಂದು ಕಡಿವಾಣ ಏನು ಹಿಡಿದಿದ್ದೀರಿ, ಆ ಕಡಿವಾಣವನ್ನು ಧರ್ಮದ ಕಡಿವಾಣವನ್ನಾಗಿ ಮಾಡಿ. ಧರ್ಮದ ಹಾದಿಯ ಮೇಲೆ ನೀವು ತಂದಿರುವ ಭೂಸುಧಾರಣೆಯನ್ನು ಜಾರಿಮಾಡಿ. ಅಧರ್ಮದ ಹಾದಿ ಮೇಲೆ ಜಾರಿಮಾಡಬೇಡಿ ಎಂದು ಕಳಕಳಿಯಿಂದ ಮನವಿ ಮಾಡುತ್ತೇನೆ. ಹೆಚ್ಚಿಗೆ ಕಾಲ ತೆಗೆದುಕೊಂಡು ಹೊಸ ಅಧ್ಯಕ್ಷಣಿಯರ ಮನಸ್ಸು ನೋಯಿಸುವುದಕ್ಕೆ ನನಗೆ ಇಚ್ಛೆ ಇಲ್ಲ.

ಕೊನೆಯದಾಗಿ ನಾನು ಈ ಮೂರು ಅಂತಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಮೊದಲನೆಯದಾಗಿ ವಿಧವೆಯರು, ಅಬಲೆಯರು ಮತ್ತು ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ವಿನಾಯಿತಿ ಕೊಡಬೇಕು.

(ಶ್ರೀ ಹೆಚ್. ಎಸ್. ಸಿದ್ದಪ್ಪ)

ಎರಡನೆಯದಾಗಿ ಕಾಫಿ, ಏಲಕ್ಕಿ ಮುಕ್ತ ಇತರೇ ಬೆರೆ ಬೆರೆ ಪ್ಲಾಂಟೇಷನ್‌ಗಳಿಗೆ ಯಾವ ರೀತಿ ವಿನಾಯಿತಿ ಕೊಟ್ಟಿದ್ದೀರೋ ಅದರಂತೆ ಅಡಿಕೆ ಮತ್ತು ತೆಂಗು ಇವುಗಳಿಗೆ ವಿನಾಯಿತಿ ಕೊಡಬೇಕು.

ಮೂರನೆಯದಾಗಿ ಈವಾಗ ಪ್ರಿಬ್ಯೂನಲ್ಸ್ ಎಂದು ಏನು ರಚನೆ ಮಾಡುತ್ತೀರೋ ಆದಕ್ಕೆ ರಾಜಕೀಯದಿಂದ ಇರುವವರನ್ನು, ಖಾಸಗೀ ಜನರನ್ನು, ಸಬ್ ಡಿವಿಷನಲ್ ಆಫೀಸರ್‌ಗಳನ್ನೂ, ರೆವಿನ್ಯೂ ಅಧಿಕಾರಿಗಳನ್ನೂ ಹಾಕಬೇಡಿ, ನ್ಯಾಯಾಂಗದಲ್ಲಿಂತಕ್ಕ ಜಡ್ಜಸ್‌ಗಳನ್ನು ಹಾಕಿ ರಚನೆ ಮಾಡಿ. ಬೇರೆಯವರನ್ನು ಹಾಕಿ ಪಾಪ, ಕರ್ಮ ಇವುಗಳನ್ನು ಕಟ್ಟಿಕೊಳ್ಳುವುದಕ್ಕೆ ಕೈ ಹಾಕಬೇಡಿ ಎಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿ ಅಧ್ಯಕ್ಷಣಿಯವರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಬಿ. ಕೆಂಚೇಗೌಡ (ಕೃಷ್ಣರಾಜನಗರ).—ಮಾನ್ಯ ಅಧ್ಯಕ್ಷಣಿಯವರೇ, ಭೂ ಸುಧಾರಣೆ ವಿಚಾರವಾಗಿ 3-4 ದಿವಸದಿಂದಲೂ ಚರ್ಚೆ ನಡೆಯುತ್ತಾ ಇದೆ. ಈ ಭೂಸುಧಾರಣೆ ಕಾಯಿದೆಯನ್ನು ಜಾರಿ ಮಾಡುವುದಕ್ಕೋಸ್ಕರ ನುಮಾರು 25 ವರ್ಷಗಳಿಂದಲೂ ವಿಚಾರ ವಿನಿಮಯ ವಾಗಿ ಈವಾಗ ನಮ್ಮ ದೇಶದಲ್ಲಿ ಈ ಸಮಾಜವಾದವನ್ನು ಜಾರಿಗೆ ತರಬೇಕೆಂದು ಎಲ್ಲರ ಹೃದಯಾಂತರಾಳದಲ್ಲೂ ಇದೆ. ಈ ಒಂದು ವಿಚಾರವನ್ನು ಎಲ್ಲರೂ ಬಾಯಿಪಾಠ ಮಾಡಿದ್ದಾರೆ. ಈ ಬಗ್ಗೆ ಎಲ್ಲರೂ ಸೊಗಸಾದ ಭಾಷೆಯಲ್ಲಿ ಮಾತನಾಡಿದ್ದಾರೆ. ಈ ಸಮಾಜವಾದವನ್ನು ಜಾರಿಗೆ ತರುವಾಗ, ಇದನ್ನು ಪ್ರಯೋಗ ಮಾಡುವಾಗ ಎಲ್ಲರಿಗೂ ಒಂದೇ ಕಾಲದಲ್ಲೇ ಪ್ರಯೋಗ ಮಾಡಿ ಮಾಡುತ್ತಾರೆಯೇ ಎನ್ನುವುದು ಒಂದು ಸಂಶಯವಾದ ವಿಚಾರ. ಇದರ ಗುರಿ ಏನು? ಬಡತನಕ್ಕೂ ಸಿರಿತನಕ್ಕೂ ಇರುವ ಅಂತರವನ್ನು ಕಡಿಮೆ ಮಾಡಬೇಕು ಎಂಬುದು. ಎಲ್ಲರೂ ಸರಿಸಮಾನರಾಗಿ ಹೋಗಬೇಕೆನ್ನುವ ತಕ್ಕಂಥಾದ್ದು. ಈ ಒಂದು ಯೋಜನೆ ಹಾಕಿಕೊಂಡು ತಮ್ಮಲಕ ಸಮಾಜ ಸುಧಾರಣೆ ಮಾಡತಕ್ಕಂಥಾದ್ದು ಒಂದು ಮುಖ್ಯವಾದ ಗುರಿ. ಈವಾಗ ನಮ್ಮ ಇಂಡಿಯಾ ದೇಶದಲ್ಲಿ ಬಡತನಕ್ಕೂ ಸಿರಿತನಕ್ಕೂ ಬಹಳ ಅಂತರ ಇದೆ. ಅಂತರ ಯಾವರೀತಿ ಇದೆ ಎಂದರೆ ಒಂದು ಕಡೆ ಕೋಟ್ಯಾಂತರ ರೂಪಾಯಿ ಆಸ್ತಿ ಉಳ್ಳವರು ಇದ್ದಾರೆ. ಮತ್ತೊಂದು ಕಡೆ ಜನರು ಹೊತ್ತಿಗೆ ಇಲ್ಲದೆ, ಬತ್ತಿಗೆ ಇಲ್ಲದೆ ಇದ್ದಾರೆ. ಇಂತಹ ಒಂದು ಸಂದರ್ಭದಲ್ಲಿ ಇದು ಸುಧಾರಣೆಯಾಗಬೇಕಾದರೆ ಭೂಮಿಯಿಂದಲೇ ಶುರುವಾಗಬೇಕು. ಈ ಒಂದು ಪಾಠ ಎಲ್ಲಾ ದೇಶದಲ್ಲೂ ಶುರುವಾಗಿದೆ. ಆದುದರಿಂದ ನಾವೂ ಕೂಡ ಈ ಭೂಮಿಯಿಂದಲೇ ಶುರು ಮಾಡಬೇಕು ಎನ್ನುವ ಪಾಠ ಮಾಡುತ್ತಿದ್ದೇವೆ. ಈವಾಗ ಎಲ್ಲರೂ ಭಾಷಣ ಮಾಡಿದ್ದನ್ನು ಕೇಳಿದ್ದೇನೆ. ಇದರಲ್ಲಿ ಏನು ಕಾಣುತ್ತಾ ಇದೆ ಎಂದರೆ ಬೂಮಾಲೀಕರಲ್ಲಿ ಎಲ್ಲ ಐಶ್ವರ್ಯಗಳೂ ಕೇಂದ್ರೀಕೃತವಾಗಿದೆ. ಆ ರೀತಿ ಕೇಂದ್ರೀಕೃತವಾಗಿರುವಂಥ ಐಶ್ವರ್ಯವನ್ನು ಭೂಮಿ ಇಲ್ಲದವರಿಗೆ ಹಂಚಬೇಕಾದ್ದು ಬಹಳ ಮುಖ್ಯವಾದ ಗುರಿ. ಈ ಒಂದು ಪಾಠವನ್ನು ನಾವು ಇಲ್ಲಿ ಮಾಡುತ್ತಾ ಇದ್ದೇವೆ. ಈ ವಿಚಾರವನ್ನು ನಾವು 25 ವರ್ಷದಿಂದಲೂ ಹೇಳುತ್ತಾ ಇದ್ದೇವೆ. ಈವಾಗ ನಾವು ಪಾಪ ಮಾಡುತ್ತಾ ಇರುವುದು ದೊಡ್ಡ ದೊಡ್ಡ ಜಮೀನ್ದಾರರ ಪ್ರಶ್ನೆ ಅಲ್ಲ, ಅಥವಾ ಒಬ್ಬ ಏನಾಂದಾರರ ಪ್ರಶ್ನೆ ಅಲ್ಲ, ಅಥವಾ ಸೂವಿರಾರು ಎಕರೆ ಜಮೀನನು ಉಳ್ಳಂಥಾವರ ಪ್ರಶ್ನೆ ಅಲ್ಲ, ಈಪೊತ್ತು ನಮ್ಮಮುಂದೆ ಇರತಕ್ಕಂಥ ಪ್ರಶ್ನೆ ಕೇವಲ 100 ಎಕರೆ ಜಮೀನನ್ನು ಇಟ್ಟುಕೊಂಡಿರತಕ್ಕಂಥಾವರ ವಿಚಾರದಲ್ಲಿ ಮಾತನಾಡುತ್ತಿದ್ದೇವೆ. ಈ ಒಂದು ಶಾಸನಸಭೆಗೆ ಪ್ರತಿನಿಧಿಗಳಾಗಿ ಬಂದಿರತಕ್ಕಂಥಾವರು 100ಕ್ಕೆ 80 ಜನ ಆದಂಥಾ ವ್ಯವಸಾಯಗಾರನಿಂದಲೇ ಆರಿಸಿ ಬಂದಿರತಕ್ಕಂಥಾವರು; ಆದುದರಿಂದ ಈಪೊತ್ತು ಅವನ ಬಗ್ಗೆ ವಿಚಾರ ಮಾಡಬೇಕು. ಈಪೊತ್ತಿನ ದಿವಸ ವ್ಯವಸಾಯಗಾರನ ಸ್ಥಿತಿ ಬಹಳ ಚನ್ನಾಗಿದೆಯೇ? ಉತ್ತಮಗೊಂಡಿದೆಯೇ? ಹೇಗಿದೆ? ದೊಡ್ಡ ವ್ಯವಸಾಯಗಾರನ ಸ್ಥಿತಿ ಏನಾಗಿದೆ? ಸಣ್ಣಪುಟ್ಟ ವ್ಯವಸಾಯಗಾರನ ಸ್ಥಿತಿ ಏನಾಗಿದೆ? ವ್ಯವಸಾಯವನ್ನೇ ಅವಲಂಬಿಸಿಕೊಂಡಿರತಕ್ಕಂಥ ಕೂಲಿಗಾರರ ಸ್ಥಿತಿ ಏನಾಗಿದೆ? ಎನ್ನತಕ್ಕ ವಿಚಾರವನ್ನು ಯೋಚನೆ ಮಾಡಿ ಆಮೇಲೆ ಮುಂದೆ ಒಂದೆರಡು ಮಾತನಾಡಲಿಕ್ಕೆ ಯೋಚನೆ ಮಾಡುತ್ತೇನೆ. ಈಪೊತ್ತಿನ ದಿವಸ ಇದು ಎಲ್ಲರಿಗೂ ಅರಿವಾಗಿರತಕ್ಕಂಥ ವಿಚಾರ. ಎಲ್ಲರಿಗೂ ಹಳ್ಳಿಯ ಜೀವನ ಗೊತ್ತಿಲ್ಲದೇ ಇಲ್ಲ. ಹಳ್ಳಿಯ ಜೀವನ ಹೇಗಿದೆ ಎಂದರೆ ವ್ಯವಸಾಯಗಾರನಿಗೆ ಮಾತ್ರ ಯಾವ ವಿಧವಾದ ರಕ್ಷಣೆಯೂ ಇಲ್ಲ. ಈಪೊತ್ತಿನ ದಿವಸ ವ್ಯವಸಾಯಗಾರನ ವೃತ್ತಿ ಲಾಭದಾಯಕವಾಗಿಲ್ಲ. ಇದು ನಿರ್ವಿವಾದ ವಿಚಾರ. ಇದು ಎಲ್ಲರೂ ಒಪ್ಪತಕ್ಕಂಥ ವಿಚಾರ. ಇದಕ್ಕೆ ಕಾರಣಗಳೂ ಅನೇಕ ಇವೆ. ಹಿಂದೆ ಏನಾಯಿತು ಎಂದರೆ ಈ ಒಂದು ವರ್ಗವನ್ನು ಮಾಡಿದರಲ್ಲಾ ಅಂದರೆ ಶೂದ್ರರ ವರ್ಗ, ವ್ಯಾಪಾರ ವರ್ಗ, ರಾಜರ ವರ್ಗ, ಮಂತ್ರಿಗಳ ವರ್ಗ, ಈ ರೀತಿ

ವರ್ಗ ಮಾಡುವಾಗ ವ್ಯವಸಾಯಗಾರ ಎನ್ನುವ ಒಂದು ವರ್ಗವನ್ನೇ ಬೇರೆ ಮಾಡಿಬಿಡಿ. ಅಂದರೆ ಈ ವ್ಯವಸಾಯ ಮಾಡಬೇಕಾದರೆ ಯಾವನಾದರೂ ಮಾಡಬಹುದು, ಅವನು ಬುದ್ಧಿವಂತನಾಗ ಬೇಕಾಗಿಲ್ಲ, ಯಾವನು ದಡ್ಡ ಬೇಕಾದರೂ ಮಾಡಬಹುದು ಎಂದು. ಇದರಿಂದ ದಡ್ಡರು ವ್ಯವ ಸಾಯ ಮಾಡುತ್ತಾರೆ ಎನ್ನುವ ಒಂದು ಭಾವನೆ ಬಂದಿದೆ. ಇದಕ್ಕೆ ಒಂದು ಕಾರಣವೂ ಇದೆ. ಮೊದಲು ಭೂಮಿ ಫಲವತ್ತಾಗಿತ್ತು. ಮಳೆ ಕಾಲಕ್ಕೆ ಸರಿಯಾಗಿ ಯಥೇಚ್ಛವಾಗಿ ಬರುತ್ತಿತ್ತು. ಆವಾಗ ಯಾವ ರೀತಿಯಾಗಿ ಬೆಳೆ ಮಾಡಿದರೂ ಬೆಳೆ ಚೆನ್ನಾಗಿ ಆಗುತ್ತಿತ್ತು. ಅದೂ ಅಲ್ಲದೆ ಆವಾಗ ಜನಸಂಖ್ಯೆಯೂ ಕಡಿಮೆ ಇತ್ತು. ಈಗಿನಷ್ಟು ಆಹಾರದ ಕೊರತೆ ಇರಲಿಲ್ಲ, ಅಲ್ಪಸ್ವಲ್ಪ ಬೆಳೆದರೂ ಸಂಮೃದ್ಧಿಯಾಗಿರುತ್ತಿತ್ತು. ಆದರೆ ಈವಾಗ ಜನಸಂಖ್ಯೆಯೂ ಜಾಸ್ತಿ, ಬೆಳೆಯೂ ಕಡಿಮೆ. ಆದುದ ರಿಂದ ಇದನ್ನು ಯಾವರೀತಿಯಾಗಿಯಾದರೂ ಮಾಡಿ ನಮ್ಮ ದೇಶದಲ್ಲಿ ಹೆಚ್ಚು ಆಹಾರ ಬೆಳೆದು ಸ್ವಯಂ ಪರಿಪೂರ್ಣತೆಯನ್ನು ಮಾಡಬೇಕಾದರೆ ಸ್ವಲ್ಪ ಬದಲಾವಣೆ ಆಗಬೇಕಾಗಿದೆ. ಈಪೊತ್ತು ಹಳ್ಳಿ ಯಲ್ಲೇ ಕೆಲವರು ಹೇಳುತ್ತಾರೆ ಏನೆಂದರೆ ವ್ಯವಸಾಯ ಮಾಡುವವರು ಮ್ಯಾನೇಜ್‌ಮೆಂಟ್ ಮಾಡು ವುದು ಸರಿಯಾದ ರೀತಿಯಲ್ಲಿ ಇಲ್ಲ ಎಂದು. ಉದಾಹರಣೆ ಹೇಳಬೇಕಾದರೆ ಬ್ರೊತ್ತು ಪಟ್ಟಣದಲ್ಲಿ ರುವ ಒಂದು ಬಟ್ಟೆ ಮಿಲ್ ತೆಗೆದುಕೊಳ್ಳೋಣ. ಆ ಮಿಲ್ ಮಾಲೀಕ ಏನು ಮ್ಯಾನೇರಿಯಟ್ ಇಟ್ಟುಕೊಂಡಿ ರುತ್ತಾರೋ, ಸ್ಕಿಲ್ಡ್ ಲೇಬರ್ ಏನು ಇಟ್ಟುಕೊಂಡಿರುತ್ತಾರೋ ಅದಕ್ಕೆ ಸರಿಯಾಗಿ ಒಂದು ವರ್ಷಕ್ಕೆ ಆಗುವಷ್ಟು ಹತ್ತಿಯನ್ನು ಒದಗಿಸಿ ಇಟ್ಟುಕೊಡಿರುತ್ತಾನೆ. ಅವನು ಅವಕ್ಕೆಲ್ಲಾ ಖರ್ಚು ಕಂದಾಚಾರ ಹಾಕಿ, ಅವನು ತೆಗೆದು ಕೊಂಡಿರತಕ್ಕಂಥ ಹಣಕ್ಕೆ ಬಡ್ಡಿ, ಕವನ ರೂಪ ಇವೆಲ್ಲಾ ಲೆಕ್ಕಾಚಾರ ಹಾಕ ಸರಿಯಾದ ರೀತಿಯಲ್ಲಿ ಆ ಮಿಲ್ಲನ್ನು ನಡೆಸುತ್ತಾನೆ. ಆದರೆ ವ್ಯವಸಾಯಗಾರನ ಸ್ಥಿತಿ ಹಾಗಿಲ್ಲ. ಅವನಿಗೆ ಸರಿಯಾದ ಸಿಬ್ಬಂದಿ ಇಲ್ಲ. ಉದಾಹರಣೆಗೆ ಈವೊತ್ತು ಹಳ್ಳಿಯಲ್ಲಿ ಇರತ ಕ್ಕಂಥ ವ್ಯವಸಾಯವನ್ನು ಅವಲಂಬಿಸಿಕೊಂಡಿರತಕ್ಕಂಥ ಕೂಲಿಗಾರರು ಏನು ಇದ್ದಾರೋ ಕೊನೇ ದರ್ಜೆ ಇರತಕ್ಕಂಥಾವರನ್ನು ತೆಗೆದುಕೊಳ್ಳೋಣ. ಈವೊತ್ತು ಅವರು ಚೆನ್ನಾಗಿ ಕೆಲಸ ಮಾಡಿದರೆ ಶ್ರಮಪಟ್ಟು ದುಡಿದರೆ ನಾವು ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಉತ್ಪಾದನೆ ಮಾಡುವುದಕ್ಕೆ ಸಾಧ್ಯ ಇದೆ. ಆದರೆ ಈವೊತ್ತು ಹಳ್ಳಿಯಲ್ಲಿ ಏನಾಗಿದೆ ಎಂದರೆ ವ್ಯವಸಾಯವನ್ನು ಅವಲಂಬಿಸಿಕೊಂಡಿರತಕ್ಕಂಥ 30 ಪರ್ಸೆಂಟು ಕೂಲಿಗಾರರಿಗೆ ಹೊಟ್ಟೆಬಟ್ಟೆಗೆ ಏನೂ ಇಲ್ಲ, ಸರಿಯಾಗಿ ಆಹಾರ ಪದಾರ್ಥವೇ ಇಲ್ಲ ದಂತಾಗಿದೆ. ಇವೊತ್ತು ಯಾವನಾದರೂ ಒಬ್ಬ ಮಧ್ಯಮ ದರ್ಜೆಯ ವ್ಯವಸಾಯಗಾರನ ಮನೆಗೆ ಕೂಲಿಗೆ ಹೋಗಬೇಕಾದರೆ ಅವನು 3 ದಿವಸದಿಂದಲೂ ಊಟವೇ ಮಾಡಿರುವುದಿಲ್ಲ. ಯಾವನಾದರೂ ಕೂಲಿಗೆ ಹೋಗುವವನಿಗೆ ಮನೆಯಲ್ಲಿ ತಿನ್ನುವುದಕ್ಕೆ ಕೊಡಲು ವಿನಾದರೂ ಆಹಾರವನ್ನು ಕೊಟ್ಟರೆ ಅವನಿಗೆ ಸ್ವಲ್ಪ ಶಕ್ತಿ ಕೂಡಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಹೊತ್ತು ರೇಷನಿಂಗ್ ಕಾಲ. ಪಟ್ಟಣಗಳಲ್ಲಿರುವ ಕೂಲಿಕಾರರಿಗೆ ಆಹಾರವಿಲ್ಲ, ಒದಗಿಸಬೇಕು, ಪಡಿತರ ಕೊಡಬೇಕು ಎಂದು ವಾದಿಸುತ್ತೇವೆ. ಹಳ್ಳಿಯಲ್ಲಿರುವ ವ್ಯವಸಾಯ ಕೂಲಿಕಾರನಿಗೆ ರೇಷನ್ ಕೊಡುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ? ಅವನಿಗೆ ಆಹಾರವನ್ನು ಒದಗಿಸುವುದಕ್ಕೆ ಏನಾದರೂ ಮಾಡಿದ್ದೀರಾ?

4-00 P. M.

ಸುಮಾರು 25 ಪರ್ಸೆಂಟ್ ರೈತರ ಮನೆಗಳಲ್ಲಿ ಯುಗಾದಿ ಹಬ್ಬ ಬರುವುದರೊಳಗಾಗಿ ದಿನಸಿ ಏನೂ ಇರುವುದಿಲ್ಲ. 50 ಪರ್ಸೆಂಟ್ ಜನರ ಮನೆಗಳಲ್ಲಿ ಜುಲೈ ತಿಂಗಳ ಹೊತ್ತಿಗೆ ಏನೂ ಇರುವುದಿಲ್ಲ, ಡಿಸೆಂಬರ್ ತಿಂಗಳ ವೇಳೆಗೆ ಎಲ್ಲರ ಮನೆಗಳಲ್ಲಿಯೂ ಏನೂ ಇರುವುದಿಲ್ಲ. ಅಂದರೆ ಹಳ್ಳಿಗಾಡಿ ನಲ್ಲಿರುವ ರೈತರು ಹೊಟ್ಟೆಗೆ ಬಟ್ಟೆಗೆ ಇಲ್ಲದೆ ಇರುವವರು. ಯಾರೋ ಒಬ್ಬಿಬ್ಬರು ಮನೆಯಲ್ಲಿ ಸ್ವಲ್ಪ ಧಾನ್ಯವನ್ನು ಇಟ್ಟುಕೊಂಡಿರಬಹುದು. ಆದುದರಿಂದ ವ್ಯವಸಾಯದಲ್ಲಿ ಸುಧಾರಣೆ ಮಾಡು ತ್ತೇವೆ, ಭೂ ಸುಧಾರಣೆ ತರುತ್ತೇವೆ, ಬಡವನಿಗೆ ಕೊಡುತ್ತೇವೆಂದು ಹೇಳುವುದು ತಿರುಕನಿಂದ ಕಿತ್ತುಕೊಂಡು ಮತ್ತೊಬ್ಬನಿಗೆ ಕೊಟ್ಟ ಹಾಗೆ ಆಗುತ್ತದೆ.

ವ್ಯವಸಾಯ ಪ್ರಗತಿಯನ್ನು ಹೊಂದದೆ ಇರುವುದಕ್ಕೆ ಕಾರಣವೇನೆಂದರೆ ಯಾವ ವ್ಯವಸಾಯ ಗಾರನೇ ಆಗಲೀ ವ್ಯವಸಾಯ ಮಾಡಬೇಕಾದರೆ ಏನೇನು ಸಲಕರಣೆಗಳು ಬೇಕೋ ಅದನ್ನು ಸರಿಯಾಗಿ ಹೊಂದಿರುವುದಿಲ್ಲ. ಅನೇಕರ ಹತ್ತಿರ ಕುಡುಗೋಲು ಇರುವುದಿಲ್ಲ; ನೇಗಿಲು ಇರು ವುದಿಲ್ಲ. ಎತ್ತುಗಳು ಇರುವುದೇ ಇಲ್ಲ. ಸರಿಯಾದ ವ್ಯವಸಾಯ ಉಪಕರಣಗಳನ್ನು ಇಟ್ಟು ಕೊಂಡಿರುವ ರೈತರು ಕೆಲವೇ ಮಂದಿ. ಅದರ ಜೊತೆಗೆ ಬೀಜ ಮುಂತಾದುವನ್ನು ಯಾರೂ ಒದಗಿಸಿಟ್ಟುಕೊಂಡಿರುವುದಿಲ್ಲ. ಈ ಹೊತ್ತು ವ್ಯವಸಾಯ ಇಲಾಖೆಯ ಅಧಿಕಾರಿಗಳು ತಮ್ಮ ಆಫೀಸಿನಲ್ಲಿ ಕುಳಿತುಕೊಂಡು ಒಂದು ಎಕರೆಯಲ್ಲಿ 50 ಕ್ವಿಂಟಾಲ್, 100 ಕ್ವಿಂಟಾಲ್ ಬೆಳೆಯು

(ಶ್ರೀ ಹೆಚ್. ಬಿ. ಕೆಂಚೇಗೌಡ)

ಬಹುದು ಎಂದು ಹೇಳುವುದೆಲ್ಲ ಜೋಗಸ್, ಸುಳ್ಳು. ಯಾವ ಜಮೀನಿನಲ್ಲಿಯೂ 20—25 ಕ್ವಿಂಟಾಲಿಗಿಂತ ಬೆಳೆಯುವುದು ಕಷ್ಟವಾಗಿದೆ.

ವ್ಯವಸಾಯದಲ್ಲಿ ಗ್ಯಾರಂಟಿ ಇಲ್ಲ. ಅತಿವೃಷ್ಟಿ ಅಥವಾ ಅನಾವೃಷ್ಟಿಯಿಂದ ಬೆಳೆ ನಷ್ಟವಾಗುತ್ತದೆ. ಈ ಹೊತ್ತು ಕ್ಷಾಮ ಡಾಮರಗಳಿವೆ. ಅಧಿಕಾರಿಗಳಿಗೆ ಪ್ರತಿ ತಿಂಗಳೂ ಸಂಬಳ ಬರುತ್ತದೆ, ವ್ಯಾಪಾರಸ್ಥರು ವ್ಯಾಪಾರದಿಂದ ಸಂಪಾದನೆ ಮಾಡುತ್ತಾರೆ, ಕೈಗಾರಿಕೆಗಳನ್ನು ಹೊಂದಿರುವವರು ಸಂಪಾದನೆ ಮಾಡುತ್ತಿರುತ್ತಾರೆ, ಆದರೆ ಕ್ಷಾಮ ಡಾಮರಗಳ ಹೊಡೆತ ರೈತನಿಗೆ ಮಾತ್ರ ಬೀಳುತ್ತಿರುತ್ತದೆ. ಯಾವುದೇ ವ್ಯತ್ಯಯವನ್ನು ಮಾಡಬೇಕಾದರೂ ಜ್ಯೋನಿಂಗ್ ಕೊಡುತ್ತಾರೆ. ಕೈಗಾರಿಕೆ ಮಾಡಬೇಕಾದರೆ, ಮರಗೆಲಸ ಮಾಡಬೇಕಾದರೆ, ಕಲ್ಲಿನ ಕೆಲಸ ಮಾಡಬೇಕಾದರೆ ಅವನಿಗೆ ಕೆಲವು ವರ್ಷಗಳ ತರಬೇತಿಯನ್ನು ಕೊಡುತ್ತಾರೆ, ಸ್ಕಿಲ್ಡ್ ಲೇಬರ್ ಎಂದು ಹೇಳುತ್ತಾರೆ. ವ್ಯವಸಾಯಗಾರನಿಗಾಗಲೀ, ವ್ಯವಸಾಯ ಕೂಲಿಕಾರನಿಗಾಗಲೀ ಯಾವ ತರಬೇತಿಯೂ ಇರುವುದಿಲ್ಲ. ವ್ಯವಸಾಯ ಇವತ್ತಾಜೆಯಿಂದ ಹೈಬ್ರಿಡ್ ಭತ್ತ ಬೆಳೆಯುವ ವಿಧಾನವನ್ನು ಹೇಳುವುದರಲ್ಲಿ ಆರು ಅಂಗುಲ ಉದ್ದ, ನಾಲ್ಕು ಅಂಗುಲ ಅಗಲ ಬರುವಂತೆ ಪ್ಯೌರಿ ನಾಟ ಹಾಕಬೇಕೆಂದು ಹೇಳುತ್ತಾರೆ. ಆ ರೀತಿ ನಾಟ ಹಾಕತಕ್ಕ ತಯಾರಿಕೆ ಯಾರಿಗೂ ಕೊಟ್ಟಿರುವುದಿಲ್ಲ ಮತ್ತು ನಮ್ಮ ಅನುಭವದಲ್ಲಿ ಯಾರೂ ಆ ರೀತಿ ನಾಟ ಹಾಕುವವರು ಇರುವುದಿಲ್ಲ. ಇದರಿಂದ ವ್ಯವಸಾಯ ದುಸ್ಥಿತಿಯಲ್ಲಿದೆ. ನಾನು ಇದನ್ನೆಲ್ಲ ಮಾತನಾಡುವಾಗ ದೊಡ್ಡ ದೊಡ್ಡವರ ವಿಚಾರ ಮಾತನಾಡುತ್ತಿಲ್ಲ. ಮಧ್ಯಮ ದರ್ಜೆ ವ್ಯವಸಾಯಗಾರನ ವಿಚಾರ ಮಾತನಾಡುತ್ತಿದ್ದೇನೆ. ಭೂ ಸುಧಾರಣೆ ಮಾಡುವುದಕ್ಕೆ ಹೊರಟಿರುವುದರಲ್ಲಿ ಕಾಫಿ ಮತ್ತು ಟೀ ಪ್ಲಾಂಟೇಷನ್‌ಗಳಿಗೆ ವಿನಾಯಿತಿ ಕೊಟ್ಟಿದ್ದಾರೆ. ಸಾವಿರಾರು ಎಕರೆ ಇದ್ದರೂ ಅವರಿಗೆ ವಿನಾಯಿತಿ ಇದೆ. ಆದರೆ ಹತ್ತಿಪ್ಪತ್ತು ಎಕರೆ ಜಮೀನು ಇಟ್ಟುಕೊಂಡಿರುವವರಿಗೆ ವಿನಾಯಿತಿ ಇಲ್ಲ, ಇವನಿಗೆ ಮಾತ್ರ ಸೀಲಿಂಗ್. ಕೋಟ್ಯಾಧೀಶ್ವರರು ಎಷ್ಟು ಜಮೀನಾದರೂ ಬೆಳೆದುಕೊಂಡು ಹೋಗಬಹುದು, ಆದರೆ ಮಧ್ಯಮ ದರ್ಜೆ ರೈತ ಇದ್ದ ಹಾಗೆಯೇ ಇರಬೇಕು.

ಸ್ವಲ್ಪ ದಿವಸಗಳಿಂದೀಚೆಗೆ ಹಳ್ಳಿಯಲ್ಲಿರುವ ರೈತ ಜೇತರಿಸಿಕೊಂಡು ಸ್ವಲ್ಪ ತಲೆ ಎತ್ತುತ್ತಿದ್ದಾನೆ ಅವನ ತಲೆ ಮೇಲೆ ತಟ್ಟಿ ಎಲ್ಲರನ್ನೂ ಒಂದೇ ಸಮ ಮಾಡುವುದಕ್ಕೆ ಹೊರಟ್ಟಿದ್ದಾರೆ, ಭೂ ಸುಧಾರಣೆ ಮಾಡುವ ಸಂದರ್ಭದಲ್ಲಿ ಈ ಎಲ್ಲ ವಿಚಾರಗಳನ್ನೂ ಗಮನದಲ್ಲಿಟ್ಟುಕೊಳ್ಳಬೇಕು. ಏತಕ್ಕೋಸ್ಕರ ಭೂ ಸುಧಾರಣೆಯನ್ನು ನಮ್ಮ ದೇಶದಲ್ಲಿ ಮಾಡಬೇಕು, ಅದರಿಂದ ಆಗತಕ್ಕ ಅನುಕೂಲಗಳು ಮತ್ತು ಅನಾನುಕೂಲತೆಗಳೇನು ? ಸೀಲಿಂಗ್ ಕತಿಮೆ ಮಾಡಿ ಒಂದೆರಡು ಲಕ್ಷ ಎಕರೆ ಜಮೀನು ಉಳಿಸಿ ಜಮೀನಿಲ್ಲದವರಿಗೆ ಕೊಟ್ಟರೆ ಭೂ ಸುಧಾರಣೆ ನೇರವಾಗಿ ಆಯಿತು, ಬಡತನ ನಿವಾರಣೆಯಾಯಿತು ಎಂದು ತಿಳಿದುಕೊಂಡರೆ ಅದು ಬುದ್ಧಿವಂತಿಕೆಯಲ್ಲ ಎಂದು ಹೇಳುತ್ತೇನೆ. ಎಲ್ಲರೂ ಭೂಮಿಯ ಮೇಲೆ ಅವಲಂಬಿಸುವುದಾದರೆ ಭೂ ಸುಧಾರಣೆಯನ್ನು ನಾವು ಕಾರ್ಯಗತ ಮಾಡಬಹುದೇ ವಿನಾ ಯಾವುದೋ ಒಂದು ದೃಷ್ಟಿಯಿಂದ ಭೂ ಸುಧಾರಣೆ ಮಾಡುತ್ತೇವೆಂದರೆ ಉತ್ತಮವಾಗಲಾರದು. ಇರುವ ಜಮೀನನ್ನು ಹಂಚಿ ವ್ಯವಸಾಯಕ್ಕೆ ಕೊಟ್ಟರೆ ಸುಧಾರಣೆಯಾಯಿತು, ದೇಶದ ಪರಿಸ್ಥಿತಿ ಸುಧಾರಿಸುತ್ತದೆ ಎನ್ನುವುದು ತಪ್ಪಾಗುತ್ತದೆ. ಎಷ್ಟು ಜಮೀನಿದೆ ಅಷ್ಟನ್ನೂ ವ್ಯವಸಾಯಕ್ಕೆ ಉಪಯೋಗಿಸುವುದಕಾಗುವುದಿಲ್ಲ. ಜಮೀನಿನಲ್ಲಿ ಅನುಭವ ಇರುವವರು ಕೆಲವರಿರಬಹುದು. ಜಮೀನಿಗೆ ಆ ಕಡೆ ಈ ಕಡೆ ಇರತಕ್ಕ ಜಮೀನು ಒರವು ಎಂದು ಸೀಪೇಜ್ ವಾಟರ್ ಹೋಗುವುದಕ್ಕೆ ಕಾಲುವೆ ತೆಗೆದಿರುತ್ತಾರೆ. ಅದು ಏಕೆ ಎಂದರೆ ಜಮೀನಿನಲ್ಲಿ ನಡುಕಾಲ ನೀರು ನಿಂತರೆ ಮಾಷ್ ಆಗುತ್ತದೆ. ನಡುಕಾಲ ನೀರು ನಿಂತರೆ ಜಮೀನು ಪ್ರತ್ಯೋಜನಕ್ಕೆ ಬರುವುದಿಲ್ಲ. ಕೆಲವೆರಡು ದುರಾಸೆಯಿಂದ ಅದನ್ನು ಒತ್ತುವರಿ ಮಾಡಿಕೊಂಡು ಬಂದು ಕೊನೆಗೆ ಅದು ಮುಚ್ಚಿಕೊಂಡು ಹೋಗುತ್ತದೆ. ಒಂದೆರಡು ಅಡಿ ಜಮೀನಿಗೋಸ್ಕರ ತನ್ನ ಪೂರ್ತಿ ಜಮೀನನ್ನು ಹಾಳು ಮಾಡಿಕೊಳ್ಳುತ್ತಾರೆ. ಆ ರೀತಿಯಾಗಿ ನಾವು ಈ ಸುಧಾರಣೆಯನ್ನು ಪೂರ್ತಿಯಾಗಿ ವಿಚಾರದಲ್ಲಿ, ಯಾವ ರೀತಿಯಲ್ಲಾದರೂ ಇನ್ನೊಬ್ಬರಿಂದ ಜಮೀನು ಕಿತ್ತುಕೊಂಡು ಮತ್ತೊಬ್ಬರಿಗೆ ಕೊಡುವುದರಿಂದ ಸುಧಾರಣೆಯಾಗುತ್ತದೆ ಎಂದು ತಿಳಿದುಕೊಂಡರೆ ತಪ್ಪಾಗುತ್ತದೆ ಎಂದು ಹೇಳುತ್ತಿದ್ದೇನೆ. ದೂರದೃಷ್ಟಿಯಿಂದ ನಾವು ಭೂ ಸುಧಾರಣೆಯನ್ನು ಮಾಡಬೇಕು.

ಪ್ಲೈಜ್ಞಾನಿಕರು ಹೇಳುವಂತೆ 35 ಪರ್ಸೆಂಟ್ ಕಾಡು ಇರಬೇಕು. ಎಂದರೆ ಆಗ ನತತ ಪಾಗಿ ಮಳೆ ಬೀಳುತ್ತದೆ ಎನ್ನುವ ತತ್ವವಿರುತ್ತದೆ. ಅದಕ್ಕಾಗಿ ಏನು ಯೋಚನೆ ಮಾಡಿದ್ದಾರೆ ? ಇರುವ ಜಮೀನೆಲ್ಲವನ್ನೂ ವ್ಯವಸಾಯಕ್ಕೆ ಉಪಯೋಗಿಸಿಬಿಟ್ಟರೆ ಮರಗಳನ್ನು ಬೆಳೆಸು

ವುದಕ್ಕೆ, ಕಾಡನ್ನು ಹೆಚ್ಚು ಮಾಡುವುದಕ್ಕೆ ಹೇಗೆ ಆಗುತ್ತದೆ! ಅದಕ್ಕಾಗಿಯೇ ನಿಂದೆ ನಮ್ಮ ದೇಶದಲ್ಲಿ ಪ್ರತಿಯೊಂದು ಊರಿನಲ್ಲಿಯೂ ತೋಪುಗಳನ್ನು ಬೆಳೆಸುತ್ತಿದ್ದರು. ತೋಪುಗಳನ್ನು ಬೆಳೆಸುತ್ತಿದ್ದು ದರಿಂದ ಮಳೆ ಬರುವುದಕ್ಕೆ ಮತ್ತು ತನ್ಮೂಲಕ ಬೆಳೆಗಳು ಆಗುವುದಕ್ಕೆ ಸಹಾಯಕವಾಗುತ್ತಿತ್ತು. ಇದರ ಬಗ್ಗೆ ಏನೂ ಯೋಚನೆ ಮಾಡುತ್ತಿಲ್ಲ.

[Mr. DEPUTY SPEAKER in the Chair]

ಇಪ್ಪೊತ್ತು ಎಲ್ಲ ಭೂಮಿಯನ್ನೂ ತೆಗೆದುಕೊಂಡು ಪೂರ್ತಿ ಹಂಚಬೇಕು ಎಂದು ಹೇಳುವುದು ಸರಿಯಾದುದಲ್ಲ. ಭೂಮಿಯ ಮೇಲೆಯೇ ಅವಲಂಬನೆ ಮಾಡುತ್ತಿರುವವರು ಅವರ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಬೇಕು ಹಾಗೂ ಇನ್ನಿತರ ಕೆಲಸಗಳಿಗೂ ಗಮನ ಕೊಡಬೇಕು ಎಂದು ಈ ರೀತಿ ಸುಧಾರಣೆ ಮಾಡುವಾಗ ಇದರ ಬಗ್ಗೆ ಇರುವ ಎಲ್ಲ ವಿಚಾರಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ನಾವು ಇಂತಹ ಒಂದು ಭೂಸುಧಾರಣೆಯನ್ನು ಮಾಡಬೇಕಾಗುತ್ತದೆ. ವ್ಯವಸಾಯ ಮಾಡುವವನಿಗೆ ಬೇಕಾಗುವ ಎಲ್ಲ ರೀತಿಯ ಅನುಕೂಲಗಳನ್ನೂ ಮಾಡಿಕೊಡಬೇಕು ಮತ್ತು ಅವರಿಂದ ಹೆಚ್ಚು ಬೆಳೆ ಪಡೆಯಬೇಕಾಗಿರುವಾಗ ಅವರಿಗೆ ಮುಖ್ಯವಾಗಿ ಬೇಕಾಗುವ ಎಲ್ಲ ಸೌಕರ್ಯಗಳನ್ನೂ ಒದಗಿಸಿಕೊಡಬೇಕು. ಇದು ಬಹು ಮುಖ್ಯವಾದ ವಿಚಾರ. ನಾವು ಈ ಭೂಸುಧಾರಣೆ ಮಸೂದೆಯನ್ನು ಇಲ್ಲಿ ನೋಡಿದರೆ ಇದರಲ್ಲಿ ಅಂತಹ ಯಾವ ಮುಖ್ಯ ಅಂಶವೂ ನಮಗೆ ಕಂಡುಬರುತ್ತಿಲ್ಲ. ಜಾಯಿಂಟ ಸೆಲೆಕ್ಟ್ ಕಮಿಟಿಯವರು ಕೂಡ ಇದರಲ್ಲಿ ಕೆಲವರಿಗೆ ಎಕ್ಸ್‌ಂಪ್‌ಷನ್ ಕೊಡಬೇಕೆಂದು ಅಲ್ಲಿ ಇಲ್ಲಿ ಸ್ವಲ್ಪ ಹೇಳಿ ಅದರಂತೆ ಭೂಮಿಯ ಸುಧಾರಣೆ ಮಾಡಿದರೆ ಎಲ್ಲ ಜನರಿಗೂ ಇದರಿಂದ ಅನುಕೂಲವಾಗುತ್ತದೆಯೇ ಇಲ್ಲವೇ ಎನ್ನುವುದನ್ನು ನಾವು ಇಲ್ಲಿ ಕೂಲಂಕಷವಾಗಿ ಯೋಚನೆ ಮಾಡಬೇಕು ಎಂದು ನಾನು ಇಲ್ಲಿ ಹೇಳಬಯಸುತ್ತೇನೆ.

ನಮ್ಮ ಮುಂದೆ ಜಾಯಿಂಟ ಸೆಲೆಕ್ಟ್ ಕಮಿಟಿಯವರು ಮಂಡಿಸಿರುವ ಭೂಸುಧಾರಣೆ ಮಸೂದೆ ಬಗ್ಗೆ ಏನೇನು ವಿಚಾರಗಳನ್ನು ಇಟ್ಟಿದ್ದಾರೋ ಅದರ ಬಗ್ಗೆ ನಾವು ಇಲ್ಲಿ ಕೂಲಂಕಷವಾಗಿ ವಿಚಾರ ಮಾಡಬೇಕಾಗಿದೆ. ಆ ವಿಚಾರ ಮಾಡುವುದಕ್ಕೆ ಪೂರ್ವಭಾವಿಯಾಗಿ ಇದರ ಬಗ್ಗೆ ಇಲ್ಲಿ ನ್ಯಾಯವಾಗಿ ಮಾತನಾಡಬೇಕು. ಮೊಟ್ಟಮೊದಲನೇಯದಾಗಿ ಈ ಭೂಸುಧಾರಣೆಯನ್ನು ಜಾರಿಗೆ ಕೊಡುವುದರಲ್ಲಿ ನಾವು ಯಾವ ಅಡ್ಡಿ ಆತಂಕವನ್ನೂ ಮಾಡಬಯಸುವುದಿಲ್ಲ. ನಾವು ಭೂಸುಧಾರಣೆಯನ್ನು ಜಾರಿಗೆ ಕೊಡ್ಲೇ ಕೊಡಬೇಕು, ಇದನ್ನು ಜಾರಿಗೆ ಕೊಡುವುದಕ್ಕೆ ಪೂರ್ವಭಾವಿಯಾಗಿ ನಮಗೆ ಕೇಂದ್ರ ಸರಕಾರದವರು ಒಂದು ಕೈಗನ್ನಡಿಯನ್ನು ನಮಗೆ ಹಾಕಿ ಕೊಟ್ಟಿದ್ದಾರೆ. ಅಂತಹ ಗೈಡುಲೈನುಗಳನ್ನು ಹಾಕಿ ನಮಗೆ ಇಲ್ಲಿ ಒದಗಿಸಿಕೊಟ್ಟಿದ್ದಾರೆ. ಸೆಂಟ್ರಲ್ ಲ್ಯಾಂಡ್ ರಿಫಾರಂಸ್ ಕಮಿಟಿಯವರು ಏನೇನು ಗೈಡ್‌ಲೈನುಗಳನ್ನು ಹಾಕಿ ಕೊಟ್ಟಿದ್ದಾರೋ ಅದರ ಚೌಕಟ್ಟಿನಲ್ಲೇ ನಾವು ಈ ಸುಧಾರಣೆಯನ್ನು ಇಲ್ಲಿ ತಂದು ಜಾರಿಗೆ ಕೊಡಬೇಕಾಗಿದೆ. ನಾವು ಇದರ ಬಗ್ಗೆ ಏನು ಮಾತನಾಡಬೇಕಾದರೂ ಈ ಗೈಡ್ ಲೈನುಗಳ ಆಧಾರದ ಮೇಲೆಯೇ ಮಾತನಾಡಬೇಕು. ಜಾಯಿಂಟ ಸೆಲೆಕ್ಟ್ ಕಮಿಟಿಯವರೂ ಸಹ ಇದೇ ಪ್ರಕಾರ ವಿಚಾರ ಮಾಡಿ ಇಲ್ಲಿ ಇಂತಹ ಒಂದು ಮಸೂದೆ ತಂದಿದ್ದಾರೆ, ಇದರ ಬಗ್ಗೆ ನಾವು ಏನೇ ಟೀಕೆ ಮಾಡಿದರೂ ಸಹ ನಮ್ಮ ಪಾರ್ಟಿಯವರು ಇದರ ಬಗ್ಗೆ ಏನು ತೀರ್ಮಾನ ತೆಗೆದುಕೊಳ್ಳುತ್ತಾರೋ ಅದಕ್ಕೆ ನಾವೆಲ್ಲರೂ ಬದ್ಧರಾಗಿರಬೇಕಾಗುತ್ತದೆ ಎನ್ನುವ ವಿಚಾರವನ್ನೂ ಇಲ್ಲಿ ಹೇಳಬಯಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಇಲ್ಲಿ ಪಾರ್ಟಿಯವರು ತೆಗೆದುಕೊಳ್ಳುವುದಕ್ಕೂ ಇದಕ್ಕೂ ಏನು ಸಂಬಂಧವಿದೆ?

ಶ್ರೀ ಹೆಚ್. ಬಿ. ಕಂಚೇಗೌಡ.—ಶ್ರೀ ಕೋಣಂದೂರು ಲಿಂಗಪ್ಪನವರಿಗೆ ಇಂದರಿಂದೇನೂ ತೊಂದರೆಯಾಗುವುದಿಲ್ಲ. ಇದರಲ್ಲಿ ಎಲ್ಲರ ರಕ್ಷಣೆಯೂ ಆಗುತ್ತದೆ, ಇಲ್ಲಿ ಭೂಸುಧಾರಣೆ ಬಗ್ಗೆ ಮಾತನಾಡುವಾಗ ನಿಷ್ಪಕ್ಷಪಾತವಾಗಿ ಹಾಗೂ ಪ್ರಾಮಾಣಿಕವಾಗಿ ನಾವು ಮಾತನಾಡಬೇಕಾಗಿದೆ. ಏಕಕ್ಕೂನೆಸ್ಕರ ಇದನ್ನು ಹೇಳುತ್ತಿದ್ದೇನೆಂದರೆ ನಮಗೆ ಕೇಂದ್ರ ಸರಕಾರದವರು ಏನು ಒಂದು ಗೈಡ್‌ಲೈನುಗಳನ್ನು ಕೊಟ್ಟಿರುತ್ತಾರೋ ಅದನ್ನು ಉಲ್ಲಂಘನೆ ಮಾಡದೆ ಅಲ್ಲಿ ಇಲ್ಲಿ ಕೆಲವು ಪಕ್ಷಗಳನ್ನು ಹೆಚ್ಚು ಕಡಿಮೆ ಮಾಡಬೇಕೆಂದು ಹೇಳುವ ವಿಚಾರವಲ್ಲ. ಉದಾಹರಣೆಯಾಗಿ ಹೇಳಬೇಕಾದರೆ ಇದರಲ್ಲಿ ಇರುವ ಡೆಫಿನಿಷನ್ ಬಗ್ಗೆ ಈ ರೀತಿ ಹೇಳಿದ್ದಾರೆ :

> "The Committee are of the opinion that (i) in the term 'family' instead of 'minor children', 'minor sons and

(ಶ್ರೀ ಹೆಚ್. ಬಿ. ಕೆಂಚೇಗೌಡ)

unmarried daughters' may be included; (ii) the definition of the term may be expanded so as to be illustrative covering alternative cases also. Accordingly, a new definition is suggested."

ಸೆಂಟ್ರಲ್ ಲ್ಯಾಂಡು ರಿಫಾರೆಂಸ್ ಕಮಿಟಿಯವರು ಹೇಳಿರುವುದು ಹೀಗಿದೆ :

"The best category of land in a State with assured irrigation and capable of yielding at least two crops a year should have a ceiling of 10 acres. This ceiling may increase up to 18 acres taking into account the fertility of the soil and other conditions."

ಕೇಂದ್ರದ ಲ್ಯಾಂಡು ರಿಫಾರೆಂಸ್ ಕಮಿಟಿಯವರು ಏನೊಂದು ಗೈಡುಲೈನ್ಸ್‌ಗಳನ್ನು ಕೊಟ್ಟಿದ್ದಾರೋ ಅದರ ಸರಿಮಿತಿಯೊಳಗೇ ಇಲ್ಲಿ ನಾವು ಪಾತನಾಡುತ್ತಿದ್ದೇವೆ. ಎರಡನೇದು ಇರಿಗೇಷನ್ ವಿಚಾರವಾಗಿ ಹೀಗೆ ಹೇಳಿದ್ದಾರೆ :

"The ceiling for a family of five members may be fixed within the range of 10 to 18 acres of perennially irrigated land or irrigated land capable of growing two crops."

ಎಂದು ಇಲ್ಲಿ ಸೇರಿಸಿದ್ದಾರೆ. ಇದರಲ್ಲಿ ಬೇರೆ ವ್ಯತ್ಯಾಸಗಳೂ ಇರುತ್ತವೆ. ಇವೆಲ್ಲಾ ವಿಚಾರಗಳನ್ನೂ ಇಲ್ಲಿ ಪಾತನಾಡಬೇಕಾಗಿದೆ. ಎಕ್ಸೆಂಪ್‌ಷನ್ ವಿಚಾರವಾಗಿ ಅನೇಕ ವಿಚಾರಗಳನ್ನೂ ಅವರು ಹೇಳಿದ್ದಾರೆ.

ಮೊದಲನೇದಾಗಿ ಸೆಕ್ಷನ್ 14 ರಲ್ಲಿ ಏನಿತ್ತೋ ಅದನ್ನು ಪೂರ್ತಿಯಾಗಿ ತೆಗೆದುಬಿಡಬೇಕು ಎಂದು ಜಾಯಿಂಟ್ ಸೆಲೆಕ್ಟ್ ಕಮಿಟಿಯವರ ಮಾಡಿದ್ದಾರೆ. ಇದರಲ್ಲಿ ಕೆಲವರು ಭೂಮಾಲೀಕರಿಗೆ ಮೋಸ ಮಾಡುತ್ತಿದ್ದಾರೆ ಎಂದೂ ಮತ್ತು ಇನ್ನು ಕೆಲವರು ಚೆನೆಂಟುಗಳಿಗೆ ಮೋಸ ಮಾಡುತ್ತಿದ್ದಾರೆ ಎಂದೂ ಅನೇಕರಿಂದ ಹಿಂಭೆ ಕೊಡುತ್ತಿದ್ದ ಕನ್‌ಸೆಷನ್‌ಗಳನ್ನು ತೊರಿಸಬಾರದು ಎಂದು ಇಲ್ಲಿ ಮಾತನಾಡುತ್ತ ಹೇಳಿದರು. ಒಬ್ಬ ಸಣ್ಣ ಹಿಡುವಳಿದಾರನಿಗೆ 61 ರ ಆಕ್ಟ್‌ನಲ್ಲಿ ಏನು ಅನುಕೂಲಗಳಿಜ್ಜೊ ಅದರಂತೆ ಅವರು ಭೂಮಿಯನ್ನು ಅನುಭವಿಸಿಕೊಂಡು ಬರುತ್ತಿದ್ದರು ಮತ್ತು ಅವರ ತಂದೆ ತಾಯಿಗಳ ಕಾಲದಿಂದ ಬಂದ ಭೂಮಿಯಿಂದ ಬಂದ ಉತ್ಪನ್ನದಲ್ಲಿ ಜೀವನ ಪಾಡಿಕೊಂಡು ಬರುತ್ತಿದ್ದರು, ಇಂತಹವರಿಗೆ ಒಂದು ರೀತಿಯಾದ ಮಿತಿ ಇರಬೇಕೆಂದು ಮಾಡಿರುವುದರಿಂದ ಅವರು ಕೆಟ್ಟು ಭೂಮಿಯನ್ನು ಇಟ್ಟುಕೊಳ್ಳಲು ಆಗುತ್ತಿಲ್ಲ. ಬೇರೆ ರೀತಿಯಾದ ವರಮಾನ ಪಡೆಯುತ್ತಿದ್ದಾರೆಂದ ಇವರಿಗೆ ಭೂಮಿ ಇರಕೂಡದು ಎಂದು ಮಾಡುವುದು ಸರಿಯಲ್ಲ. ಇದರ ಬಗ್ಗೆ ಸೂಕ್ಷ್ಮವಾಗಿ ವಿಚಾರ ಮಾಡಿ ಅನುಕೂಲ ಮಾಡಿ ಕೊಡಬೇಕಾದುದು ಬಹಳ ಅಗತ್ಯ. ಇಂದು ಭೂಮಿ ಇಟ್ಟುಕೊಂಡಿರುವ ವರೇ ಅವರ ಒಳಗೇ ಬೇಕಾದ ಹಾಗೆ ಹಂಚಿಕೊಂಡು ಮೋಸ ಮಾಡುತ್ತಿದ್ದಾರೆಂದು ಹೇಳಿದರು. ಕಳ್ಳನೋಟುಗಳನ್ನು ಸಂಪಾದನೆ ಮಾಡಿದಂತೆ ಮತ್ತು ಪಟ್ಟಣದ ಆಸ್ತಿಯ ಮೇರೆ ಮಿತಿ ತರುವುದಾಗಿ ಸರ್ಕಾರದವರು ಹೇಳಿದಾಗ ಕೆಲವರು ಚಿನ್ನವನ್ನು ಕೊಂಡು ಅಂಡರ್‌ಗ್ರೌಂಡ್‌ನಲ್ಲಿ ಇಟ್ಟಂತೆ, ಭೂಮಿಯನ್ನು ಯಾರೂ ಗುಟ್ಟಾಗಿ ಸಂಪಾದನೆ ಪಾಡಿ ಇಟ್ಟಿಲ್ಲ. ಭೂಮಿಯೆಲ್ಲವೂ ಕಣ್ಣಿಗೆ ಕಾಣುವಂತೆ ಇದೆ. ಏನಾದರು ಭೂಮಿಯನ್ನು ಹಂಚಿಕೊಂಡಿದ್ದರೆ ನಮ್ಮ ದೇಶದ ಜನರೇ ಹಂಚಿಕೊಂಡಿದ್ದಾರೆ. ಇದರಲ್ಲಿ ಏನೂ ಮೋಸ ನಡೆದಿಲ್ಲ. ಕೆಲವರು ಸ್ವಂತವಾಗಿ ವ್ಯವಸಾಯ ಪಾಡಲು ಜಮೀನನ್ನು ಇಟ್ಟುಕೊಂಡಿದ್ದಾರೆ. ಅಂತಹವರಿಂದ ಅದನ್ನು ತೆಗೆದುಕೊಳ್ಳುವುದು ಸರಿಯಲ್ಲ? ತಂದೆಯಿಂದ ಬಂದ ಆಸ್ತಿಯನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶವಿಲ್ಲ ಎಂದು 14ನೇ ಸೆಕ್ಷನನ್ನು ಓಮಿಟ್ ಮಾಡುವುದು ಸೂಕ್ತವಲ್ಲ ಎಂದು ಹೇಳುತ್ತೇನೆ.

ಶ್ರೀ ಕೋಣಂದಾರು ಲಿಂಗಪ್ಪ.—ಜಮೀನನ್ನು ಪಡೆದುಕೊಂಡರೆ ಅದಕ್ಕೆ ಪರಿಹಾರ ಕೊಡಲಾಗುತ್ತದೆ.

ಶ್ರೀ ಎಚ್. ಬಿ. ಕೆಂಚೇಗೌಡ.—ಯಾರು ಸ್ವಂತವಾಗಿ ವ್ಯವಸಾಯ ಮಾಡುವುದಿಲ್ಲವೋ ಅಂತಹವರಿಂದ ಎಷ್ಟು ತೆಗೆದುಕೊಳ್ಳಿಲಿ. ಆದರೆ ಯಾರು ಸ್ವಂತವಾಗಿ ವ್ಯವಸಾಯ ಮಾಡುತ್ತೇ

ವೆಂದು ಹೇಳುತ್ತಾರೋ ಅಂತಹವರಿಂದ ಏತಕ್ಕೆ ಕಿತ್ತುಕೊಳ್ಳಬೇಕು? ಇದೇ ನನ್ನ ಪಾಯಿಂಟ್. ತನ್ನದು, ತನ್ನ ತಂದೆಯಿಂದು ಬಂದ ಜಮೀನು ಎಂದು ಯಾವ ಇಟ್ಟುಕೊಂಡಿರುತ್ತಾರೋ ಅಂತಹವರಿಂದ ಆದನ್ನು ಕಿತ್ತುಕೊಂಡರೆ ಅವರಿಗೆ ಕೊಡುವ ಪರಿಹಾರವಾದರೂ ಏನು? ಕಂದಾಯದ ಅಥವಾ ಆದಾಯದ 15 ಅಥವಾ 20 ಪಟ್ಟು ಎಂದು ಹೇಳುತ್ತೀರಿ. ಇದು ಬಹಳ ಕಡಿಮೆ. ಶ್ರೀರಂಗಪಟ್ಟಣದ ಹತ್ತಿರ ಒಬ್ಬನಿಗೆ ಒಂದೆರಡು ಎಕರೆ ಗದ್ದೆ ಇದ್ದರೆ ತಾವು ಎಕರೆಗೆ 1250 ರೂಪಾಯಿಗಳ ಪರಿಹಾರ ಕೊಡುತ್ತೀರಿ. ಆವರೆ ಅದು ಎಕರೆಗೆ 40 ಸಾವಿರ ರೂಪಾಯಿ ಬೆಲೆ ಇದೆ. ತಾವು ಇಷ್ಟೊಂದು ಕಡಿಮೆ ಪರಿಹಾರ ಕೊಟ್ಟರೆ, ಅದನ್ನು ಪಡೆದವರು ಬೇರೆ ವ್ಯತ್ತಿ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚನೆ ಮಾಡಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಜಮೀನನ್ನು ಸರ್ಕಾರದವರು ಪಡೆದುಕೊಂಡಾಗ ಅದಕ್ಕೆ ಪರಿಹಾರ ಅಥವಾ ಪೊತ್ತ ಕೊಡುವಾಗ ಮಾರ್ಕೆಟ್ ರೇಟ್ ಕೊಡಬೇಕೆಂದು ಮಾನ್ಯ ಸದಸ್ಯರು ಸಲಹೆ ಮಾಡುತ್ತಾರೆಯೇ ಹೇಗೆ?

ಶ್ರೀ ಎಚ್. ಬಿ. ಕೆಂಚೇಗೌಡ.—ಕಡಿಮೆ ಮಾರ್ಕೆಟ್ ರೇಟ್ ಇರುವ ಕಡೆ ಮಾರ್ಕೆಟ್ ರೇಟ್ ಕೊಟ್ಟರೆ ಒಳ್ಳೆಯದು. ಮಾರ್ಕೆಟ್ ರೇಟ್ ಜಾಸ್ತಿಯಿರುವ ಕಡೆ ಅದಕ್ಕಿಂತ ಸ್ವಲ್ಪ ಕಡಿಮೆ ರೇಟನ್ನು ಕೊಟ್ಟರೆ ಒಳ್ಳೆಯದು. ಈಗ ಕೊಡುವ ಪರಿಹಾರದಲ್ಲಿ ಅವರು ಉತ್ತಮವಾದ ಜೀವನ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ತಾವು ನೋಡಬೇಕು. ಬ್ಯಾಂಕ್ ರಾಷ್ಟ್ರೀಕರಣ ಮಾಡಿದಾಗ ಬಂಡವಾಳಗಾರರು ಕೋರ್ಟಿಗೆ ಹೋಗಿ ಸರಿಯಾದಂಥ ಪರಿಹಾರ ಪಡೆದುಕೊಂಡರು. ಅವರು ಬಿದ್ದಿವಂತರಾಗಿದ್ದರು, ಆದರಿಂದ ಕೋರ್ಟಿಗೆ ಹೋಗಿ ಪರಿಹಾರ ಪಡೆದುಕೊಂಡರು. ಆದರೆ ರೈತರು ಡಿದ್ದಾರಿದ್ದಾರೆ. ಅಂತಹವರಿಗೆ ಇಷ್ಟು ಬಂದಂತೆ ಪರಿಹಾರ ಕೊಟ್ಟರೆ ಮುಂದೆ ಅವರ ಗತಿ ಏನಾಗುತ್ತದೆ ಎಂಬುದನ್ನು ನೋಡಬೇಕು. ಅವರೇನಾದರು ಭೂಮಿಯಿಂದ ಸಂಪಾದನೆ ಮಾಡಿ ಐಶ್ವರ್ಯವಂತರಾಗಿದ್ದರೆ ಈಗಿನ ರೀತಿಯಲ್ಲಿ ಪರಿಹಾರ ಕೊಟ್ಟಿದ್ದರೂ ಸಹ ಸಾಕಾಗುತ್ತಿತ್ತು. ಆದರೆ ಯಾರೂ ಐಶ್ವರ್ಯವಂತರಾಗಿಲ್ಲ. ಇಂತಹವರಿಂದ ಭೂಮಿಯನ್ನು ಕಿತ್ತು, ಅದನ್ನು ಇನ್ನೊಬ್ಬರಿಗೆ ಕೊಟ್ಟರೆ ಅದು ಯಾವ ರೀತಿಯ ನ್ಯಾಯವಾದ ಎಂದು ಕೇಳುತ್ತೇನೆ. 5 ಸಾವಿರ ರೂಪಾಯಿಗಳವರೆಗೆ ಒಂದು ರೇಟ್, ಅದಕ್ಕಿಂತ ಜಾಸ್ತಿ ಇದ್ದರೆ ಇನ್ನೊಂದು ರೇಟ್ ಕೊಡಲಾಗುತ್ತದೆಂದು ಇಲ್ಲಿ ಹೇಳಿದ್ದಾರೆ. ಯಾರಿಗೆ ಲಕ್ಷಗಟ್ಟಲೆ ಪರಿಹಾರ ಸಿಗುತ್ತದೋ ಅಂತಹವರಿಗೆ ಬೇಕಾದರೆ ಕಡಿಮೆ ಪರಿಹಾರ ಕೊಡಿ. ಆದರೆ ಒಂದೆರಡು ಎಕರೆ ಜಮೀನು ಇರುವವರಿಂದ ತೆಗೆದುಕೊಂಡರೆ ಅವರಿಗೂ ಈ ರೇಟನ ಪರಿಹಾರ ಕೊಟ್ಟರೆ ಅವರ ಗತಿ ಏನು? ಸೆಕ್ಷನ್ 5ನ್ನು ಬದಲಾವಣೆ ಮಾಡಿ ವಿಧವೆಯರು, ಅವ್ಯಾಪ್ತವಯಸ್ಕರು, ಅಂಗವಿಕಲರು ಜಮೀನು ಇಟ್ಟುಕೊಳ್ಳುವಾಗಿಲ್ಲ ಮತ್ತು ಗೇಣಿಗೆ ಕೊಡುವಂತಿಲ್ಲ ಎಂದು ಹೇಳಿದ್ದೀರಿ. ಮಾನವೀಯತೆ ದೃಷ್ಟಿಯಿಂದ ಇದು ಸರಿಯೇ? ಗೇಣಿಗೆ ಕೊಡುವ ಪದ್ಧತಿಯೇ ಇರಬಾರದು ಎಂದು ತಾವು ಹೇಳುವುದಾದರೆ ಸೈನಿಕರು ಮತ್ತು ನಾವಿಕರಿಗೂ ಸಹ ರಿಯಾಯಿತಿ ಕೊಡಬಾರದು! ಅವರಿಗೂ ಸಹ ಬೇರೆ ವ್ಯತ್ತಿ ಮಾಡಲು ಬಂಡವಾಳ ಒದಗಿಸಿ. ಇಲ್ಲವೇ ಅವರಿಗೆ ರಿಯಾಯಿತಿ ಕೊಟ್ಟಂತೆ ಇವರಿಗೂ ಸಹ ಕೊಡಿ. ಇದನ್ನು ಮಾನವೀಯತೆ ದೃಷ್ಟಿಯಿಂದ ನೋಡಬೇಕು ಮತ್ತು ಅಕ್ಕಪಕ್ಕದ ರಾಜ್ಯಗಳಲ್ಲಿ ಯಾವ ರೀತಿ ಮಾಡಿದ್ದಾರೆಂಬುದನ್ನು ನೋಡಿಕೊಂಡು ಮಾಡಬೇಕೇ ಹೊರತು ಕೇವಲ ನಮ್ಮ ರಾಜ್ಯದೊಂದನ್ನೇ ಯೋಚನೆ ಮಾಡುವುದು ಸರಿಯಲ್ಲ. ಎಲ್ಲರೂ ಗೇಣಿದಾರರ ಬಗ್ಗೆ ಮಾತ ಮಾಡುತ್ತಾರೆ; ಆದರೆ ಎಷ್ಟೋ ಜನರು ಗೇಣಿಗೆ ಒಂದು ನೂರಾರು ಎಕರೆ ಭೂಮಿಯನ್ನು ಪಡೆದುಕೊಂಡು ಬೇರೆಯವರಿಗೆ ಗೇಣಿಗೆ ಕೊಟ್ಟಿರುವ ಜನರೂ ಸಹ ಇಂದು ಇದ್ದಾರೆ. ದೇಶಕ್ಕೋಸ್ಕರ ಪ್ರಾಣತ್ಯಾಗ ಮಾಡುವುದರಿಂದ ಸೈನಿಕರಿಗೆ ಮತ್ತು ನಾವಿಕರಿಗೆ ರಿಯಾಯಿತಿ ಕೊಟ್ಟರುವಂತೆ, ಅಂಗವಿಕಲರಿಗೂ, ವಿಧವೆಯರಿಗೂ, ಅಪ್ರಾಪ್ತವಯಸ್ಕರಿಗೂ ರಿಯಾಯಿತಿ ಕೊಡಬೇಕು. ಮತ್ತು ಇವರ ಬಗ್ಗೆ ಕೂಡ ಮಾನವೀಯತೆ ದೃಷ್ಟಿಯಿಂದ ನೋಡಬೇಕು. ಇಲ್ಲಿಯವರೆಗೆ ಯಾರು ಯಾರು ಸೆಕ್ಷನ್ 14ರ ಪ್ರಕಾರ ಸ್ವಂತ ಸಾಗುವಳಿಗೆ ಎಂದು ಜಮೀನನ್ನು ಬಿಡಿಸಿಕೊಂಡರೋ ಅವರು ಗೆದ್ದುಕೊಂಡರು, ಯಾರ ಯಾರ ಅರ್ಜಿಗಳು ಇನ್ನೂ ಇತ್ಯರ್ಥವಾಗಬೇಕಾಗಿದೆಯೋ ಅವರೆಲ್ಲಾ ಈಗಿನ ತೀರ್ಮಾನದ ಪ್ರಕಾರ ಸಿಕ್ಕಿಕೊಂಡರು. ಇದು ಯಾವ ನ್ಯಾಯ? ಇವರ ಕೇಸ್‌ಗಳನ್ನು ಸಹ ಮಾನವೀಯತೆ ದೃಷ್ಟಿಯಿಂದ ನೋಡಬೇಕಾಗಿದೆ. ನಮ್ಮ ರೆವಿನ್ಯೂ ಮಂತ್ರಿಗಳಲ್ಲಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ತಾವೂ ಸಹ ದೊಡ್ಡ ಜಮೀನುದಾರರಾಗಿ, ವ್ಯವಸಾಯ ಮಾಡಿ ರೈತರ ಕಷ್ಟಸುಖಗಳು ಏನು ಎಂಬುದನ್ನು ತಿಳಿದುಕೊಂಡಿರುವುದರಿಂದ, ಈ ವಿಚಾರದಲ್ಲಿಯೂ ಸಹ ತಾವು ಯೋಚನೆ ಮಾಡಿ ನ್ಯಾಯ ದೊರಕಿಸಿಕೊಡಬೇಕು.

ಶ್ರೀ ಬಿ. ಪುಟ್ಟಸ್ವಾಮಯ್ಯ.- ಮಾನ್ಯ ಮಂತ್ರಿಗಳು ವ್ಯವಸಾಯ ಮಾಡಿ ಎಷ್ಟು ಹಣ ಸಂಪಾದನೆ ಮಾಡಿ ಬ್ಯಾಂಕಿನಲ್ಲಿ ಇಟ್ಟಿದ್ದಾರೆಂಬುದನ್ನು ತಾವು ತಿಳಿಸಬೇಕು.

ಶ್ರೀ ಎಚ್. ಬಿ. ಕೆಂಚೇಗೌಡ.—ನನಗೆ ಗೊತ್ತಿರುವಂತೆ ಅವರದ್ದು ಯಾವಾಗಲೂ ಡಿಫಿಸಿಟ್ಟೇ ಇದೆ ವ್ಯವಸಾಯವನ್ನೇ ಯಾರು ನಂಬಿಕೊಂಡಿದ್ದಾರೋ ಅವರು ಬ್ಯಾಂಕ್‌ನಲ್ಲಿ ದುಡ್ಡು ಇಡುವುದಕ್ಕೆ ಸಾಧ್ಯವಿದೆ ಎಂದು ಯಾರಾದರೂ ಹೇಳಲಿ; ಹೆಚ್ಚೆಬಚ್ಚೆಗೆ ಸರಿಯಾಗಿ ಹಣ ಖರ್ಚು ಮಾಡದೆ ಉಳಿಸಿದವರು ಯಾರಾದರೂ ಬ್ಯಾಂಕಿನಲ್ಲಿ ಒಂದು ಹತ್ತುಸಾವಿರ ರೂಪಾಯಿಗಳನ್ನು ಇಟ್ಟಿರಬಹುದೇ ಹೊರತು ಎಲ್ಲ ರೈತರೂ ಬ್ಯಾಂಕ್‌ನಲ್ಲಿ ಹಣ ಇಡುವುದಕ್ಕೆ ಸಾಧ್ಯವಿಲ್ಲ. ವ್ಯವಸಾಯದ ಜೊತೆಗೆ ವ್ಯಾಪಾರ ಮಾಡುವವರು ಮತ್ತು ರೈಸ್-ಮಿಲ್ ಇಟ್ಟಿರುವವರು ಬ್ಯಾಂಕ್‌ನಲ್ಲಿ ದುಡ್ಡು ಇಟ್ಟಿರಬಹುದು. ಈ ಕಾರಣಗಳಿಂದ ಸೆಕ್ಷನ್ 14 ಮತ್ತು ಸೆಕ್ಷನ್ ೨೯ನ್ನು ರೀಫ್ರೇಮ್ ಮಾಡಿ ಅವರಿಗೆ ಉಪಕಾರ ಮಾಡಬೇಕೆಂದು ಹೇಳುತ್ತೇನೆ. ಆದರೆ ನಾವು ಈ ಬಗ್ಗೆ ಎಷ್ಟು ಹೇಳಿದರೂ ಸಹ ಅದು ಅರಣ್ಯರೋದನವಾಗುತ್ತದೆ.

4-30 P.M.

ಶ್ರೀ ಎನ್. ಹುಚ್ಚವಾಸ್ತಿಗೌಡ.—ಮಾನ್ಯ ಸದಸ್ಯರು ಹೇಳುವ ಶಬ್ದಗಳು ಸರಿಯಾಗಿ ಕೇಳುವುದಿಲ್ಲ. ಆದ್ದರಿಂದ ಅವರು ಹೇಳುವ ಪಾಯಿಂಟ್‌ಗಳನ್ನು ಗುರುತುಹಾಕಿಕೊಳ್ಳುವುದಕ್ಕೆ ಆಗುವುದಿಲ್ಲ ಬಹಳ ಆವೇಶ ಭರಿತರಾಗಿ ಅವರು ಮಾತನಾಡುತ್ತಿದ್ದಾರೆ. ಆದ್ದರಿಂದ ಅವರು ಸ್ವಲ್ಪ ಶಾಂತಿಯಿಂದ ಸಮಾಧಾನವಾಗಿ ಹೇಳಿದರೆ ಅವರು ಹೇಳತಕ್ಕಂಥಾ ಪಾಯಿಂಟ್‌ಗಳನ್ನು ಗುರುತು ಹಾಕಿಕೊಂಡು ಅವುಗಳನ್ನು ಯೋಚನೆ ಮಾಡಿ ಪರಿಶೀಲನೆ ಮಾಡಿ ಅವರು ಹೇಳಿದ ಸಲಹೆಗಳಿಗೆ ಮನ್ನಣೆ ಕೊಡುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚನೆ ಮಾಡುವುದಕ್ಕೆ ಸಹಾಯಕವಾಗುತ್ತದೆ.

Sri C. M. ARUMUGHAM.—Mr. Deputy Speaker, while agreeing with our Hon'ble Revenue Minister, please permit me to suggest that it will not be possible for reporters also to follow what he is saying, when the Minister himself is not able follow it. So, whatever he is going to say, it is better he puts it in writing and passes it on to the Minister and reporters also.

ಉಪಾಧ್ಯಕ್ಷರು.—ಶ್ರೀ ಚಿಕ್ಕಣ್ಣ ಕೆಂಚೇಗೌಡರು ಶ್ರೀ ಚಿಕ್ಕಣ್ಣ ಆರ್ಮುಗಂ ಅವರು ಹಾಗೂ ಮಾನ್ಯ ರೆವಿನ್ಯೂ ಮಂತ್ರಿಗಳು ಹೇಳಿದ ಕಡೆ ಸ್ವಲ್ಪ ಲಕ್ಷ್ಯ ಕೊಡಬೇಕು.

ಶ್ರೀ ಎಚ್. ಬಿ ಕೆಂಚೇಗೌಡ.—ಕ್ಲಾಸಿಫಿಕೇಷನ್ ಆಫ್ ಲ್ಯಾಂಡ್ಸ್ ವಿಷಯದಲ್ಲಿ ಸ್ವಲ್ಪ ವ್ಯತ್ಯಾಸವಾಗಿದೆ. 1961 ನೇ ಇಸವಿಯ ಆಕ್ಟ್ ಪ್ರಕಾರ 'facilities for assured irrigation where two crops are raised in a year ಎಂದು ಇದೆ. ಈಗ ಇಲ್ಲಿ ತಂದಿರುವ ಮುನೂದೆಯಲ್ಲಿ Lands having facilities for irrigation from such Government sources namely Government tanks and lift irrigation projects constructed and maintained by Government as are notified by Government to be capable of supplying water for growing two crops of paddy in a year or one crop of sugar cane ಎಂದು ಇದೆ. ಇದನ್ನು ಹೋಲಿಕೆ ಮಾಡಿನೋಡಿದರೆ ಸೆಂಟ್ರಲ್ ಗೌರ್ನಮೆಂಟ್ ಆಕ್ಟಿನಲ್ಲಿ with assured irrigation capable of yielding at least 2 crops ಎಂದು ಹೇಳಿದ್ದಾರೆ. ಆಮೇಲೆ ಸೆಕೆಂಡ್ ಕ್ಲಾಸಿಫಿಕೇಷನ್‌ನಲ್ಲಿ wet land, grarden land, other than first class land possessing facilities for assured irrigation where one crop of paddy can be raised in a year ಎಂದು ಹೇಳಿದ್ದಾರೆ. ಇವರು ಇದರಲ್ಲಿ ಅಷ್ಯೂರ್ಡ್ ವಾಟರ್ ಎಂದು ಹೇಳಿ ಕೊಟ್ಟಿರುವುದು ಸ್ವಲ್ಪ ತೊಂದರೆಯಾಗುತ್ತದೆ. ಇವರು ಇದರಲ್ಲಿ ಟ್ಯಾಂಕ್ಸ್ ಅಂಡ್ ಲಫ್ಟ್ ಇರಿಗೇಷನ್ ಪ್ರೊಜೆಕ್ಟ್ಸ್ ಕನ್‌ಸ್ಟ್ರಕ್ಟೆಡ್ ಅಂಡ್ ಮೆಂಟೇನ್ಡ್ ಬೈ ದಿ ಗೌರ್ನಮೆಂಟ್ ಎಂದು ಹೇಳಿದ್ದಾರೆ. ಆಂಧ್ರದಲ್ಲಿ 6 ವರ್ಷಗಳ ಅವರೇಜ್, ಕೊನೆಯ ಪಕ್ಷ ನಾಲ್ಕು ವರ್ಷಗಳು ಎಂದು ಹೇಳಿದ್ದಾರೆ. 6 ವರ್ಷಗಳ ಅವರೇಜನ್ನು ಲೆಕ್ಕಕ್ಕೆ ತಗೆದುಕೊಂಡರೆ 4 ವರ್ಷಪಾದರೂ ಪೂರ್ತಿ ಬೆಳೆ ಬೆಳೆದರೆ ಅದನ್ನು ಗಣನೆಗೆ ತಗೆದುಕೊಂಡಿದ್ದಾರೆ. ಆದರೆ ಇದರಲ್ಲಿ ವಿವರವನ್ನು ಕೊಟ್ಟಿಲ್ಲ. ಅನೇಕ ಕೆರೆ

ಗಳಲ್ಲಿ ಪೂರ್ಣವಾಗಿ ಒಂದು ಬೆಳೆ ಬರುವ ಗ್ಯಾರಂಟಿ ಕೂಡ ಇಲ್ಲ. ಆದ್ದರಿಂದ ಗೌರ್ನಮೆಂಟ್ ಟ್ಯಾಂಕ್ ಸೇರಿಸಿರುವುದು ತಪ್ಪು ಅದೇ ರೀತಿ ಲಿಫ್ಟ್ ಇರಿಗೇಷನ್ ಅನ್ನು ಸರ್ಕಾರದವರೇ ಮಾಡಿಸಿದರೂ ಕೂಡ ಎಲೆಕ್ಟ್ರಿಸಿಟಿ ಚಾರ್ಜ್ ಇತ್ಯಾದಿ ಖರ್ಚುಗಳು ಅವರಿಗೆ ಬರುತ್ತವೆ. ಆದ್ದರಿಂದ ಇದರಲ್ಲಿ ಲಿಫ್ ಇರಿಗೇಷನ್ ಸೇರಿಸಿರುವುದು ತಪ್ಪು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಇದನ್ನು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು (ಎ) ಕ್ಲಾಸಿನಲ್ಲಿ ಲಿಫ್ಟ್ ಇರಿಗೇಷನ್, ಪ್ರಾಜೆಕ್ಟ್ ಕನ್‌ಸ್ಟ್ರಕ್ಟೆಡ್ ಅಂಡ್ ಮೇಂಟೇನ್ಡ್ ಬೈ ದಿ ಗೌರ್ನಮೆಂಟ್ ಇವುಗಳನ್ನು ಹಾಕಬಹುದು. ದೊಡ್ಡ ದೊಡ್ಡ ಕೆರೆಗಳ ಒಳಗಡೆ ಲಿಫ್ಟ್ ಇರಿಗೇಷನ್ ಮಾಡಬಹುದು. ಇಂಥಾದ್ದು ಎರಡು ಬತ್ತದ ಬೆಳೆ ಬಂದರೆ ಅದು (ಎ) ಕ್ಲಾಸಿಗೆ ಸೇರುತ್ತದೆ. ಒಂದು ಬತ್ತದ ಬೆಳೆ ಬರುವುದು (ಬಿ) ಕ್ಲಾಸಿಗೆ ಸೇರುತ್ತದೆ.

ಶ್ರೀ ಎಚ್. ಬಿ. ಕೆಂಚೇಗೌಡ.—ಲಿಫ್ಟ್ ಇರಿಗೇಷನ್‌ನಲ್ಲಿ ಕಂದಾಯ ಜಾಸ್ತಿ ಬರುತ್ತದೆ. ಆದೂ ಅಲ್ಲದೆ ಅದರಲ್ಲಿ ವರ್ಷ ಪೂರ್ತಿ ನೀರು ಸಪ್ಲೈ ಆದರೆ ಆಗ ಇದನ್ನು ಮಾಡಿರುವುದು ಸರಿ. ಹಾಗಲ್ಲದೇ ಇರುವಾಗ ಇದನ್ನು ಫಸ್ಟ್ ಕ್ಲಾಸ್ ಲ್ಯಾಂಡಿಗೆ ಸೇರಿಸಿದರೆ ಆಮು ಸರಿಯಲ್ಲ. ಮತ್ತು ಯಾವ ಟ್ಯಾಂಕಿನಲ್ಲಿ ವರ್ಷ ಪೂರ್ತಿ ನೀರು ಇರುತ್ತದೆ ಅದನ್ನು ಸ್ಪೆಸಿಫಿಕ್ ಆಗಿ ಹೇಳಿ 6 ತಿಂಗಳಿಗೆ ಒಂದು ಬೆಳೆಯುಂತೆ ಯಾವ ಟ್ಯಾಂಕಿನಲ್ಲಿ ಎರಡು ಬೆಳೆ ಬರುತ್ತದೆ ಎಂಬುದನ್ನು ನಿರ್ದಿಷ್ಟವಾಗಿ ಹೇಳಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—(ಎ) ಕ್ಲಾಸಿನಲ್ಲಿ ಯಾವುದು ಬರುತ್ತದೆ, (ಬಿ) ಕ್ಲಾಸಿನಲ್ಲಿ ಯಾವುದು ಬರುತ್ತದೆ ಎ.ಬಿ.ದನ್ನು ನಿರ್ದಿಷ್ಟವಾಗಿ ಲೋಕೋಪಯೋಗಿ ಇರಾಖೆಯವರು ಅಂಕಿ ಅಂಶಗಳನ್ನು ತೆಗೆದುಕೊಂಡು ಅದನ್ನು ನೋಟಿಫೈ ಮಾಡುತ್ತಾರೆ.

ಶ್ರೀ ಎಚ್. ಬಿ. ಕೆಂಚೇಗೌಡ.—ಇನ್ನೊಂದು ವಿಚಾರ. ಅಷ್ಯೂರ್ಡ್ ವಾಟರ್ ಸಪ್ಲೈ ಎಂದು ಹಾಕಿದ್ದಾರೆ. ಅದನ್ನು (ಎ) ಕ್ಲಾಸ್‌ನಲ್ಲಿ ಸೇರಿಸಿದ್ದಾರೆ. ಅಷ್ಯೂರ್ಡ್ ವಾಟರ್ ಸಪ್ಲೈ ಕೊಡುವಲ್ಲಿ ಎಂದರೆ ಹೇಗೆ? ಅಷ್ಯೂರ್ಡ್ ವಾಟರ್ ಸಪ್ಲೈ ಇಲ್ಲದಿದ್ದರೆ ಅದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಅಷ್ಯೂರ್ಡ್ ವಾಟರ್ ಸಪ್ಲೈ ಇರಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—Water supply assured—capable of supplying water for growing 2 crops of paddy. ಇದು ಅಷ್ಯೂರ್ಡ್ ಇರಿಗೇಷನ್ ಎಂದು ಅರ್ಥವಾಗುತ್ತದೆ.

ಶ್ರೀ ಎಚ್. ಬಿ. ಕೆಂಚೇಗೌಡ.—ತಾವು ಇವತ್ತು ಒಂದು ಗ್ರೂಪ್ ಆಫ್ ಶುಗರ್ ಕೇನ್ ಗ್ರೋಯರ್ಸ್ ವಿಚಾರ ಮಾತ್ರ ಹೇಳುತ್ತಿದ್ದೀರಿ ಆದರೆ ಶುಗರ್‌ಕೇನನ್ನು ಡ್ರೈ ಲ್ಯಾಂಡಿನಲ್ಲಿ ಸಹ ಬೆಳೆಸುತ್ತಾರೆ. ಆದಕ್ಕೆ 12 ತಿಂಗಳು ಸಹ ಸದಾ ನೀರು ಬೇಕಾಗಿಲ್ಲ. ಆದ್ದರಿಂದ ತಾವು ಒನ್ ಗ್ರೂಪ್ ಆಫ್ ಶುಗರ್‌ಕೇನ್ ಎಂದು ಸೇರಿಸಿರುವುದು ಸರಿಯೇ? ಅದನ್ನು ತೆಗೆದು ಹಾಕುವು ಎ ಸೂಕ್ತವೆಂದು ಹೇಳುತ್ತೇನೆ.

ಆಮೇಲೆ ಕ್ಲಾಜ್ (ಬಿ) ಯಲ್ಲಿ ಸಹ ಅದೇ ರೀತಿ ಹೇಳಿದ್ದಾರೆ. ಕ್ಲಾಜ್ (ಸಿ) ಯಲ್ಲಿ ಗೌರ್ನ್‌ಮೆಂಟ್ ಸೋರ್ಸ್ ಆಫ್ ವಾಟರ್ ಎಂದು ಹೇಳುವುದು ಯಾವುದಕ್ಕೆ ಎಂದು ಹೇಳಬೇಕು?

ಶ್ರೀ ಎನ್. ಹುಚ್ಚಮಾಸ್ತಿಗೌಡ. — ಈಗ (ಎ) ಮತ್ತು (ಬಿ) ಯೊಳಗೆ ನೋಟಿಫೈ ಮಾಡದೆ ಇರತಕ್ಕಂಥ ಮೈನರ್ ಟ್ಯಾಂಕುಗಳು ಏನಿವೆ ಅವುಗಳು ಗೌರ್ನ್‌ಮೆಂಟ್ ಸೋರ್ಸಸ್ ಒಳಗೆ ಬರುತ್ತವೆ.

ಶ್ರೀ ಎಚ್. ಬಿ. ಕೆಂಚೇಗೌಡ.—ಇನ್ನು ಕಲವು ಎಗ್ಸೆಮ್ಪ್ಷನ್ ವಿಚಾರ ಮಾತನಾಡಬೇಕಾಗಿದೆ. ನನ್ನ ಪೀಠಿಕೆಯಲ್ಲಿಯೇ ಅದರ ಬಗ್ಗೆ ಸ್ವಲ್ಪ ಮಾತನಾಡಿದ್ದೇನೆ. ಇವತ್ತು ಒಂದು ಕೈಗಾರಿಕೆ ನಡೆಯಬೇಕಾದರೂ ಮತ್ತು ಕಟ್ಟಡ ಕಟ್ಟಬೇಕಾದರೂ ಭೂಮಿ ಬೇಕಾಗುತ್ತದೆ. ಎಗ್ಸೆಮ್ಪ್ಷನ್ ವಿಚಾರದಲ್ಲಿ ಭೂದಾನ ಯಜ್ಞದ ಜಮೀನು, ಲೋಕಲ್ ಬಾಡೀಸ್ ಇಟ್ಟುಕೊಂಡ ಜಮೀನು ಇತ್ಯಾದಿಗಳಿಗೆ ಎಗ್ಸೆಮ್ಪ್ಷನ್ ಕೊಟ್ಟಿದ್ದಾರೆ. According to the guidelines given by the Chief Ministers' Conference in regard to ceiling on agricultural land, national banks, Central Banks, local bodies, etc. should continue to enjoy exemption, Similarly, lands held by industrial and commercial organisations should be exempted, as also the lands held by Agricultural Universities, Agricultural Colleges, Agricultural Schools,

(ಶ್ರೀ ಹೆಚ್. ಬಿ. ಕೆಂಚೇಗೌಡ)

research institutions, etc. ಈ ವಿಚಾರದಲ್ಲಿ ಬೇರೆ ರಾಜ್ಯಗಳವರು ಸಹ ಸರಿಯಾದ ರೀತಿಯಲ್ಲಿ ಅವಶ್ಯಕವಿರುವ ಸಂಘ ಸಂಸ್ಥೆಗಳಿಗೆ ಎಗ್ಸೆಮೆಶನ್ ಕೊಟ್ಟಿದ್ದಾರೆ. ಉದಾಹರಣೆಗೆ ಆಂಧ್ರದವರು ಈ ರೀತಿಯಾಗಿ ಎಗ್ಸೆಮೆಶನ್ ಕೊಟ್ಟಿದ್ದಾರೆ. Just as in Andhra, religious, charitable, educational institutions. etc. should be exempted from the ceiling law. ಅದಕ್ಕೊಸ್ಕರ ರಿಲೀಜಿಯಸ್ ಇನ್‌ಸ್ಟಿಟ್ಯೂಶನ್ಸ್‌ಗೆ, ವಿದ್ಯಾ ಸಂಸ್ಥೆಗಳಿಗೆ, ಇದರಲ್ಲಿ ಎಗ್ಸೆಮೆಶನ್ ಕೊಡುವುದು ಬೇಡ ಎಂದು ಹೇಳಿರುವುದಕ್ಕೆ ಇದನ್ನು ನಾನು ಹೇಳಬೇಕಾಗಿದೆ. ನಮ್ಮ ರಾಜ್ಯದಲ್ಲಿ ಕೆಲವು ವಿದ್ಯಾ ಸಂಸ್ಥೆಗಳು ಬಹಳ ಚೆನ್ನಾಗಿ ಕೆಲಸ ಮಾಡಿ ನಮ್ಮ ದೇಶದ ವಿದ್ಯಾ ಪ್ರಗತಿಗಾಗಿ ಒಳ್ಳೆಯ ಕೆಲಸಗಳನ್ನು ಮಾಡುತ್ತಿವೆ. ಉದಾಹರಣೆಗೆ ಹೇಳುವುದಾದರೆ, ನಮ್ಮ ಕನಕಪುರದಲ್ಲಿರುವ ಮಾನ್ಯ ಕರಿಯಪ್ಪನವರು ವಿದ್ಯಾಸಂಸ್ಥೆಗಳು. ಅವು ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ. ಅಂಥವುಗಳ ಜಮೀನಿಗೆ ಎಗ್ಸೆಮ್ಪ್‌ಶನ್ ಕೊಡಬೇಕು. ಇನ್ನೊಂದು ಉದಾಹರಣೆ ಸಿದ್ಧಗಂಗಾ ಇನ್‌ಸ್ಟಿಟ್ಯೂಟ್. ಈ ಸಂಸ್ಥೆ 4—5 ಸಾವಿರ ವಿದ್ಯಾರ್ಥಿಗಳಿಗೆ ಫ್ರೀಯಾಗಿ ಊಟ ಹಾಕಿ ವಿದ್ಯಾ ದಾನವನ್ನು ಮಾಡುತ್ತಿದ್ದಾರೆ. ಇಂಥ ಸಂಸ್ಥೆಗಳು ಡೊನೇಶನ್ ಕೊಟ್ಟವರಿಗೆ ಹೆಚ್ಚು ಸೀಟು ಕೊಟ್ಟರೂ ವಿದ್ಯಾಭ್ಯಾಸದ ಪ್ರಗತಿಗೆ ಬಹಳ ಶ್ರಮ ತೆಗೆದುಕೊಂಡು ಕೆಲಸ ಮಾಡುತ್ತಿವೆ. ಇಂಥ ಸಂಸ್ಥೆಗಳ ಜಮೀನಿಗೆ ಎಗ್ಸೆಮ್ಪ್‌ಶನ್ ಕೊಡಬೇಕಾಗುತ್ತದೆ. ಅವುಗಳನ್ನು ಸರ್ಕಾರ ಇವತ್ತು, ನಿತ್ತು ಹಾಕಿದರೆ, ಅಲ್ಲಿರತಕ್ಕಂಥ ವಿದ್ಯಾರ್ಥಿಗಳ ಜವಾಬ್ದಾರಿ ಸರ್ಕಾರದ ಮೇಲೆ ಬಿದ್ದು ಸರ್ಕಾರಕ್ಕೆ ಒಂದು ಹೊರೆಯಾಗುತ್ತದೆ.

ಎರಡನೆಯದಾಗಿ ಇವತ್ತು ಕೈಗಾರಿಕೆಗಳು ಬೆಳೆಯಬೇಕಾಗಿದೆ. ಷುಗರ್ ಫ್ಯಾಕ್ಟರಿ ಕೇಂದ್ರೀಕೃತವಾಗಬೇಕು. ಅದಕ್ಕಾಗಿ ಏನಾದರೂ 100 ಎಕರೆ ಜಮೀನು ಬೇಕಾದರೆ ಆ ಕೈಗಾರಿಕೆ ಸುಲಲಿತವಾಗಿ ನಡೆಯುವ ದೃಷ್ಟಿಯಿಂದ ಅದಕ್ಕೆ ಎಗ್ಸೆಂಷನ್ ಕೊಡುವುದು ಸೂಕ್ತವೆಂದು ನಾನು ಸಲಹೆಮಾಡುತ್ತೇನೆ.

ಇನ್ನು ನಾನು ಸೀಲಿಂಗ್ ವಿಚಾರಕ್ಕೆ ಬರುತ್ತೇನೆ. ಕೇಂದ್ರಸರ್ಕಾರದವರು ಒಂದು ಗೈಡ್ ಲೈನ್ಸ್ ಕೊಟ್ಟಿದ್ದಾರೆ. ಅದೇನೆಂದರೆ, ಈ ಸೀಲಿಂಗನ್ನು ಸೆಂಟ್ರಲ್ ಲ್ಯಾಂಡ್ ರಿಫಾರಮ್ಸ್ ಕಮಿಟಿಯವರು ನಿಗದಿಮಾಡುತ್ತಾರೆ. ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಮೂಲಕ ಇದು ನಡೆದಿದ್ದರೂ ಅದನ್ನು ನಾವು ಇಲ್ಲಿ ಹೇಳುವುದಕ್ಕೆ ಅವಕಾಶ ಇಲ್ಲ. ನಾವೂ ಸಹ ಅದರ ಅನುಸಾರವಾಗಿ ನಡೆಯಬೇಕು. 18ರಿಂದ 27 ಎಕರೆಗಳವರೆಗೆ ಸೀಲಿಂಗ್ ಇಡಬೇಕು. ಆಂಧ್ರದವರು 15 ಎಕರೆಗಳಿಂದ 20 ಎಕರೆಗಳವರೆಗೆ ಇಟ್ಟಿದ್ದಾರೆ. ಫಸ್ಟ್‌ಕ್ಲಾಸ್ ಲ್ಯಾಂಡ್ 4 ಎಕರೆಗಳೆಂದು ಮಾಡಿದ್ದಾರೆ 16.6 ಎಕರೆಗಳನ್ನು ಡಬ್ಬರ್ ಕ್ರಾಪ್‌ಗೆ ಇಟ್ಟಿದ್ದಾರೆ. ಬಿಹಾರದಲ್ಲಿ ಸೀಲಿಂಗ್ ಲಿಮಿಟ್ಟನ್ನು ಡಬ್ಬರ್ ಮಾಡಿದ್ದಾರೆ. ಇರ್ರಿಗೇಟೆಡ್ ಲ್ಯಾಂಡ್ 15 ಎಕರೆಗಳು, ನಾನ್ ಇರ್ರಿಗೇಟೆಡ್ ಲ್ಯಾಂಡ್ 30 ಎಕರೆಗಳು. ಹರಿಯಾನಾದಲ್ಲಿ ಫಸ್ಟ್ ಕ್ಲಾಸ್ ಲ್ಯಾಂಡ್ 18 ಎಕರೆಗಳು. ಸೆಕೆಂಡ್ ಕ್ಲಾಸ್ ಲ್ಯಾಂಡ್ 25 ಎಕರೆಗಳು, ಮಧ್ಯಪ್ರದೇಶದಲ್ಲಿ 54 ಎಕರೆಗಳು. ಫಸ್ಟ್ ಕ್ಲಾಸ್ ಲ್ಯಾಂಡ್ 15 ಎಕರೆಗಳು. ಮಹಾರಾಷ್ಟ್ರದಲ್ಲಿ ಫಸ್ಟ್ ಕ್ಲಾಸ್ ಲ್ಯಾಂಡ್ 18 ಎಕರೆಗಳು, ಸೆಕೆಂಡ್ ಕ್ಲಾಸ್ 36 ಎಕರೆಗಳು. ಲಾಸ್ಟ್ ಕ್ಲಾಸ್ 54 ಎಕರೆಗಳು. ಹೀಗೆ ಬೇರೆಬೇರೆಯಾಗಿ ಸ್ಲೋಟ್‌ವಾರ್ ಮಾಡಿದ್ದಾರೆ. ಈಗ ನಮಗೆ ಕೇಂದ್ರಸರ್ಕಾರದವರು 8ರಿಂದ 18ಎಕರೆವರೆಗೆ ಫಸ್ಟ್ ಕ್ಲಾಸ್ ಲ್ಯಾಂಡ್, ಸೆಕೆಂಡ್ ಕ್ಲಾಸ್ 18ರಿಂದ 27 ಎಕರೆಗಳವರೆಗೆ, ಡ್ರೈಲ್ಯಾಂಡ್ 54 ಎಕರೆಗಳಿರುವುದು ಒಂದು. ಇನ್ನು ನಮ್ಮ ಮೈಸೂರಿನಲ್ಲಿ ಅಣ್ಣೇವಾರಿ ಲೆಕ್ಕದಲ್ಲಿ ಸೀಲಿಂಗ್ ಮಾಡುತ್ತೇವೆಂದು ಹೇಳಿದ್ದಾರೆ. ಇದು ಯಾವ ಗ್ರಾಮದೊಳಗೋ ನಮಗೇ ಅರ್ಥವಾಗುವುದಿಲ್ಲ. ಎಂಟಾಣೆ ಮೇಲ್ಪಟ್ಟು ಹಾಗೂ ಎಂಟಾಣೆ ಕೆಳಮಟ್ಟದಲ್ಲಿ ಆಂಧ್ರದವರು ಮಾತ್ರ ಕ್ರಮವಾಗಿ ವಿತರಣೆ ಮಾಡಿದ್ದಾರೆ. ಎ ಕ್ಲಾಸ್ ಹಾಗೂ ಡಬ್ಬರ್ ಕ್ರಾಪ್ಸ್ ಲ್ಯಾಂಡ್ 10 ಎಕರೆ, ಬಿ—12 ಎಕರೆ, ಸಿ—14 ಎಕರೆ, ಡಿ—14 ಎಕರೆ, ಇ—18ಎಕರೆ—ಇವರೆಲ್ಲರೂ ಅಣ್ಣೇವಾರಿ ಲೆಕ್ಕವನ್ನು ಸರಿಯಾಗಿ ಇಟ್ಟುಕೊಂಡು ಮಾಡಿದ್ದಾರೆ. ನಮ್ಮಲ್ಲಿ ಅಣ್ಣೇವಾರಿ ಲೆಕ್ಕ ಎಂಟಾಣೆ ಮೇಲ್ಪಟ್ಟಿರುವವರು ಆಗ ಬಹುದು 10 ಎಕರೆ ಎಂದು ಆದಕ್ಕೆ ಹೇಳಬಹುದು. 8ಆಣೆ ಒಳಪಟ್ಟಿರುವವರು 12 ಎಕರೆಗಳವರೆಗೆ ಆಗಬಹುದು. ಸೆಕೆಂಡ್ ಕ್ಲಾಸ್—8ಆಣೆ ಮೇಲ್ಪಟ್ಟಿರುವವರಿಗೆ 18 ಎಕರೆಗಳವರೆಗೆ ಆಗ ಬಹುದು. ಇನ್ನು ಡ್ರೈ ಲ್ಯಾಂಡಿಗೆ ಒಂದು ರೂಪಾಯಿ ಮೇಲ್ಪಟ್ಟು ಇರುವವರಿಗೆ 54 ಎಕರೆ, ಇನ್ನು ಡ್ಯಾಟ್ ಕಂಡೀಷನ್ ಇರುವ ಕಡೆಗಳಲ್ಲಿ 21 ಎಕರೆಗಳವರೆಗೆ ಎಂಬುದಾಗಿ ಹೇಳಿದ್ದಾರೆ. ಇದನ್ನು ಪತಕ್ಕೋಸರ ಹೇಳಿದ್ದಾರೆಂದರೆ ಒಂದು ಸೀಲಿಂಗ್ ಮಾಡುವಾಗ ಯಾವ ಒಂದು ಆಧಾರ

ವನ್ನು ಇಟ್ಟುಕೊಂಡು ಮಾಡಿದ್ದಾರೆಂಬುದನ್ನು ತಿಳಿಸಬೇಕು. ಪಂಜಾಬ್, ಹರಿಯಾಣ ಮತ್ತು ಆಂಧ್ರುಗಳಲ್ಲಿ ಹೆಚ್ಚು ಬೆಳೆ ಬರುವಂಥಾದ್ದಕ್ಕೆ 18 ಎಕರೆಯಿಂದ ಪುರುಮಾಡಿದ್ದಾರೆ. ನಮ್ಮಲ್ಲಿ ಇದನ್ನು ಇನ್ನೂ ಬಹಳ ಕಡಿಮೆಮಾಡಿದ್ದಾರೆ. ಇವರು ಅಣೆವಾರಿ ಮಾಡಿದರೆ 10ರಿಂದ 18ಎಕರೆ ವರೆಗೆ ಹೋಗಲಾರದು. ಕಡೆಯಪಕ್ಷ 15ರಿಂದ 27 ಎಕರೆಯವರೆಗೂ ಹೋಗಲಾರದು. ಬೇರೆ ಯವರು ಮಾಡಿದ್ದನ್ನೇ ಇವರೂ ಮಾಡುತ್ತಾರೆ. ಅದನ್ನು ಮೂರು ನಾಲ್ಕು ರೀತಿಯಲ್ಲಿ ಮಾಡ ಬೇಕು. ಇವರು ಕೇವಲ 12ಕ್ಕೆ ನಿಲ್ಲಿಸಬೇಕೆಂದು ಉದ್ದೇಶವಿಟ್ಟುಕೊಂಡು ಮಾಡಿದ್ದಾರೆ. ಇವರು ಅಣೆವಾರಿ ಲೆಕ್ಕದಲ್ಲಿ ಎಲ್ಲವನ್ನೂ ಇಟ್ಟುಕೊಂಡರೆ ಒಳ್ಳೆಯದು. 18 ಎಕರೆಯವರೆಗೆ ಹೋಗು ವುದು ಸೂಕ್ತ ಸೀಲಿಂಗ್ 27 ಎಕರೆಯವರೆಗೂ ಮತ್ತು ಸೆಕೆಂಡ್ ಕ್ಲಾಸ್‌ಗೆ 54 ಎಕರೆಯವರೆಗೂ ಬೇರೆಯವರ ಹಾಗೆ ಇಲ್ಲಿಯೂ ಮಾಡಬೇಕೆಂದು ನನ್ನ ಸಲಹೆ.

5—00 P. M.

ಇನ್ಯೂಸೆನ್—79 (1) ರಲ್ಲಿ 12000 ರೂಪಾಯಿಗಳ ವರಮಾನ ಅಗ್ರಿಕಲ್ಚರಲ್ ಬಾಬು ನಿಂದ ಅಲ್ಲದೆ ಬೇರೆ ಬಾಬಿನಿಂದ ಬರುವಂತಿದ್ದರೆ, ಅವರು ಭೂಮಿಯನ್ನು ಮುಂದೆ ಕೊಳ್ಳುವುದ ಕ್ಕಾಗುವುದಿಲ್ಲ ಎಂದು ಹೇಳಿದೆ. ಈ ಪ್ರತಿಬಂಧಕ ಏಕೆ ? ಸಮಾಜದಲ್ಲಿ ಈ ದಿವಸ ಎಲ್ಲರಿಗೂ ಒಂದೇ ರೀತಿಯ ನರಿನಮಾನಕೆಗಳನ್ನು ತರುವುದಾಗಿ ಇಷ್ಟವಿದ್ದ ಪಕ್ಷದಲ್ಲಿ ಸರ್ಕಾರದವರು ಏಕಕ್ಕಾಲಕ್ಕೇ ಆ ಅರ್ಬನ್ ಆಸ್ತಿಗಳ ಮಿತಿಯನ್ನು ವಿಧಿಸತಕ್ಕ ಮಸೂದೆಯನ್ನೂ ಕೂಡ ಏಕೆ ತರಲಿಲ್ಲ ? ನಾಳೆ ತರಬೇಕೆಂದು ಹೇಳುತ್ತಿರುವ ಆ ಅರ್ಬನ್ ಆಸ್ತಿಯ ಮಿತಿಯನ್ನು ನಿರ್ಧರ ಮಾಡತಕ್ಕ ಕಾಲದಲ್ಲೂ ಹೀಗೇ 12000 ರೂಪಾಯಿಗಳ ಆದಾಯದ ಮಿತಿಯನ್ನು ಹಾಕುತ್ತಾರೆಯೇ ? ಇವರಿಂದ ಹಾಗೆ ಮಿತಿ ಹಾಕಲು ಖಂಡಿತ ಸಾಧ್ಯವಿಲ್ಲ. ಆದುದರಿಂದ ನಾನು ಈಗ ಸರ್ಕಾರಕ್ಕೆ ಸಲಹೆ ಮಾಡುವು ದೇನಂದರೆ ಈ ಕ್ಲಾಜ್ 79 (ಎ) ಅನ್ನು ಸಂಪೂರ್ಣವಾಗಿ ತೆಗೆದುಹಾಕಿ ಎಂದು ಸಲಹೆ ಮಾಡುತ್ತಿದ್ದೇನೆ.

ಇನ್ನು ಕಾಂಪನ್‌ಸೇಷನ್ ಕೊಡತಕ್ಕ ವಿಚಾರಕ್ಕೆ ಬಂದರೆ...

ಉಪಾಧ್ಯಕ್ಷರು.—ಮಾನ್ಯ ಸದಸ್ಯರಾಗಲೇ ಒಂದಾವರ್ತಿ ಇದರ ಮೇಲೆ ಮಾತನಾಡಿದ್ದಾರೆ .....

ಶ್ರೀ ಎಚ್. ಬಿ. ಕೆಂಬೇಗೌಡ.—ಹಾಗಾದರೆ ಬೇಡವೇ ಸ್ವಾಮಿ ? ತಾವು ಬೇಡ ಎಂದರೆ ನಾನು ಅದಕ್ಕೂ ಸಿದ್ಧ, ಆದರೆ ಕಟ್ಟಕಡೆಯದಾಗಿ ಒಂದು ಮಾತು ಏನೆಂದರೆ ನಮ್ಮ ಪಾರ್ಟಿ ಯವರು ಆಖೈರಿಗೆ ಯಾವ ತೀರ್ಮಾನಕ್ಕೆ ಬರುತ್ತಾರೋ ನಾನು ಅದಕ್ಕೆ ಬದ್ಧನಾಗಿರುತ್ತೇನೆಂದು ಸೇಳಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಮಾನ್ಯ ಉಪಾಧ್ಯಕ್ಷರೇ, ಕೊನೆಗೂ ಒಂದು ಪ್ರಗತಿಪರವಾದ ಲ್ಯಾಂಡ್ ರಿಫಾರಂಸ್ ಬಿಲ್ಲನ್ನು—ಅಂದರೆ 'ಉಳುವವನೇ ಹೊಲದೊಡೆಯ ಎಂಬ ಏನು ಒಂದು ಕೂಗಿತ್ತು ಇಲ್ಲಿಯವರೆಗೂ ಆ ಕೂಗಿಗೆ ಬಗೊಚ್ಚಿ, ಅದಕ್ಕೆ ಒಂದು ಮಾನ್ಯತೆ ಕೊಟ್ಟು ಒಂದು ಪ್ರೋಗ್ರೆಸೀವ್ ಮಸೂದೆಯನ್ನು ಸಭೆಯ ಮುಂದೆ ತಂದಿದ್ದಾರೆ. ಅದಕ್ಕೆ ನಾನು ಮಾನ್ಯ ಕಂದಾಯ ಮಂತ್ರಿಗಳಿಗೆ ಮೊಟ್ಟಮೊದಲನೆಯದಾಗಿ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ. ಆದರೆ ಈ ಮಸೂದೆಯ ಬಗ್ಗೆ ಈಗಾಗಲೇ ಅನೇಕ ಹಿರಿಯ ಮಾನ್ಯ ಸದಸ್ಯರುಗಳು ಮಾತನಾಡಿ ದ್ದಾರೆ - ಅವರು ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ ಇದರಲ್ಲಿ ಒಂದು ಬಹಳ ಮೆಚ್ಚಿಕೊಳ್ಳುವಂಥ ವಿಷಯ ಅಂದರೆ ನಮ್ಮ ಕಂದಾಯ ಮಂತ್ರಿಗಳಲ್ಲಿ ಒಂದು ಬಹಳ ದೊಡ್ಡ ಗುಣವಿದೆ. ಅವರಲ್ಲಿ ಸಹನೆ ಅನ್ನತಕ್ಕದ್ದು ಬಹಳ ದೊಡ್ಡ ಪ್ರಮಾಣದಲ್ಲಿದೆ. ಅವರು ಇಲ್ಲಿ ಭಾಷಣ ಮಾಡತಕ್ಕ ಸದಸ್ಯರು ತಮ್ಮ ಪಕ್ಷದವರಾಗಲಿ, ಬೇರೆ ಪಕ್ಷದವರಾಗಲೀ ಅವರು ಎಷ್ಟೇ ಹೆಚ್ಚೋಜಿನ್ ಸ್ವಾಗಿ ಈ ಮಸೂದೆಯ ಬಗ್ಗೆ ಮಾತನಾಡಿದರೂ ಮಾನ್ಯ ಸಚಿವರು ಮಾತ್ರ ತಮ್ಮ ಸಹನೆಯನ್ನು ಕಳೆದುಕೊಳ್ಳದೆ, ಕಡೆಯಲ್ಲಿ ಅವರು ಈ ಮಸೂದೆಯನ್ನು ನಾನು ಅನುಮೋದಿಸುತ್ತೇನೆ ಎಂದಷ್ಟು ಹೇಳಿದರೆ ಸಾಕೆಂದು ಇರುವಂತೆ ಕಾಣುತ್ತಿದೆ. ಆದರೆ ಈ ಹಿಂದೆ ಮಾತನಾಡಿದ ಮಾನ್ಯ ಹಿರಿಯ ಸದಸ್ಯರು ಏನು ಕೆಲವು ವಿಚಾರಗಳನ್ನು ಹೇಳಿದರು ಅದಕ್ಕೆ ಉತ್ತರವಾಗಿ ನಾನು ಕೆಲವು ವಿಷಯ ಗಳನ್ನಾದರಿಗೆ ತಿಳಿಸಬೇಕಾಗಿದೆ. ಆದರೆ ಈ ಹಿಂದೆ ಮಾತನಾಡಿದ ಮಾನ್ಯ ಸದಸ್ಯರು ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕ ಮೂಕ ಪ್ರಾಣಿ ಆ ದೊಡ್ಡ ರೈತರಲ್ಲಿ ಯಾವ ಒಗ್ಗಟ್ಟಾಗಲೀ ಸಂಘಟನಾ ಶಕ್ತಿಯಾಗಲಿ ಇಲ್ಲದಿರುವುದನ್ನು ಕಂಡುಕೊಂಡು ಸರ್ಕಾರದವರು ಅವರ ಬಗ್ಗೆ ಈ ಭೂಸುಧಾರಣಾ

(ಶ್ರೀ ವಿ. ಎನ್. ಪಾಟೀಲ್)

ಕಾನೂನನ್ನು ತಂದು ಅವರಿಗೆ ಗದಾಪ್ರಹಾರವಾಗುವುದಕ್ಕೆ ಹೊರಟ್ಟಿದ್ದಾರೆ. ಅವರೆ ಇದೇ ತರಹ ಒಂದು ಕಾನೂನನ್ನು ರಾಜ ಮಹಾರಾಜರ ಮೇಲೆ ಪಟವಾ ನಗರಗಳಲ್ಲಿ ಇರತಕ್ಕ ಶ್ರೀಮಂತರ ಬಗ್ಗೆ ತಂದಿದ್ದರೆ ಅವರು ಕೋರ್ಟಿಗೆ ಹೋಗಿ ಇವರ ಪ್ರಯತ್ನಗಳನ್ನು ಮೂಲೆಗುಂಪಾಗಿ ಕೂಡಿಸುತ್ತಿದ್ದರು ಅದಕ್ಕೆ ಸರ್ಕಾರಕ್ಕೆ ಅವರ ಬಗ್ಗೆ ಕಾನೂನು ತರುವುದಕ್ಕೆ ಥೈರ್ಯಸಾಲದೆ ಹಳ್ಳೀ ಜನರ ಬಗ್ಗೆ ಇದನ್ನು ತಂದಿದ್ದಾರೆಂದು ಹೇಳಿದರು. ಅದರೆ ಅವರು ಯಾರ ಪರವಾಗಿ ವಾದಿಸಿದ್ದಾರೋ ಅವರು ಮೂಕ ಪ್ರಾಣಿಗಳಾದರೆ ಇವ್ರು ಅವರ ಕೈಕೆಳಗಿರತಕ್ಕ ಜನರ ಗೋಳೇನಾಗಿರಬೇಕು ? ಅದರೆ ನಮ್ಮ ಇಂಡಿಯಾದೇಶದಲ್ಲಿ ಈ ಬೂಸುಧಾರಣೆ ತಿದ್ದುಪಡಿ ಆಗಿರುವಷ್ಟು ಪ್ರಮಾಣದಲ್ಲಿ ಪ್ರಪಂಚದ ಬೇರಾವ ದೇಶದಲ್ಲೂ ಆಗಿಲ್ಲ ಎಂದರೆ ಅದೇನೂ ಅತಿಶಯೋಕ್ತಿಯಲ್ಲ. ಭೂಮಾಲೀಕರ ಕೆರುಕುಳವನ್ನು ತಡೆಯಲಾರದೆ ಕಾಲಕಾಲಾಂತರಗಳಿಂದ ಈ ಗೇಣೀದಾರ ವರ್ಗ ರಾಜ್ಯದಲ್ಲಿರತಕ್ಕ ಹೈಕೋರ್ಟು ಮತ್ತು ಕಡೆಗೆ ಸುಪ್ರೀಂಕೋರ್ಟಿಗೂ ಹೋಗಿ ಅವರ ಬಗ್ಗೆ ನಡೆಸುತ್ತಿದ್ದ ಅಕ್ರಮ ಅನ್ಯಾಯಗಳನ್ನು ಅವರು ಥಾಲೆಂಜ್‌ಮಾಡದೆ ಬಿಡಲಿಲ್ಲ. ಅವರಲ್ಲಿ ಈ ಒಂದು ಕೂಗು ಇದ್ದುದರಿಂದಲೇ ಆ ಶಕ್ತಿಗಳ ಹಿತ ರಕ್ಷಣೆಗಾಗಿ ನಮ್ಮ ದೇಶದಲ್ಲಿ ಈ ಲ್ಯಾಂಡ್ ರಿಫಾರಂಸ್ ಬಗ್ಗೆ ಜಗತ್ತಿನಲ್ಲಿ ಎಲ್ಲೂ ಆಗದೆ ಇದ್ದಷ್ಟು ಬದಲಾವಣೆಗಳಿಗಿದೆ; ರಿಪೇರಿಯಾಗಿದೆ, ಅದರೆ ಮೊನ್ನೆ ಧಾರ್ವಾಡದಲ್ಲಿ ಒಬ್ಬ ಪ್ರೊಫೆಸರ್ ಹೇಳಿದ್ದರು. ಮಾಡಿ ಮಾಡಿ ಕೆಟ್ಟರು ಮನಸ್ಸಿಲ್ಲದವ ಎಂದು. ಅದರೆ ಈಸಾರ್ತಿ ಮಾತ್ರ ಅಂಥ ಮನಸ್ಸನ್ನು ದೂರ ಮಾಡಿ ಗೇಣೀದಾರರ ಹಿತದಲ್ಲಿ ಸಂಪೂರ್ಣ ಮನಸ್ಸಿಟ್ಟು ಇದನ್ನು ತಂದಿದ್ದಾರೆ. ಅದಕ್ಕೆ ಸಾಕ್ಷಿ ಎಂದರೆ ಈ ಮಸೂದೆಯಲ್ಲಿ ಹಿಂದೆ ಇದ್ದ ಸೆಕ್ಷನ್ 14 ನ್ನು ಸಂಪೂರ್ಣವಾಗಿ ಕಿತ್ತುಹಾಕಿದ್ದಾರೆ. ಇದು ನಮ್ಮ ಕೈಲಿರುವಾಗ ಇವರು ಮಸೂದೆಯ ಗುಣವನ್ನು ತಿಳಿಯುವುದಕ್ಕೆ ಬೇರೆ ಕನ್ನಡಿ ಏಕೆ ಬೇಕು ? ಇದರಲ್ಲಿ ಲ್ಯಾಂಡ್‌ಲಾರ್ಡ್‌ಸಿಸಂನ್ನು ಸಂಪೂರ್ಣವಾಗಿ ಅಬಾಲಿಷ್ ಮಾಡಿದ್ದಾರೆ. ಅದಕ್ಕಾಗಿ ನಾನು ಇದನ್ನು ಸ್ವಾಗತಿಸುತ್ತೇನೆ, ಇದಕ್ಕಾಗಿ ಆ ಜಾಯಿಂಟ್ ಸೆಲೆಕ್ಟ್ ಸಮಿತಿಯವರು ಅಭಿನಂದನಾರ್ಹರು. ಈ ಸಮಿತಿಯವರು ರಾಜ್ಯದಲ್ಲಿ ಯಾರು ನಿಜವಾದ್ದ ದದ್ದುರಿದ್ದಾರೆ, ಯಾರು ನಿಜವಾಗಿಬುದಿಶೂನ್ಯರಿದ್ದಾರೆ ಅವರಿಗೆ ಒಂದು ರಕ್ಷಣೆಯನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ಅಭಿನಂದನೆಗಳು.

ಅದರೆ ಅಗಲೆ ಮಾತನಾಡಿದ ಮಾನ್ಯ ಹಿರಿಯ ಸದಸ್ಯರು ಈ ಮಸೂದೆಯಲ್ಲಿರತಕ್ಕ ಇನ್ನೂ ಕೆಲವು ನ್ಯೂನತೆಗಳೇನಿವೆ ಅವುಗಳನ್ನು ತಿಳಿಸಿದ್ದರೆ ಅವರಿಗೆ ನನ್ನ ಅಭಿನಂದನೆಗಳನ್ನರ್ಪಿಸುತ್ತಿದ್ದೆ ಅದರೆ ಅವರು ಅದನ್ನು ಮಾಡಲಿಲ್ಲ. ಅದರೆ ಅವರು ದದ್ದುರ ನೆಪದಲ್ಲಿ ಗೊಪ್ಪುಖಾಫ್ರುದಂಥ ಜನರ ಹಿತವನ್ನು ರಕ್ಷಣೆ ಮಾಡುವುದಕ್ಕೆ ವಾದಮಾಡುತ್ತಿದ್ದರು. ಅದರೆ ಅವರು ಮಾತನಾಡತಕ್ಕ ಭರದಲ್ಲಿ ಅರ್ಬನ್ ಸೀಲಿಂಗ್ ವಿಚಾರದಲ್ಲಿ ಕೆಲವು ಅಂಶಗಳನ್ನು ತಿಳಿಸಿದರು. ಅವರಲ್ಲೂ ಕೆಲವು ಲೂಪ್ ಹೋಲ್ಸ್‌ಗಳು ಇರಬಹುದು. ಇದ್ದರೆ ಅವುಗಳನ್ನು ನಾವು ಪ್ಲಗ್ ಮಾಡಬೇಕು. ಆದರೆ ಈ ಸಂದರ್ಭದಲ್ಲಿ ಮಾನ್ಯ ಕಂದಾಯ ಸಚಿವರಿಗೆ ನಾನು ಒಂದು ವಿಷಯವನ್ನು ಸೂಚಿಸುವುದಕ್ಕೆ ಇಷ್ಟ ಪಡುತ್ತೇನೆ.— ಅದೇನೆಂದರೆ ಇವರು ಕೇಂದ್ರ ಸರ್ಕಾರಕ್ಕೆ ಬರೆದು ರಾಜ್ಯಾಂಗದಲ್ಲಿರತಕ್ಕ ಆರ್ಟಿಕಲ್ 31(ಸಿ) ಸಂಪೂರ್ಣವಾಗಿ ತೆಗೆದುಹಾಕುವುದಕ್ಕೆ ಸಲಹೆಮಾಡಬೇಕು. ಇಲ್ಲವಾದರೆ ನಾಳೆ ನಮ್ಮ ಸಮಾಜದಲ್ಲಿ ಕೆಲವು ಪ್ರತಿಕ್ರಿಯೆಗಳು ಹುಟ್ಟಿಕೊಂಡು ಇಲ್ಲಿ ಮತ್ತೆ ನಮ್ಮ ಇಂದಿನ ಪ್ರಯತ್ನಗಳನ್ನೆಲ್ಲಾ ಸ್ಟೆಪ್‌ಡೌನ್ ಮಾಡುವುದಕ್ಕೆ ಪ್ರಯತ್ನಗಳನ್ನು ನಡೆಸಬಹುದು, ಅಪ್ಪೀ ಅಲ್ಲದೆ ಇದರ ಬಗ್ಗೆ ಮತ್ತೆ ಬೇರೊಬ್ಬ ಗೋಲ್ಕನಾಥ್ ಹುಟ್ಟಬಹುದು, ಅದಕ್ಕೆ ಅವಕಾಶ ಕೊಡಬಾರದು. ಅಂಥ ಪ್ರತಿಕ್ರಿಯಾಶಕ್ತಿಗಳು ಸಮಾಜದಲ್ಲಿ ಹುಟ್ಟುವುದಕ್ಕೆ ಅವಕಾಶವನ್ನು ಕೊಡಬಾರದು. ಆರ್ಟಿಕಲ್ 31(ಸಿ) ಏನಿವೆ ಅದು ಸೆಲ್ಫ್ ಕಂಟೈನ್ಡ್ ಲಾ ಎಂದು ಅಮೆಂಡ್‌ಮೆಂಟ್ ತರಬೇಕು. ಪುನಃ ಗೋಲಕ್‌ನಾಥ್ ಕೇಸ್ ನಂತಹುದು ಬರಲು ಅವಕಾಶ ಕೊಡಬಾರದು, ಫಲಿವಾರಾರಂಭವರು ವಾದಮಾಡಲು ಅವಕಾಶ ಬೇಡ. ರೈತನಿಗೆ ಉಳುವವರಿಗೆ ಇಂದು ಉಳುವ ಹಕ್ಕು ಜವಿಾನಿನ ಹಕ್ಕು ಬರುವುದು. ಇದನ್ನು ಥಾಲಂಜ್ ಮಾಡಲು ಅವಕಾಶ ಇರಬಾರದು ಇದು ಪವಿತ್ರವಾದ ಕಾಯಿದೆ, ಸ್ಟೇಟಿನ ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಪ್ರಕಾರ ಇದನ್ನು ತರಲಾಗಿದೆ. ನಮ್ಮ ಶಕ್ತಿಮೀರಿ ಇದನ್ನು ತರಲಾಗಿದೆ. ಇದಕ್ಕಾಗಿ ಕಂದಾಯ ಸಚಿವರನ್ನು ಕೇಳುವುದು ಆರ್ಟಿಕರ್ 31(ಸಿ) ಫೂಲ್ ಪ್ರೂಫ್ ಮಾಡಲು ಕೆಲವು ಅಮೆಂಡ್‌ಮೆಂಟ್ ತರಲು ಕೇಂದ್ರ ಸರ್ಕಾರಕ್ಕೆ ಸೂಚನೆ ಮಾಡಬೇಕು ಎಂದು. ಈಗ ಒಂದು ವಿಧವಾದ ಗಾಳಿ ಬೀಸುತ್ತಿದೆ. ಸೆಂಚು ಬಿಸಿಯಾಗಿದೆ, ರೊಟ್ಟಿ ಸುಡಲು ಹದವಾಗಿದೆ, ಇದರ ಸದುಪಯೋಗ ಮಾಡಿಕೊಳ್ಳಬೇಕು. ಇದಕ್ಕೆ ನೀವು ಬೀಜ ಹಾಕಿ ಎಂದು ಹೇಳುತ್ತಿದ್ದೇನೆ. ರೊಟ್ಟಿ ತಿನ್ನಲು ರೈತರು ತಯಾರಿದ್ದಾರೆ, ಅರ್ಧ ಸುಟ್ಟು ವಾಸನೆ ಬರುವುದು

ಬೇಡ. ಲಕ್ಷಾಂತರ ವರ್ಷಗಳಿಂದ ರೈತರು ಹಸಿದಿದ್ದಾರೆ. ಏಕೆ ಭೂಸುಧಾರಣಾ ಕಾಯಿದೆ ತರಬೇಕಾಯ್ತು ಆದರ ಹಿನ್ನೆಲೆ ನೋಡಬೇಕು. ಇದರ ಬಗ್ಗೆ ಹೆಚ್ಚು ಹೇಳುವುದಿಲ್ಲ. ಆದರೆ ಸ್ವಲ್ಪ ಹಿನ್ನೆಲೆ ನೋಡುವುದು ಅಗತ್ಯವಾಗಿದೆ. ಅಗತ್ಯಕ್ಕೆ ತಕ್ಕಂತೆ ಮಾಡಿದ ಕಾಯಿದೆಗಳಲ್ಲಿ ಇದು ಮೊದಲನೆಯದು. ಹಿಂದಿನ ಇತಿಹಾಸ ನೋಡಿ ಪಾಠ ಕಲಿತು ಮುಂದೆ ಒಳ್ಳೆಯ ಇತಿಹಾಸ ಬರಲು ಅವಕಾಶಮಾಡಲಾಗಿದೆ. ಹಿಂದೆ ಜಾತಿಯ ಹೆಸರಿನಲ್ಲಿ ಎಷ್ಟೋ ರಕ್ತಪಾತವಾಗಿದೆ, ಫೂಡಮೆಂಟಲ್ ರೈಟ್ಸ್ ವಿಚಾರದಲ್ಲಿ ಬೇಕಾದಷ್ಟು ಲಿಟಿಗೇಷನ್‌ಗಳಿವೆ. ಈ ಲಿಟಿಗೇಷನ್ಸ್ ತಪ್ಪಬೇಕು, ಇದಕ್ಕೆ ಒಂದು ಬೇಕು. ಸುಪ್ರೀಂ ಕೋರ್ಟು ಒಂದು ತೀರ್ಪನ್ನು ಕೊಟ್ಟಿದೆ. ಆ ವಾತಾವರಣದಲ್ಲಿ ತಕ್ಕ ಕೆಲಸ ಆಗಬೇಕಾಗಿದೆ. ಕೆಲವು ವೆಸ್ಟೆಡ್ ಇಂಟರೆಸ್ಟ್‌ಗಳಿವೆ. ಈಗ ಬೆಳ್ಳಿಮೋಡ ಬರುವ ವೇಳೆ ಬಂದಿದೆ.

ಇಂದು ಹೊಸ ಯುಗ ಜನ್ಮ ತಾಳಿದೆ. ಇಂದು ಹೊಸ ರೀಡರ್‌ಷಿಪ್ ಇದೆ, ಭಾರತದ ಶೇಕಡ 75 ರಷ್ಟಿರುವ ರೈತರು ಅನ್ಯಾಯ ಸಹಿಸುವುದಿಲ್ಲ. ಇಂದು ಹೊಸ ಗಾಳಿ ಬೀಸಿದೆ, ರೆವಲ್ಯೂಷನರಿ ಫ್ರೂಟ್ಸ್ ಬಂದಿವೆ, ಈ ಸಮಯ ಕಳೆದುಕೊಳ್ಳಬಾರದು, ಇದನ್ನು ಕಾಪಾಡಬೇಕು. ಪಟ್ಟಭದ್ರ ಶಕ್ತಿಗಳು ಈಗಲೂ ಬೇಕಾದಷ್ಟಿವೆ. ಇಂಥ ಒಳ್ಳೆಯ ಕಾಯಿದೆ, ಸ್ವಾಗತಾರ್ಹವಾದ ಕಾಯಿದೆ ಬಂದಿರುವಾಗ ಕೆಲವು ವಿಶೇಷ ಸಲಹೆಗಳನ್ನು ಮಾಡಬೇಕಾಗಿದೆ. ಇಂದು ಉಳುವ ರೈತರಿಂದ ಜಮೀನನ್ನು ಕಿತ್ತುಕೊಳ್ಳುವಂತಿಲ್ಲ, ಇದುವರೆಗೂ ಏನಾದರೂ ನೆಪ ಹೂಡಿ ಜಮೀನನ್ನು ಕಿತ್ತುಕೊಳ್ಳಲು ಅವಕಾಶವಿತ್ತು, ಅದನ್ನು ಈಗ ತೆಗೆದುಹಾಕಿದೆ. ಪಿನಿಮಂ ಹೋಲ್ಡಿಂಗಿಗಿಂತ ಕಡಮೆ ಇದ್ದರೆ ಸರಕಾರದಲ್ಲಿ ಹೆಚ್ಚು ಜಮೀನಿದ್ದರೆ ಕೊಡಬಹುದು. ರಿನಮಷನ್ ಹೆಸರಿನಮೇಲೆಕಿಂತು ನೆಪದ ಮೇಲೆ ರಿನಮೆಷನ್ ರೈಟ್ ಇದ್ದುದನ್ನು ತೆಗೆದುಹಾಕಲಾಗಿದೆ. ಇದೇನೂ ಮಹತ್ವದ ವಿಷಯವಲ್ಲ, ಇದನ್ನು ಜಾರಿಗೆ ತರುವ ಮೆಷಿನರಿ ಫೂಲ್ ಪ್ರೂಫ್ ಆಗಿರಬೇಕು. ಪ್ರತಿಯೊಂದು ಕಾನೂನನ್ನೂ ಸರಿಯಾಗಿ ಜಾರಿಗೆ ತರುವ ಅಧಿಕಾರಿಗಳ ಅವಶ್ಯಕತೆಬೇಕು. ಇನ್ನೂ ಸಮ್ಮಲ್ಲಿ ಬ್ರಿಟಿಷರ ಕಾಲದ ಸಂಪ್ರದಾಯವಿದೆ. ಇಂದು ಕೂಡ ಬ್ರಿಟಿಷರ ರಾಜ್ಯವೇ ಇದ್ದಿದ್ದರೆ ಚೆನ್ನಾಗಿತ್ತು, ಎಂದು ಹೇಳುವವರಿದ್ದಾರೆ. ಪ್ರೊಗ್ರೆಸಿವ್ ಅಧಿಕಾರವರ್ಗ ಬೇಕು. ಕಾನೂನನ್ನು ಸರಿಯಾಗಿ ಜಾರಿಗೆ ತರುವವರು ಬೇಕು. ಇದಕ್ಕೆ ಸ್ವಲ್ಪ ಕಮಿಟೆಡ್ ಇರುವವರನ್ನು ಸ್ಕ್ರೀನ್ ಮಾಡಿ. ಅಧಿಕಾರಿಗಳು ಸರಿಯಾದವರು ಬೇಕಾದ ಕಡೆ ಇಲ್ಲದಿದ್ದರೆ ಅವರನ್ನು ಬೇರೆ ಕಡೆಗೆ ವರ್ಗ ಮಾಡುವರು. ಕೆಲವರು ಪಟ್ಟಭದ್ರ ವ್ಯಕ್ತಿಗಳ ವಿಜೆಂಟರು ಲಂಚಕೋರರು ಇದ್ದಾರೆ, ಇಂಥ ಅಧಿಕಾರಿಗಳು ಈ ಕಾಯಿದೆಯನ್ನು ಸರಿಯಾಗಿ ಜಾರಿಗೆ ತರುವುದಿಲ್ಲ. ಅಂಥವರಿಗೆ ಬೇಕಾದರೆ ಅಡೀಷನಲ್ ಪೋಸ್ಟ್ ಕ್ರಿಯೇಟ್ ಮಾಡಿ ಅವರನ್ನು ರಿಲೀಫ್ ವರ್ಕ್ಸ್ ವಗೈರೆಯಂತಾದವು ಇರುವ ಕಡೆಗೆ ಹಾಕಿ. ಈ ಕಾಯಿದೆಯನ್ನು ಸರಿಯಾಗಿ ಜಾರಿಗೆ ತರಲು ಸಮಾಧಾನಪಿರುವ ಮತ್ತು ಯೋಗ್ಯರಾದ ಅಧಿಕಾರಿಗಳನ್ನು ಈ ಕಾನೂನನ್ನು ಜಾರಿಗೆ ತರಲು ಹಾಕಿ. ಇಂದು ಅನ್ನ ಜನರಿಗೆ ಮುಟ್ಟುತ್ತಿಲ್ಲ, ಅನೇಕರು ಹೊಟ್ಟೆಗಿಲ್ಲದೆ ಸಾಯುತ್ತಿದ್ದಾರೆ. ಲಂಚಕೋರ ಅಧಿಕಾರಿಗಳ ವಿಚಾರ ಹೇಳಿದರೆ ಅದರ ಬಗ್ಗೆ ಎನ್‌ಕ್ವೈರಿ ಮಾಡಿ ಅಂದರೆ ಸರಕಾರ ಕ್ರಮ ತೆಗೆದುಕೊಳ್ಳಲು ವಿಚಾರ ಮಾಡುವ 15 ವರ್ಷ ಬೇಕು. ಕೆಲವರು ಅಧಿಕಾರಿಗಳಿರುವುದರಿಂದ ಅನೇಕರಿಗೆ ಆಹಾರಧಾನ್ಯ ಸಿಕ್ಕುತ್ತಿಲ್ಲ. ಭೂಸುಧಾರಣೆಯಲ್ಲಿ ಕೆಲವು ಕಷ್ಟಗಳಿರಬಹುದು, ಇಂದು ಹುಚ್ಚುಮಾಸ್ತಿಗೌಡರು ಮಾಡಿರುವ ಹುಚ್ಚಾಟ ಎಂದೂ ಕೆಲವರು ಹೇಳಬಹುದು. ಈ ಕಾಯಿದೆಯನ್ನು ಜಾರಿಗೆ ತರಲು ಹುಚ್ಚು ಅಧಿಕಾರಿಗಳನ್ನು ನೇಮಿಸದೆ ಎಚ್ಚರಿಕೆ ಇರುವ ಅಧಿಕಾರಿಗಳನ್ನು ಹಾಕಬೇಕು. ಕಮಿಟೆಡ್ ಆಫೀಸರ್‌ಗಳನ್ನು ಈ ಸಭೆಯಲ್ಲಿ ಈ ಕಾಯಿದೆ ಪಾಸ್ ಆದ ಮೇಲೆ ಜಾರಿಗೆ ತರಲು ಹಾಕಿದರೆ ಸರಿಯಾಗಿ ಜಾರಿಗೆ ತರುವರು. ಇಲ್ಲದಿದ್ದರೆ ತೊಂದರೆಯಾಗುವುದು. ಎರಡನೆಯದಾಗಿ ವೆಸ್ಟೆಡ್ ಇಂಟರೆಸ್ಟ್‌ನಿಂದ ಮತ್ತು ರೀ ಆಕ್ಷನರಿ ಪೋರ್ಸಸ್‌ನಿಂದ ತೊಂದರೆ ಬರುವುದು. ಈ ಕಾಯಿದೆ ಜಾರಿಗೆ ಬರುವಾಗ ರಕ್ತಪಾತ ಕೂಡ ಆಗಬಹುದು ಎಂದು ಒಬ್ಬರು ಹೇಳಿದರು. ಭೂಮಿ ಕಸಿದುಕೊಂಡಿರುವವರು ಅದಕ್ಕೆ ಹೋಗುವುದಿಲ್ಲ. ಇಂಥ ವೆಸ್ಟೆಡ್ ಇಂಟರೆಸ್ಟ್ ಜನ ಇದ್ದಾರೆ. ಅವರು ರಕ್ತ ಹರಿಯುವ ಕೆಲಸವನ್ನು ಮಾಡುತ್ತಿದ್ದಾರೆ. ಅದರ ನಿಲುವಾಗಿ ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಅನ್ನು ಕ್ರಿಯೇಟ್ ಮಾಡುತ್ತಾರೆ. ಇದರ ಬಗ್ಗೆ ತಾವು ಬದ್ರವಾದ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಮತ್ತು ಮುಂಜಾಗ್ರತೆ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಪೊಲಿಟಿಕಲ್ ಅಸ್ಯಾಸಿನೇಷನ್ ಆಗುತ್ತವೆ, ರೈತರ ಅನ್ಯಾಸಿನೇಷನ್ ಆಗುತ್ತದೆ. ತಮಿಳುನಾಡಿನಲ್ಲಿ 42 ಜನ ಹರಿಜನರನ್ನು ಸುಟ್ಟರು ಎಂದು ವರ್ತಮಾನ ಇದೆ. ಹರಿಜನರು ಹೊಲಗಳಲ್ಲಿ ದುಡಿಯುವಂಥ ಕಾಲದಲ್ಲಿ ಹರ್ತಾಳ ಮಾಡಿದ್ದಾರೆ, ಇದು ಮಹಾಪಾಪದ ಕೆಲಸ. ಇವತ್ತಿನ ಬಂಡವಾಳಶಾಯಿ ಸಮಾಜದಲ್ಲಿ 42 ಜನರನ್ನು ಸುಟ್ಟರು. ನಮ್ಮ ರಾಜ್ಯದಲ್ಲಿ ಸಾಧುವಂಥ ಪಿತೂರಿ ನಡೆಯಬಹುದು. ಲಾ ಅಂಡ್ ಆರ್ಡರ್ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇಂಟರ್‌ನಲ್ ಸ್ಯಾಬೋಟೇಜ್ ಬಗ್ಗೆ ದಿಟ್ಟವಾದ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

(ಶ್ರೀ ವಿ. ಎನ್. ಪಾಟೀಲ್)

ರೆಂಟ್ ಬಗ್ಗೆ ಇಲ್ಲಿ ಅನಾಮಲಿ ಬಂದಿದೆ. 1961 ರಲ್ಲಿ ಈ ಕಾಯಿದೆ ಪಾಸ್ ಆದರೂ ಕೂಡ 1965 ರ ಅಕ್ಟೋಬರ್ ಎರಡನೇ ತಾರೀಖು ಬಾಪೂಜಿಯವರು ಹುಟ್ಟಿದ ದಿವಸದಲ್ಲಿ ಇದನ್ನು ಜಾರಿಗೆ ತರಬೇಕಾಗಿತ್ತು. ಇಪ್ಪತ್ತಕ್ಕಿಂತ ಮೊದಲು ಕಾಯಿದೆ ಬಂದ ಮೇಲೆ ರೆಂಟಿನ ಬಗ್ಗೆ ಎಷ್ಟೊಪ್ಪೋ ಕೇಸುಗಳು ಬಂದು ಅದೆಲ್ಲಾ ಪ್ರಾಪಿಷನ್ ಪ್ರಕಾರ $\frac{1}{4}$ ಅಥವಾ 1/5 ರೆಂಟ್ ಕೊಡಬೇಕು ಎಂದು ಇತ್ತು. ಇದರ ಬಗ್ಗೆ ಎಷ್ಟೋ ಕಡೆ ಕಹಿಪೀಲ್ಯಾದರರು ತೀರ್ಪು ಕೊಟ್ಟಿದ್ದಾರೆ ಮತ್ತು ಎಷ್ಟೊ ಕಡೆ ಡಿಸಿಷನ್ ಕೊಡಲಿಲ್ಲ. ಅಂಥವುಗಳು ಹೈಕೋರ್ಟಿಗೆ ಬಂದು ಸ್ಟೇ ಆರ್ಡರ್ ಆಗಿ ಹಾಗೆ ಉಳಿದಿವೆ. ಇದಕ್ಕೆ ಸೂಕ್ತ ಉಪಾಯವನ್ನು ಕಂಡು ಹಿಡಿಯಬೇಕಾದರೆ ಯಾರಿಗೂ ತೊಂದರೆ ಹೆಚ್ಚಾಗದಂತೆ ಒಂದು ಪರಿಹಾರವನ್ನು ಕಂಡುಹಿಡಿಯಬೇಕಾದರೆ ನಾನು ಒಂದು ಸಲಹೆಯನ್ನು ಕೊಡಬಯಸುತ್ತೇನೆ. ರೈತರಿಗೆ ನಾವು ಏನು ರೆಂಟ್ ಕೊಟ್ಟಿದ್ದೇವೆಯೋ ಅದನ್ನು ಕಾಂಪನ್ಸೇಷನ್ ಆಗಿ ಟ್ರೀಟ್ ಮಾಡಿದರೆ ಇದರಿಂದ ಯಾರಿಗೂ ಇನ್‌ಜೆಸ್ಟಿಸ್ ಆಗುವುದಿಲ್ಲ. ಮತ್ತು ಹರ್ದರ್ ಲಿಟಿಗೇಷನ್ಸ್ ಆಗುವುದಿಲ್ಲ. ಇವತ್ತಿನದಿವಸ ಯಾವ ಕಾಯಿದೆ ಇತ್ತು ಆ ಕಾಯಿದೆ ಆಧಾರದ ಮೇಲೆ ರೆಂಟ್ ಕೊಡುತ್ತಿದ್ದೇವೆ. ಲ್ಯಾಂಡ್ ಲಾರ್ಡ್‌ಸ್‌ಗೆ ಶಕ್ತಿ ಇದೆ, ಎಲ್ಲರೂ ಒಂದುಕೂಡಿ ಕಾಯಿದೆ ಪಂಡಿತರನ್ನು ಡೆಲ್ಲಿಯಿಂದ ತರಬಹುದು, ಆದರೆ ರೈತಾಪಿ ಜನರು ಎಷ್ಟೊ ದಿವಸಗಳವರೆಗೆ ಕೋರ್ಟಿಗೆ ನುತ್ತಾಡಬೇಕು ಆದ್ದರಿಂದ ಇವರಿಗೆ ಕೊಟ್ಟಂಥ ರೆಂಟರ್ ಅಮೌಂಟ್ ಏನು ಇವೆ ಅದನ್ನು ಕಾಂಪೆನ್ಸೇಷನ್ ಆಗಿ ಮುಟ್ಟಿದೆ ಎಂದು ಒಪ್ಪಿಕೊಳ್ಳೋಣ. ಇದರಲ್ಲಿ ಏನಾದರೂ ಕಾಯಿದೆ ಪ್ರಕಾರ ಅಡ್ಡಿ ಬರುತ್ತದೆ ಎಂದು ರಾ ಡಿಪಾರ್ಟ್‌ಮೆಂಟಿನವರು ಸಲಹೆ ಕೊಟ್ಟಿದ್ದರೆ, ಅಂಥಾದ್ದು ಏನಾದರೂ ಸಲಹೆ ಬಂದರೆ ರಿಟ್ರಾಸ್ಪೆಕ್ಟೀವ್ ಎಫೆಕ್ಟ್ ರೆಂಟ್ ಬಗ್ಗೆ ಎಷ್ಟೊರಮಟ್ಟಿಗೆ ಕೊಡಬೇಕು ಎಂದು ಯೋಚನೆ ಮಾಡಬೇಕು. ರೆಂಟ್ ಬಗ್ಗೆ ರಿಟ್ರಾಸ್ಪೆಕ್ಟೀವ್ ಆಗಿ ಎಫೆಕ್ಟಿಗೆಕೊಟ್ಟರೆ ಬಹಳಮಟ್ಟಿಗೆ ಸಾಲ್ವೆಯರ್ಸಿ ಸವಲತ್ತು ಕೊಟ್ಟಂತಾಗುತ್ತದೆ. ಅದಕ್ಕೆ ಮಾನ್ಯ ರೆವಿನ್ಯೂ ಸಚಿವರು ಇದರ ಬಗ್ಗೆ ಒಂದು ಸಿಂಪಥೆಟಿಕ್ ಅಪ್ರೋಚ್ ಇಟ್ಟುಕೊಳ್ಳುತ್ತಾರೆ ಎಂದು ನಮ್ಮ ಪಾರ್ಟಿ ವತಿಯಿಂದ ನಂಬುತ್ತೇವೆ. ನಂಬಲೇಬೇಕಾಗುತ್ತದೆ ಯಾವ ಅಪ್ರೋಚ್ ಇಟ್ಟುಕೊಂಡು ಕಾಯಿದೆ ಪಾಸ್ ಮಾಡೋಣ ಎಂದು ಹೊರಟಿದ್ದಾರೋ ಈ ಒಂದು ಬೆನಿಫಿಟ್ಸ್ ಯಾರಿಗೆ ಸಿಕ್ಕಬೇಕಾಗಿದೆ ಎಂದರೆ, ಲ್ಯಾಂಡ್‌ಲೆಸ್ ಮತ್ತು ಟೆನೆಂಟ್ಸ್ ಇವರಿಗೆ ಇದರ ಒಂದು ಬೆನಿಫಿಟ್ ಸಿಕ್ಕಬೇಕಾಗಿದೆ, ಅದು ಸಿಕ್ಕದಿದ್ದರೆ, ಇದನ್ನು ಯಾರ ಸಲುವಾಗಿ ಮಾಡಿದಂತಾಗುತ್ತದೆ? ಇಂಥ ಕೇಸುಸ್ ನಾರ್ತ್ ಕೆನರಾ, ಮತ್ತು ಸೌತ್ ಕೆನರಾ, ಶಿವಮೊಗ್ಗ ಡಿಸ್ಟ್ರಿಕ್ಟ್‌ಗಳಲ್ಲಿ ಪೆಂಡಿಂಗ್ ಆಗಿ ಹಾಗೆ ಉಳಿದಿವೆ. ಇದರಿಂದ ಸಾವಿರಾರು ಜನಕ್ಕೆ ತೊಂದರೆಯಾಗಿದೆ. ಇದರ ಬಗ್ಗೆ ತೀವ್ರವಾಗಿ ಆಲೋಚನೆ ಮಾಡಬೇಕು ಎಂದು ನಾನು ಮನವಿಮಾಡಿಕೊಳ್ಳುತ್ತೇನೆ.

ಎರಡನೆಯದು, ಷೆಡ್ಯೂಲ್ ಏನು ಒಂದು ಟೇಬಲ್ ಮಾಡಿದ್ದೀರಿ, ಅದು ನನ್ನ ದೃಷ್ಟಿಯಿಂದ ನೋಡಿದರೆ ಓಬಿರಾಯನ ಕಾಲದ ಟೇಬಲ್ ಎಂದು ಅನ್ನಿಸುತ್ತದೆ. ಆಫೀಸರ್ಸ್ ಫಿಗರ್ಸ್ ಏನು ಕೊಟ್ಟಿದ್ದಾರೆ ಅದು ಯಾವ ಬೇಸಿಸ್ ಮೇಲೆ ಬಂತು? ಡ್ರಾಟ್ ಅಫೆಕ್ಟೆಡ್ ಏರಿಯಾದ ಬಗ್ಗೆ ಫಿಗರ್ಸ್ ಕೊಡುವಾಗ್ಗೆ ಬೀದರ್ ಡಿಸ್ಟ್ರಿಕ್ಟ್ ಬಿಟ್ಟು ಹೋಗಿದೆ, ಅದನ್ನು ನಾನು ಪ್ರಿಂಟರ್ಸ್ ಡೆವಿರ್ ಎಂದು ತಿಳಿದುಕೊಂಡಿದ್ದೆ. ಆದರೆ ಡಿಸ್ಟ್ರಿಕ್ಟ್ ಹೆಸರೇ ತಪ್ಪಿದೆ. ತಾಲ್ಲೂಕು ಹೆಸರು ತಪ್ಪಿದೆ ಎಂದರೆ ಎಕ್ಸೇಕ್ ಆಗಿದೆ ಎಂದು ತಿಳಿದುಕೊಳ್ಳಬಹುದು. ಸ್ಟೆಂಟಿಫಿಕ್ ಬೇಸಿಸ್ ಮೇಲೆ, ಸ್ಟೆಂಟಿಫಿಕ್ ಅಪ್ರೋಚ್ ನಲ್ಲಿ ನೋಡಬೇಕು, ಎಷ್ಟೊ ಜಿಲ್ಲೆಗಳು ಇಂಥಾವು ಇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಜೊತೆಯಲ್ಲಿ ಸೇರಿಸಿದರೆ?

ಶ್ರೀ ವಿ. ಎನ್. ಪಾಟೀಲ್.—ಸೇರಿಸುವುದು ಬೇಡ, ನಾವು ಕೊಡಬೇಕಾದ ಸವಲತ್ತು ಯಾರಿಗೆ ಸಲ್ಲುತ್ತದೆ ಅಂಥವರಿಗೆ ಕನ್‌ಸೇಷನ್ ಕೊಡಬೇಕು, ಯಾರಿಗೆ ಅರ್ಹತೆ ಇದೆ ಅವರಿಗೆ ಕೊಡಬೇಕು. ಒಂದೆ ಡಿಸ್ಟ್ರಿಕ್ಟ್‌ನಲ್ಲಿ ಕೆಲವು ತಾಲ್ಲೂಕುಗಳು ಬೆನಿಫಿಷಿಯರೀಸ್ ಕೆಲವು ತಾಲ್ಲೂಕುಗಳು ನಾನ್ ಬೆನಿಫಿಷಿಯರೀಸ್ ಇರಕೂಡದು. ಆದ್ದರಿಂದ ಇದನ್ನು ರೀ ಡ್ರಾಫ್ಟ್ ಮಾಡಬೇಕು. As it is it should be scrapped ಎಂದು ನನ್ನ ಸಲಹೆ.

ಅಮಲ್ದಾರರಿಗೆ ಅಧಿಕಾರ ಕೊಡುವ ಬಗ್ಗೆ ಅನೇಕ ಮಿತ್ರರು ಸಲಹೆ ಮಾಡಿದ್ದಾರೆ. ಅವರು ಒತ್ತಾಯಕ್ಕೆ ಒಳಗಾಗುತ್ತಾರೆ, ಅಸಿಸ್ಟೆಂಟ್ ಕಮಿಷನರ್ ಅವರು ಒತ್ತಾಯಕ್ಕೆ ಒಳಗಾಗುವುದಿಲ್ಲ ಎಂದು ಹೇಳಿದ್ದಾರೆ. ಇವರು ಪ್ರಮೋಟ್ ಆದಕೂಡಲೇ ಅವರಲ್ಲಿ ಲೋಯಲ್ ಪ್ರಪರ್ ಬರುವುದಿಲ್ಲ. ಟಾಪ್ ಕ್ಲಾಸ್‌ನಿಂದ ಪ್ರಪರ್ ಬಂದಿದ್ದರಿಂದ ಈ ಪಾಲಿಟಿಕ್ಸ್ ಜೀವಂತವಾಗಿದೆ ಮತ್ತು ಇವತ್ತಿನ ತನಕ ಬಂದಿದೆ. ಈ ಪ್ರಪರ್ಸ್ ಬಂದಮೇಲೆ ಎಕ್ಸ್‌ಪ್ಲಾಯಿಟರ್ಸ್‌ಗೆ ಓಟು ಮಾಡುವುದು ಕಾರಣ

ವಾಗಿದೆ. ಕಳ್ಳತನ ಹೆಚ್ಚುಮಾಡಿ ಇಂಡಿಯನ್ ಪೀನಲ್ ಕೋಡ್ ಅಬಾಲಿಷ್ ಮಾಡಿ ಎಂದು ಹೇಳಿದಂತಾಗುತ್ತದೆ. ಅಮಲ್ದಾರರಿಗೆ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿ, ಕಾನೂನಿನಲ್ಲಿ ಏನು ಪವರ್ಸ್ ಇರುತ್ತದೋ ಅವರಿಂದ ಅನಾಹುತವಾಗುತ್ತದೆ ಎಂದು ಒಪ್ಪುವದಕ್ಕಾಗುವುದಿಲ್ಲ. ಆದರೆ ತಹಸೀಲ್ದಾರರು ಕೆಲವು ತಾಲ್ಲೂಕುಗಳಲ್ಲಿ ಅವರ ರೆಗ್ಯುಲರ್‌ವರ್ಕ್ ನೋಡಿಕೊಂಡು ಲ್ಯಾಂಡ್ ರಿಫಾರಮ್ಸ್ ವರ್ಕ ನೋಡುವುದಕ್ಕಾಗುವುದಿಲ್ಲ. ಆದ್ದರಿಂದ ಡಿಸ್ಟ್ರಿಕ್ಟ್‌ಗೆ ಒಬ್ಬರು ಅಥವಾ ಇಬ್ಬರು ಅವಶ್ಯಕತೆಗೆ ಅನುಗುಣವಾಗಿ, ಸ್ಪೆಷಲ್ ಅಸಿಸ್ಟೆಂಟ್ ಕಮಿಷನರ್ ಅನ್ನು ಕೊಟ್ಟರೆ ಅವರು ಕಾಯಿದೆಯ ಪ್ರಕಾರ ಪೂರ್ತಿ ಡಿಸ್ಟ್ರಿಕ್ಟನ್ನು ಟೂರ್ ಮಾಡುವದಕ್ಕೆ ಅವರಿಗೆ ಒಂದು ಜೂರಿಸ್‌ಡಿಕ್ಷನ್ ಅನ್ನು ಕ್ರಿಯೇಟ್ ಮಾಡಿದರೆ ನನ್ನ ಅಭ್ಯಂತರವಿಲ್ಲ, ಈ ರೀತಿ ಮಾಡಬೇಕು. ಅಮಲ್ದಾರರ ಹತ್ತಿರ ಪವರ್ ಕೊಟ್ಟರೆ ವೆಸ್ಟೆಡ್ ಇಂಟರೆಸ್ಟ್ ಇರುವ ಜನಕ್ಕೆ ದುಡ್ಡು ಇರುತ್ತದೆ, ಅವರು ಲೀಗರ್ ಎಕ್ಸ್‌ಪರ್ಟ್ಸ್ ಇಟ್ಟುಕೊಳ್ಳಬಹುದು, ಮತ್ತು ಅವರೇ ಸ್ವಂತವಾಗಿ. ಅಬ್ಜೆಕ್ಷನ್ಸ್ ರೈಸ್ ಮಾಡಿ ಸ್ಟೇಟ್‌ಮೆಂಟ್ ಡ್ರಾಫ್ಟ್ ಮಾಡಿ ಕೊಡುವುದು ನಮ್ಮ ಗಮನಕ್ಕೆ ಬಂದಿದೆ. ಯಾರು ಅಶಕ್ತರು ಇದ್ದಾರೆ, ಅವರಿಗೆ ಈ ಕಾಯಿದೆ ಜ್ಞಾನ ಇರುವುದಿಲ್ಲ, ಯಾರು ಬುದ್ಧಿಜೀವಿಗಳಾಗಿದ್ದಾರೆ ಅವರಿಗೆ ಸಹಾಯ ಕೊಡುವಂಥ ಸೆಕ್ಷನ್ ನಮ್ಮಲ್ಲಿದೆ. ಆದರೆ ಅಶಕ್ತರಿಗೆ ಲಾಯರ್ ಹತ್ತಿರ ಸಹಾಯ ಪಡೆದುಕೊಳ್ಳಬೇಡಿ ಎನ್ನತಕ್ಕದ್ದು ಕಾಯಿದೆಯಲ್ಲಿರುವುದು ಸರಿಯಲ್ಲ. ಇದರಿಂದ ಲಾಯರ್ ಟೆನಂಟ್ ಹರವಾಗಿ ಹಾಜರಾಗುವುದಕ್ಕೆ ಆಗುವುದಿಲ್ಲ. ಇದರಿಂದ ಡಿಸ್ಕ್ರಿಮಿನೇಷನ್ ಆಗುತ್ತದೆ. ಆದ್ದರಿಂದ ಅಶಕ್ತರು ಡಿಫೆಂಡ್ ಮಾಡಿಕೊಳ್ಳುವದಕ್ಕೆ ಒಂದು ಅವಕಾಶವನ್ನು ಈ ಕ್ಲಾಸ್‌ನಲ್ಲಿ ಸೇರಿಸಬೇಕು. ಪವರ್ ಟು ಅಪಿಯರ್, ಇದನ್ನು ರಿಮೂವ್ ಮಾಡಿದರೆ, ಇದರಿಂದ ಡಿಪ್ರೆಸ್ಡ್ ವರ್ಗಕ್ಕೆ ಹೆಚ್ಚು ಲಾಭವಾಗುತ್ತದೆ ಎಂದು ನನ್ನ ವಿಚಾರವಿದೆ.

5-30 P. M.

ನೀವು ಕಾಫಿ ಪ್ಲಾಂಟೇಷನ್‌ಗಳಿಗೆ ಯಾವ ಸವಲತ್ತು ಕೊಟ್ಟಿದ್ದೀರಿ. ಆ ಸವಲತ್ತು ಅಡಿಕೆ ತೋಟಗಳಿಗೆ ಮತ್ತು ತೆಂಗಿನ ತೋಟಗಳಿಗೆ ಯಾತಕ್ಕೆ ಕೊಡಕೂಡದೆಂಬ ವಾದ ಈ ಮನೆಯಲ್ಲಿ ಬಂತು ? ಕಾಫಿ ಪ್ಲಾಂಟೇಷನ್ನುಗಳಿಗೆ ಸವಲತ್ತು ಕೊಟ್ಟಿದ್ದು ದೊಡ್ಡ ತಪ್ಪು. ಇದನ್ನು ಪರ್ಯಾಲೋಚನೆ ಮಾಡಿ ಕಾಫಿ ತೋಟಗಳಿಗೆ ನ್ಯಾಷನಲೈಜ್ ಮಾಡಲೇಬೇಕಾಗುತ್ತದೆ. ಪ್ಲಾಂಟೇಷನ್ ಇರುವ ಜಮೀನನ್ನು ನ್ಯಾಷನಲೈಜ್ ಮಾಡಿ ಸರ್ಕಾರ ವಹಿಸಿಕೊಂಡು ಅದನ್ನು ನ್ಯಾಷನರ್ ಪ್ರಾಪರ್ಟಿ ಎಂದು ಮಾಡಬೇಕು, ಫಂಡಮೆಂಟಲ್ ಬೇಸಿಸ್ ಆಫ್ ಲ್ಯಾಂಡ್ ರಿಫಾರಸ್ ಏನು ಎಂದರೆ ಎಕ್ಸಪ್ಲಾಯಿಂಟಿಂಗ್ ಕ್ಲಾಸ್ ಹತ್ತಿರ ಮೀನ್ಸ್ ಆಫ್ ಪ್ರೊಡಕ್ಷನ್ ಬಿಡಕೂಡದು, ಎಕ್ಸಪ್ಲಾಯಿಟೇಷನ್ನಿಗೆ ಸ್ಕೋಪ್ ಕೊಡಕೂಡದು. ಸೋಶಿಯಲಿಜಂ ತತ್ವ ಅದು ಇದೆ. ಜನರಿಗೆ 10-20 ಎಕರೆ ಜಮೀನು ಹಂಚುವಾಗ, ಸಾವಿರಾರು ಎಕರೆ ಇರುವ ಕಾಫಿ ಪ್ಲಾಂಟೇಷನ್ನುಗಳನ್ನು ಸ್ಯಾಟ್ ಫ್ರೀ ಬಿಡುತ್ತೀರಿ ಎಂದು ಹೇಳಿದರೆ ತಪ್ಪಾಗುತ್ತದೆ. ದೊಡ್ಡ ಪರ್ಸನಲ್ಟೆಕ್ವಿವ್ ಮುಂದೆ ಮುಂದೆ ಇಟ್ಟು ಕೊಳ್ಳಬೇಕು. ಕಾಫಿ ಪ್ಲಾಂಟೇಷನ್‌ಗಳನ್ನು ನ್ಯಾಷನಲೈಜ್ ಮಾಡಬೇಕು. ಆದನ್ನು ಮಾಡಲು ಕೇಂದ್ರ ಸರ್ಕಾರ ಡಿಲೇ ಮಾಡಿದರೆ ರಾಜ್ಯ ಸರ್ಕಾರದವರು ಇದರ ಬಗ್ಗೆ ಬೇಗನೇ ಸ್ಟೆಪ್ ತೆಗೆದುಕೊಳ್ಳಿ ಎಂದು ಒತ್ತಾಯ ಮಾಡುವುದರಲ್ಲಿ ಹಿಂದು ಮುಂದು ನೋಡಿದರೆ, ಸರ್ಕಾರದ ಇನ್‌ಟೆನ್‌ಷನ್ ಮೇಲೆ ಸರ್ಕಾರದ ಬೋನಾಫೈಡೀಸ್ ಮೇಲೆ ಡೌಟ್ ಮಾಡಬೇಕಾಗಿ ಬರುತ್ತದೆ. ಪ್ಲಾಂಟೇಷನ್ ಸ್ಯಾಟ್ ಫ್ರೀ ಬಿಟ್ಟಿದ್ದೇವೆ ಎಂದು ತಿಳಿದುಕೊಳ್ಳುವುದು ತಪ್ಪು. ಅದನ್ನು ನ್ಯಾಶನಲೈಜ್ ಮಾಡುವುದು ನಿಮ್ಮ ಮುಖ್ಯ ಗುರಿ ಇದೆ ಎಂದು ರೆವಿನ್ಯೂ ಮಿನಿಸ್ಟರ್ ಉತ್ತರ ಕೊಡುವಾಗ ಹೇಳಬೇಕು.

ಇನ್ನು ಮಠಾಧೀಶ್ವರರ ಬಗ್ಗೆ ಒಂದು ಮಾತು ಕೆಲವರು ಹೇಳುತ್ತಾರೆ, ಮಠಾಧೀಶ್ವರರು ಎಷ್ಟು ಪುಣ್ಯದ ಕೆಲಸ ಮಾಡುತ್ತಾರೆ. ಎರಡು ಸಾವಿರ ಮಕ್ಕಳುಗಳಿಗೆ ಊಟ ಹಾಕುತ್ತಾರೆ ಎಂದು. ಧರ್ಮದ ಹೆಸರಿನಲ್ಲಿ ಜಾತಿ ಹೆಸರಿನಲ್ಲಿ ತಮ್ಮ ಕೈಯಲ್ಲಿ ಬಹಳ ಸ್ವತ್ತು ಇಟ್ಟುಕೊಂಡು ದುರುಪಯೋಗ ಮಾಡುವ ಜಗದ್ಗುರುಗಳು ಬಹಳ ಮಂದಿ ಇದ್ದಾರೆ. ರೆವಿನ್ಯೂ ಸಚಿವರು ಈ ಬಗ್ಗೆ ಸ್ಪಲ್ಪ ಸೆನ್‌ಸಿಟಿವ್ ಇದ್ದಾರೆ. ಪೊನ್ನೆ ದಿವಸ ಮನುಷ್ಯನ ಉದ್ಧಾರ ದೇವರು ಮಾಡಬೇಕು. ದೇವರು ಉದ್ಧಾರ ಮನುಷ್ಯ ಮಾಡುವುದು ಸಾಧ್ಯವಿದೆಯೇ ಎಂದು ಹೇಳಿದಾಗ ಅವರ ಮನಸ್ಸಿಗೆ ನೋವು ಆಯಿತು. ದೇವರ ಮೇಲೆ ನಿಮಗೆ ಇರುವ ನಂಬಿಕೆ ಬಗ್ಗೆ ನಾನು ಇಂಟರ್ ಫಿಯರ್ ಮಾಡುವುದಿಲ್ಲ. ಕೆಲವರು ದೇವರ ಹೆಸರಿನಲ್ಲಿ ದುರುಪಯೋಗ ಮಾಡುತ್ತಿದ್ದಾರೆ ಎನ್ನುವುದಕ್ಕೆ ನಿಮ್ಮ ಮನಸ್ಸು ಒಪ್ಪುತ್ತದೆ ಎಂದು ನಾನು ನಂಬಿಕೊಂಡಿದ್ದೇನೆ. ಮಠಾಧೀಶ್ವರರು ಹೈಸ್ಕೂಲ್ ಕಾಲೇಜುಗಳನ್ನು ಫಿಲಾಂತ್ರಫಿಕ್ ಬೇಸಿಸ್ ಮೇಲೆ ನಡೆಸಿಕೊಂಡು ಹೋಗುವುದರಲ್ಲಿಯೂ

(ಶ್ರೀ ವಿ. ಎನ್. ಪಾಟೀಲ್)

ಕೂಡ ಅವರ ಏಗೋ ಇದೆ. ಕಾಲೇಜು ನಡೆಸುವುದರಲ್ಲಿ ಅದು ತನ್ನ ಹೆಸರಿನ ಮೇಲೆ ನಡೆಯ ಬೇಕು ಎನ್ನುವುದು ಕೆಲವು ಮಹಾಧೀಶ್ವರರ ಮನಸ್ಸಿನಲ್ಲಿ ಇದೆ. ಸಾಮಾಜಿಕ ಸೇವೆ ಸಲ್ಲಿಸುತ್ತೇವೆಂದು ಹೇಳುವುದಕ್ಕಿಂತ ಸಂಸ್ಥೆ ತನ್ನ ಹೆಸರಿನಲ್ಲಿ ಇರಬೇಕು ಎಂದು ಎಗೋ ಇರುತ್ತದೆ. I am doing my duty as a humble fry ಎಂದು ಹೇಳುವುದಕ್ಕಿಂತ ನನ್ನನ್ನು ಬಿಟ್ಟರೆ ಮತ್ತೆ ಯಾರು ಮಾಡುತ್ತಾರೆ ಎಂದು ಹೇಳುವವರು ಜಾಸ್ತಿ ಅನ್ಯಾಯ ಮಾಡಿದ ವರ್ಗಕ್ಕೆ ಬುದ್ಧಿ ಜೀವ ಕೊಡಿಸುವುದು ನಮ್ಮ ಕರ್ತವ್ಯ. ನರ್ಸ್ ಸ್ವತ್ತನ್ನು ತಮ್ಮ ಕಂಟ್ರೋಲ್‌ನಲ್ಲಿ ಇಟ್ಟುಕೊಂಡು ಅದರಲ್ಲಿ ಸ್ವಲ್ಪ ಭಾಗವನ್ನು ಕೆಲವರಿಗೆ ಹಂಚಿದ್ದೇವೆ ಎಂದು ಹೆಸರು ಗಳಿಸಿರಬಹುದು. ಇವು ಬೆಟರ್ ಮ್ಯಾನೇಜ್ಡ್ ಇನ್‌ಸ್ಟಿಟ್ಯೂಷನ್ಸ್. ಗುರುಗಳ ಶಾಪ ಬರಬಿರಲಿ, ಗುರುಗಳ ಆಶೀರ್ವಾದ ಬೇಕು ಎಂದು ಈ ಸ್ಕೂಲು ಮತ್ತು ಕಾಲೇಜುಗಳ ಬಗ್ಗೆ ಏನಾದರೂ ಸಚಿವರು ಸ್ವಲ್ಪ ಹೆಜ್ಜೆ ಇಟ್ಟರೆ ಅದರಿಂದ ಪ್ರಯೋಜನವಾಗಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ದೇವರಲ್ಲಿ ಇರತಕ್ಕ ನಂಬಿಕೆಗೂ ಮಠಗಳ ಸ್ವಾಧೀನ ದಲ್ಲಿರತಕ್ಕ ಜಮೀನಿಗೂ ವ್ಯತ್ಯಾಸವಿದೆ. ಈಗಾಗಲೇ ಗೇಣಿ ಮಾಡತಕ್ಕ ೫ ಎಕರೆ ಜಮೀನು ಅಗಿರಬಹುದು ಅಥವಾ ಅವರದೇ ಸ್ವಂತ ಮಾಡುತ್ತಾ ಇರತಕ್ಕ ಜಮೀನುಗಳು ಆಗಿರಬಹುದು, ಯಾವುದೇ ವಿಷಯದಲ್ಲಿ ಸರ್ಕಾರದ ಅಭಿಪ್ರಾಯ ಏನು ಎನ್ನುವುದು ಸ್ಪಷ್ಟವಾಗಿದೆ. ಮತ್ತು ಮನೂಥಾ ಕಾನೂನಿನಲ್ಲಿಯೂ ಕೂಡ ಸ್ಪಷ್ಟವಾಗಿದೆ. ಅದಕ್ಕೂ ನನಗೆ ದೇವರಲ್ಲಿ ಇರತಕ್ಕ ನಂಬಿಕೆಗೂ ಸಂಬಂಧವಿಲ್ಲ ಎನ್ನುವುದು ಸ್ಪಷ್ಟವಾಗಿ ಸಭೆಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

